ಶಾಸಕರುಗಳಿಗೆ ಸರಿಯಾದ ರೀತಿ ಅವಕಾಶಗಳು ಸಿಗಬೇಕು. ಯಾರಿಗೆ ಎಷ್ಟು ಸಮಯ ನಿಗದಿಪಡಿಸುತ್ತೀರಿ, ಹೇಗೆ ನಿಗದಿಪಡಿಸುತ್ತೀರಿ ಎಂಬುದು ನಿಮಗೆ ಬಿಟ್ಟ ತೀರ್ಮಾನ. ಅದನ್ನು ನಾನು ಪ್ರಶ್ನಿಸವುದಿಲ್ಲ, ಆ ಅಧಿಕಾರವೂ ನನಗಿಲ್ಲ. ಆದರೆ, ಎಲ್ಲರಿಗೂ ಸರಿಯಾದ ಸಮಯ ನಿಗದಿಪಡಿಸಿಕೊಡುವ ಮೂಲಕ ವಿಷಯಗಳನ್ನು ಪ್ರಸ್ತಾಪಿಸುವುದಕ್ಕೆ ಅವಕಾಶ ಕಲ್ಪಿಸಿಕೊಡುವುದು ತಮ್ಮ ಕರ್ತವ್ಯವಾಗಿದೆ. ಈ ದಿಸೆಯಲ್ಲಿ ನಾನು ಮತ್ತೊಮ್ಮೆ ತಮಗೆ ನೆನಪಿಸಲು ಇಷ್ಟಪಡುತ್ತೇನೆ.

8. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ–ಮುಂದು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ, ಶೀಘ್ರವಾಗಿ ತೀರ್ಮಾನ ಕೈಗೊಳ್ಳಬೇಕಾಗಿರುವ ಕೆಲವು ವಿಷಯಗಳನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳೆ, ಗ್ರಾಮ ಪಂಚಾಯತ್ ಚುನಾವಣೆ ಬರುತ್ತಿದೆ. ಕೆಎಎಸ್ ಎಗ್ಸಾಮ್ಸ್ ನಡೆಯುತ್ತದೆ. ಅದು ಕ್ಲಾಷ್ ಆಗಬಾರದು. ಒಂದು ಕೆಎಎಸ್ ಪರೀಕ್ಷೆಯನ್ನು ಮುಂದೆ ಹಾಕಲಿಕ್ಕೆ ಹೇಳಬೇಕು. ಇಲ್ಲದಿದ್ದರೆ, ಈ ಗ್ರಾಮ ಪಂಚಾಯತ್ ಚುನಾವಣೆಯ ಸಂದರ್ಭದಲ್ಲಿ ಅದು ಕ್ಲಾಷ್ ಆದಾಗ ಪರೀಕ್ಷೆ ತೆಗೆದುಕೊಳ್ಳುವವರಿಗೆ ತೊಂದರೆಯಾಗುತ್ತದೆಂದು ತಮ್ಮ ಗಮನಕ್ಕೆ ತರುತ್ತಾ, ದಯವಿಟ್ಟು ಇದರ ಬಗ್ಗೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮಗೆ ತಿಳಿಸಲು ಇಚ್ಛೆಪಡುತ್ತಿದ್ದೇನೆ. ನಿನ್ನೆ ಮಾನ್ಯ ಮಾಧುಸ್ವಾಮಿಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಚೀಫ್ ಇಂಜಿನಿಯರ್ ಪೋಸ್ಟ್ ಎಷ್ಟು ವೇಕೆಂಟ್ ಇದೆ ಎಂದು ಕೇಳಿದರು. ಚೀಫ್ ಇಂಜಿನಿಯರ್ ಪೋಸ್ಟ್ ವೇಕೆಂಟ್ ಇದ್ದರೂ ಸರ್ಕಾರದಲ್ಲಿ ಏನೂ ತೊಂದರೆಯಾಗದಿದ್ದರೆ, ಅಷ್ಟು ಪೋಸ್ಟ್ ಕ್ರಿಯೇಟ್ ಮಾಡುವುದು ಏಕೆ? ಅಷ್ಟು ಪೋಸ್ಟ್ ಅಗತ್ಯವಿಲ್ಲದಿದ್ದರೆ, ಪೋಸ್ಟ್‌ಗಳನ್ನು ಅಬಾಲಿಷ್ ಮಾಡಿ. ಅಧಿಕಾರಿಗಳಿಗೋಸ್ಕರ ಪೋಸ್ಟ್ ಕ್ರಿಯೇಟ್ ಮಾಡಬೇಡಿ. ಪೋಸ್ಟ್‌ಗಳನ್ನು ಅಬಲಿಷ್ ಮಾಡಿ. ಸರ್ಕಾರಕ್ಕೂ ಹಣವನ್ನು ಉಳಿಸಲು ಸಾಧ್ಯವಾಗುತ್ತದೆ. ಅದಕ್ಕೋಸ್ಕರ, ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಈ ಒಂದು ಪೋಸ್ಟ್‌ಗಳ ಬಗ್ಗೆ ಕೇಳುವುದೇನೆಂದರೆ, ದಯವಿಟ್ಟು ನೀವು ಫಿಲ್–ಅಪ್ ಮಾಡಿ, ಬೇಡದಿದ್ದರೆ ಅಬಾಲಿಷ್ ಮಾಡಿ. ಎರಡರಲ್ಲಿ ಒಂದಾಗಬೇಕಾಗುತ್ತದೆ. ರಾಜ್ಯಪಾಲರ ಭಾಷಣ ಇದು ಸರ್ಕಾರದ ಪಕ್ಷಿನೋಟ ಅಥವಾ ದಿಕ್ಸೂಚಿ. ಹಿಂದೆ ಮಾಡಿದ ಕೆಲಸಗಳು, ಮುಂದೆ ಏನೇನು ಮಾಡಬೇಕೆನ್ನುವುದು. ಹಿಂದೆ ಮಾಡಿದ ಕೆಲಸಗಳ ಬಗ್ಗೆ ಅನೇಕ ವಿಷಯಗಳನ್ನು ಈ ಒಂದು ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದಾರೆ. ಆದರೆ, ಮುಂದೆ ಏನನ್ನು ಮಾಡಬೇಕೆನ್ನುವ ಬಗ್ಗೆ ಹೆಚ್ಚು ಮಾಹಿತಿ ಕೊಟ್ಟಿಲ್ಲ. ಇದೆಲ್ಲದರಲ್ಲಿ ಪ್ರಮುಖವಾಗಿ ನಾನು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವುದೆಂದರೆ, ಬಹಳ ಯಶಸ್ಸನ್ನು ಕಂಡಂಥದ್ದು ಯಶಸ್ವಿನಿ. ಯಶಸ್ವಿನಿ ಕಾರ್ಯಕ್ರಮವನ್ನು ಏನು ತಾವು ತಂದಿದ್ದೀರಿ, ಅದನ್ನು ಅನ್–ಆರ್ಗನೈಜ್ಡ್ ಸೆಕ್ಟಾರ್ ಮತ್ತು ಕೃಷಿ, ಕೂಲಿ ಕಾರ್ಮಿಕರಿಗೆ ಎಕ್ಸ್‌ಟೆಂಡ್ ಮಾಡುತ್ತೇವೆಂದು ಹೇಳಿದಿರಿ. It is a very good decision. ಆದರೆ, ಯಾವಾಗ ಅವರು ಆಸ್ಪತ್ರೆಗೆ ಸೇರುತ್ತಾರೆ, ಆಸ್ಪತ್ರೆಗೆ ಸೇರಿದ ಕೂಡಲೇ ಅವರು ಆಸ್ಪತ್ರೆಯಿಂದ ವರದಿಯನ್ನು ಕಳುಹಿಸುತ್ತಾರೆ, ಆಗ ಹಣವನ್ನು ಬಿಡುಗಡೆ ಮಾಡುವಂಥ ವ್ಯವಸ್ಥೆ ಆಗಬೇಕು. ವರದಿ ಹೋದ ನಂತರ ಒಂದು ವಾರ ಆಗುವುದಿಲ್ಲ, 20 ದಿವಸ ಆಗುವುದಿಲ್ಲವೆಂದರೆ ಶಸ್ತ್ರ ಚಿಕಿತ್ಸೆ ಈ ಹಣಕ್ಕೋಸ್ಕರ ಕಾಯುವುದಿಲ್ಲ. ದಯವಿಟ್ಟು, ಕೆಲಸ ಮಾಡುತ್ತಿಲ್ಲವೆಂದು ಹೇಳುವುದಿಲ್ಲ. ಅದಷ್ಟು ಶೀಘ್ರದಲ್ಲಿ ಹಣವನ್ನು ಆಸ್ಪತ್ರೆಗೆ ಮುಟ್ಟಿಸುವ ವ್ಯವಸ್ಥೆಯನ್ನ ಮಾಡಿ. Health card help to the . . .

ಶ್ರೀ ಆರ್.ವಿ. ದೇಶಪಾಂಡೆ(ಸಹಕಾರ ಸಚಿವರು):- ಅದು ಸಹಕಾರ ಇಲಾಖೆಗೆ ಸಂಬಂಧಪಟ್ಟ ವಿಷಯ. ಹಣ ಬಿಡುಗಡೆಯಾಗದೆ ಯಾವುದೇ ಶಸ್ತ್ರ ಚಿಕಿತ್ಸೆ ನಿಂತಿದ್ದರೆ ನನ್ನ ಗಮನಕ್ಕೆ ತನ್ನಿ. ನಾನು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ. ನಾನು ರಿವ್ಯೂ ಮಾಡಿದ್ದೇನೆ. ಸಮಸ್ಯೆ ಏನಾಗುತ್ತಿದೆ ಎಂದರೆ, ರಾಜ್ಯದ ರೈತರಿಗೆ ಈ ಯೋಜನೆಯನ್ನು ಶುರು ಮಾಡಿದ್ದೇವೆ. ಹಾಗಾಗಿ, ಬಹಳಷ್ಟು ಕಡೆ ಎಲ್ಲರೂ ಬೆಂಗಳೂರಿನ ನಮ್ಮ ದೇವಿಶೆಟ್ಟಿ ಹಾಸ್ಪಿಟಲ್‌ಗೆ ಬರಬೇಕೆಂದು ಹೇಳುತ್ತಿದ್ದಾರೆ. ಬೆಳಗಾಂನ ಕೆಎಲ್‌ಇ, ಇಂಥ ಹಲವಾರು ಹಾಸ್ಪಿಟಲ್‌ಗಳನ್ನು ನಾವು ರೆಕಗ್ನೈಜ್ ಮಾಡಿದ್ದೇವೆ. ಹಾಗಾಗಿ, ಅಲ್ಲಿ ಒಳ್ಳೆಯ ವ್ಯವಸ್ಥೆ ಇದೆ. ಇನ್ನೂ ಸ್ವಲ್ಪ ಹೆಚ್ಚಿನ ರೀತಿಯಿಂದ ವ್ಯವಸ್ಥೆ ಆದಾಗ, ಸ್ವಲ್ಪ ಇದರಲ್ಲಿ ನಮಗೆ ತೊಂದರೆ ಕಡಿಮೆಯಾಗುತ್ತದೆ. ಆದರೆ, ಹಣದಿಂದ ಯಾವಾಗ ತೊಂದರೆಯಾಗಿತ್ತು ಎಂಬುದು ನಮ್ಮ ಗಮನಕ್ಕೆ ಬಂದಿಲ್ಲ. ನಿಮ್ಮ ಗಮನಕ್ಕೆ ಬಂದಿದ್ದರೆ, ಖಂಡಿತವಾಗಿಯೂ ನಮ್ಮ ಗಮನಕ್ಕೆ ತನ್ನಿ, ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಜೆ.ಸುನೀತಾ ವೀರಪ್ಪಗೌಡ:- ಮಾನ್ಯ ಅಧ್ಯಕ್ಷರೆ. . . .

ಅಧ್ಯಕ್ಷರು:- ಮಧ್ಯೆ ಅವಕಾಶವಿಲ್ಲ. ಹೆಗ್ಡೆಯವರೆ ಮುಂದುವರಿಸಿ, ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಅವಕಾಶ ಸಿಕ್ಕಿದಾಗ ಮಾತನಾಡಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಎಲ್ಲರಿಗೂ ಎಲ್ಲಾ ರೋಗಿಗಳನ್ನು ಸಂಪರ್ಕ ಮಾಡಲಿಕ್ಕೆ ಅಥವಾ ನಾನು . . . .

ಶ್ರೀಮತಿ ಜೆ.ಸುನೀತಾ ವೀರಪ್ಪಗೌಡ:- ಮಾನ್ಯ ಅಧ್ಯಕ್ಷರೆ . . . .

ಅಧ್ಯಕ್ಷರು:- ಹೆಗ್ಡೆಯವರೆ, ನೀವು ಯೀಲ್ಡ್ ಆದರೆ, ನಾನು ಕುಳಿತುಕೊಳ್ಳಿ ಎಂದು ಹೇಳುತ್ತೇನೆ ಅಷ್ಟೆ. ಆ ತರಹ ಆಗಲಿಕ್ಕಿಲ್ಲ. ಮಧ್ಯದಲ್ಲಿ ಯಾವುದೋ ಒಂದು ವಿಚಾರ ಎತ್ತಿದಾಗ ಎಲ್ಲರಿಗೂ ಅವರ ಅಭಿಪ್ರಾಯಗಳನ್ನು ಹೇಳುವುದಕ್ಕೆ ಆಸೆ ಇರುತ್ತದೆ. ಹಾಗಾದರೆ, ಚರ್ಚೆ ಆಗುವುದಿಲ್ಲ. ಯಡಿಯೂರಪ್ಪನವರು, ಅವರ ಸದಸ್ಯರಿಗೆ ಅವಕಾಶ ಕೊಡಿ ಎಂದು ಹೇಳುತ್ತಿದ್ದಾರೆ. ಈ ತರಹ ಆಗುವುದಿಲ್ಲ. ನೀವು ಅವಕಾಶ ಕೊಟ್ಟಾಗ ಮಾತನಾಡಿ.

ಶ್ರೀಮತಿ ಜೆ. ಸುನೀತಾ ವೀರಪ್ಪಗೌಡ:- ಮಾನ್ಯ ಅಧ್ಯಕ್ಷರೆ . . . .

ಅಧ್ಯಕ್ಷರು:- ನಿಮಗೆ ಅವಕಾಶ ಕೊಟ್ಟಾಗ ನೀವು ಮಾತನಾಡಿ. ನಿಮಗೂ ಅವಕಾಶ ಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀಮತಿ ಜೆ. ಸುನೀತಾ ವೀರಪ್ಪಗೌಡ:- ವಿಕ್ರಮ ಹಾಸ್ಪಿಟಲ್‌ನಲ್ಲಿ,

ಅಧ್ಯಕ್ಷರು:- ನೀವು ಮಾತನಾಡುವಾಗ ವಿಚಾರವನ್ನು ಮಾಡನಾಡಿ.

ಶ್ರೀಮತಿ ಜೆ. ಸುನೀತಾ ವೀರಪ್ಪಗೌಡ:- ಹೆಗ್ಡೆಯವರೆ ಒಂದು ನಿಮಿಷ . . . .

ಅಧ್ಯಕ್ಷರು:- ಒಂದು ನಿಮಿಷ ಎಂದರೆ ಈಗ ನೀವು ಮಾತನಾಡಿ ಆಮೇಲೆ ನಿಮಗೆ ಅವಕಾಶ ಕೊಡುವುದಿಲ್ಲ, ಅಷ್ಟೆ.

ಶ್ರೀಮತಿ ಜೆ. ಸುನೀತಾ ವೀರಪ್ಪಗೌಡ:- ಒಂದೇ ನಿಮಿಷ ಸಾರ್.

ಅಧ್ಯಕ್ಷರು:- ಒಂದು ನಿಮಿಷ, 2 ನಿಮಿಷ ಮಾತನಾಡಿಬಿಡಿ. ನೀವು ನಿಮ್ಮ ಅವಧಿಯನ್ನು ಮುಗಿಸಿಬಿಡಿ.

ಶ್ರೀಮತಿ ಜೆ. ಸುನೀತಾ ವೀರಪ್ಪಗೌಡ(ಬನ್ನೂರು):- ವಿಕ್ರಮ ಹಾಸ್ಪಿಟಲ್‌ನಲ್ಲಿ ಹಲವಾರು ಪೇಷಂಟ್‌ಗಳು ಅಡ್ಮಿಟ್ ಆದರೆ ಏನು ಮಾಡುತ್ತಾರೆಂಬದರೆ, ಸೀರಿಯಸ್ ಆದರೂ ಕೂಡ ಇಲ್ಲಿಂದ ಲೆಟರ್ ಹೋಗಬೇಕೆಂದು ಹೇಳುತ್ತಾರೆ. ಆಲ್‌ರೆಡಿ ಅಲ್ಲಿ ಅಡ್ಮಿಟ್ ಆಗಿದ್ದಾರೆ. ಅಡ್ಮಿಟ್ ಆಗಿ,

ಸಾಲಸೋಲ ಮಾಡಿ ಹಣ ಕಟ್ಟಿದರೂ, ಆ ಹಣವನ್ನು ವಾಪಸ್ಸು ಕೊಡುವುದಿಲ್ಲ. ಈ ಒಂದು ವ್ಯವಸ್ಥೆ ಇದೆ. ಮತ್ತೆ ವಿಕ್ರಮ ಹಾಸ್ಪಿಟಲ್‌ನಲ್ಲಿ ಅಡ್ಮಿಟ್ ಆಗಿದೆ ಹಣ ಕಳುಹಿಸಿ ಕೊಡಿ ಎಂದು, ಸಂಬಂಧಪಟ್ಟ ಅಧಿಕಾರಿಗೆ ಹೇಳಿದರೆ, ನೋಡಿ ಅಮ್ಮ, 3 ಕೋಟಿ ರೂಪಾಯಿ ಕೊಟ್ಟಿದ್ದರು, ಖರ್ಚಾಗಿದೆ, ಇನ್ನೂ ಹಣ ಬಂದಿಲ್ಲ, ಈ ತರಹವೆಂದು ಓಪನ್ ಆಗಿ ಹೇಳುವುದಕ್ಕಾಗುವುದಿಲ್ಲ, ಇಂಥ ಪರಿಸ್ಥಿತಿ ಇದೆ, ಆದುದರಿಂದ, ನಾವು ತುಂಬಾ ಸೀರಿಯಸ್ ಆಗಿರುವವರಿಗೆ ಮಾತ್ರ ಹಣ ಕೊಡುತ್ತೇವೆಂದು ಹೇಳಿದರು. ಹಾರ್ಟ್ ಪೇಷಂಟ್‌ಗೆ ಸೀರಿಯಸ್ ಯಾವುದು? ಸೀರಿಯಸ್ ಯಾವುದಲ್ಲವೆಂದು ಹೇಗೆ ಹೇಳುವುದು? ದಯವಿಟ್ಟು ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು ಸೀರಿಯಸ್ ಆಗಿ ಇದಕ್ಕೆ ಪರಿಹಾರ ಮಾಡಿಕೊಡಬೇಕು.

ಶ್ರೀ ಆರ್.ವಿ.ದೇಶಪಾಂಡೆ:– ನಾನು ತಮ್ಮ ಮೂಲಕ ಗೌರವಾನ್ವಿತ ಸದಸ್ಯರಿಗೆ ಇಷ್ಟು ಭರವಸೆ ಕೊಡುತ್ತೇನೆ. ಹಣದ ಕೊರತೆಯಿಂದ ಯಾವ ಪೇಷಂಟ್‌ಗಳಿಗೂ ತೊಂದರೆಯಾಗುವುದಿಲ್ಲ. ನಾವು ಹಾಸ್ಪಿಟಲ್‌ನಲ್ಲಿ ಬೇಕಾದರೆ ಸ್ವಲ್ಪ ಎಕ್ಸ್‌ಟ್ರಾ ಹಣ ಅವರ ಕಡೆ ಇಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಬೇಕಾದರೆ, ಅದರ ಬಗ್ಗೆ ಮಾನಿಟರ್ ಮಾಡಲು ಹೇಳುತ್ತೇವೆ. Every 15 days ಮಾನಿಟರ್ ಮಾಡುವುದಕ್ಕೆ ಹೇಳಿ, ಯಾವುದೇ ಹಾಸ್ಪಿಟಲ್‌ನಲ್ಲಿ ಎಂಥ ಕಾರಣದಿಂದಲೂ ಹಣವಿಲ್ಲವೆಂದು ಅಪರೇಟ್ ಮಾಡುವುದಿಲ್ಲವೆಂದು ದೂರು ಬರಬಾರದು. ಆ ದೃಷ್ಟಿಯಿಂದ ಪ್ರಯತ್ನ ಮಾಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಪ್ರಾಬ್ಲಂ ಅದಲ್ಲ. ಯಶಸ್ವಿನಿ ಕಾರ್ಡ್‌ನ್ನೇ ನೀವು ಕೊಟ್ಟಿಲ್ಲ.

ಅಧ್ಯಕ್ಷರು:– ಮಾಧುಸ್ವಾಮಿಯವರೆ, ನನ್ನ ಪ್ರಶ್ನೆಯನ್ನು ಕೇಳಿ. ಈಗ ವಂದನಾ ನಿರ್ಣಯದ ಮೇಲೆ ಚರ್ಚೆಯಾಗುತ್ತಿದೆ. ಹೆಗ್ಡೆಯವರು ಮಾತನಾಡುತ್ತಿದ್ದಾರೆ. ಆಗ ಮಾನ್ಯ ಮಂತ್ರಿಗಳು ಏನೋ ಎದ್ದು ನಿಂತು ಹೇಳಿದರು. ಅದೇ ವಿಚಾರದ ಮೇಲೆ ಎಲ್ಲರೂ ಮಾತನಾಡುವುದಕ್ಕೆ ಇಷ್ಟಪಡುತ್ತಿದ್ದಾರೆ. ಈಗ ಏನು ಮಾಡುವುದು ಹೇಳಿ?

ಶ್ರೀ ಜೆ.ಸಿ. ಮಾಧುಸ್ವಾಮಿ:– ನಿಮ್ಮ ಉತ್ತರ ಕೊಡುವಾಗ ಕೊಡಿ ಎಂದು ತಾವು ಅವರಿಗೆ ಹೇಳಿ.

(ಗೊಂದಲ)

ಅಧ್ಯಕ್ಷರು:– ಯಾರೆ ಮಾನ್ಯ ಸದಸ್ಯರು, ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಉತ್ತರ ಕೊಡುವಾಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ; ಪದೇ ಪದೇ ಇಂಟರ್‌ಫಿಯರ್ ಮಾಡಬೇಡಿ. ಆಯಿತು, ಕುಳಿತುಕೊಳ್ಳಿ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:– ಅದರೊಟ್ಟಿಗೆ, ಹಣ ಮಾತ್ರವಲ್ಲ, ಯಾರು ಅರ್ಜಿ ಹಾಕಿದ್ದಾರೆ, ಅವರಿಗೆ ಕಾರ್ಡ್‌ಗಳು ಸಿಗುತ್ತಿಲ್ಲ. ಕಾರ್ಡ್‌ಗಳನ್ನು ತಕ್ಷಣ ಕೊಡಿಸುವ ವ್ಯವಸ್ಥೆಯನ್ನು ಮಾನ್ಯ ಸಹಕಾರ ಸಚಿವರು ಮಾಡಬೇಕೆಂದು ಹೇಳುತ್ತೇನೆ. ಪ್ರಮುಖವಾಗಿ ಇವತ್ತು ಎಲ್ಲರೂ ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ತರಬೇಕಾದ ವಿಷಯವನ್ನು ನಾನು ಚರ್ಚೆ ಮಾಡುತ್ತೇನೆ. ಅದನ್ನು ನೇರವಾಗಿ ಅಲ್ಲ. ಇವತ್ತು ಪಿಡಬ್ಲ್ಯುಡಿ ರಸ್ತೆಗಳ ಗುಂಡಿ ಮುಚ್ಚುವ ವ್ಯವಸ್ಥೆ ಬಗ್ಗೆ ನಾನು ನಿನ್ನೆ ಹೇಳಿದ್ದೆ. ಗುಂಡಿ ಮುಚ್ಚುವ ವ್ಯವಸ್ಥೆ ಮಾಡುತ್ತಿದ್ದಾರೆ. ಸಿಆರ್‌ಎಫ್‌ನಲ್ಲಿ, ನಬಾರ್ಡ್‌ನಲ್ಲಿ, ಕರ್ನಾಟಕ ರೋಡ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನಲ್ಲಿ ಹಣವನ್ನು ಕೊಡುತ್ತಾರೆ. ಆದರೆ, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಏನು ಬರುತ್ತಿದೆ ಎಂದು ನನಗೆ ಇನ್ನೂ ಗೊತ್ತಾಗುತ್ತಿಲ್ಲ. ನಾನು ಮಾನ್ಯ

ಕಾರ್ಯದರ್ಶಿಯವರಿಗೆ ದೂರವಾಣಿ ಮೂಲಕ ಸಂಪರ್ಕ ಮಾಡಿದ್ದೆ. ಅಲ್ಲಿ ಮಾತನಾಡಿದರೆ, ಡಾ||ಡಿ.ಎಂ. ನಂಜುಂಡಪ್ಪನವರ ವರದಿಯ ಪ್ರಕಾರ ನಾವು ಸೈಂಟಿಫಿಕ್ ಆಗಿ ಜಾರಿಗೆ ತಂದಿದ್ದೇವೆ, ಅಲ್ಲಿಯ ಜನಸಂಖ್ಯೆಯ ಪ್ರಕಾರ ಹಣವನ್ನು ಹಂಚಿದ್ದೇವೆಂದು ಹೇಳುತ್ತಾರೆ. ಆದರೆ, ಇಲ್ಲಿ ನಾನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದೇನೆ. ಕೆಲವು ಕ್ಷೇತ್ರಗಳಿಗೆ 70 ಲಕ್ಷ ರೂಪಾಯಿಗಳು ಸಿಕ್ಕಿತ್ತು, ನನ್ನ ಕ್ಷೇತ್ರಕ್ಕೆ 5 ಲಕ್ಷ ರೂಪಾಯಿ ಬಂದಿದೆ. ಇದು ಸೈಂಟಿಫಿಕ್ ಎಂದು ಕೇಳಲು ಇಚ್ಛೆಪಡುತ್ತೇನೆ. ಯಾವ ಬೇಸಿಸ್‌ನಲ್ಲಿ ಇದನ್ನು ಮಾಡಿದ್ದಾರೆ? ಪುನಃ ಕೇಳಿದಾಗ, ನಬಾರ್ಡ್‌ನಲ್ಲಿ ತಾಲ್ಲೂಕಿಗೆ 20 ಲಕ್ಷ ರೂಪಾಯಿ ಕೊಡುತ್ತೇವೆಂದು ಹೇಳುತ್ತಾರೆ. ನಬಾರ್ಡ್‌ನಲ್ಲಿ ತಾಲ್ಲೂಕಿಗೆ ಹನ್ನೆರಡೂವರೆ ಲಕ್ಷ ರೂಪಾಯಿ ಸಿಕ್ಕಿದರೆ, ನನ್ನ ಕ್ಷೇತ್ರದಲ್ಲಿ ಬರುವ ಮೂರೂವರೆ ತಾಲ್ಲೂಕಿಗೆ ಎಷ್ಟು ಹಣ ಬರುತ್ತದೆಂದು ತಾವು ಲೆಕ್ಕ ಹಾಕಬೇಕು. ಹಣವೇ ಸಿಗುವುದಿಲ್ಲ. ಇದನ್ನು ಅಧಿಕಾರಿವರ್ಗದವರಿಗೆ ನಾನು ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ತರಬೇಕೆಂದು ಹೇಳುತ್ತಿದ್ದೇನೆ. ನನ್ನ ಹತ್ತಿರ ಪಟ್ಟಿ ಇದೆ. ನಿನ್ನೆ ಶ್ರೀಮಹದೇವ್‌ರವರು ಒಂದು ಪಟ್ಟಿಯನ್ನು ಕೊಟ್ಟಿದ್ದರು. ಅಲ್ಲಿ ಉತ್ತರ ಕರ್ನಾಟಕಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ? ಅದಕ್ಕೆ ಸರ್ಕಾರದ ನಡಾವಳಿಯ ಕಾಪಿಯನ್ನು ಕಳುಹಿಸಿದರು. ಮಾನ್ಯ ಮಾಧುಸ್ವಾಮಿಯವರು ನಿನ್ನೆ ಆದೇಶವಾಗಿದೆಯೇ ಎಂದು ಹೇಳಿದರು. ಆದರೆ, ಇಲ್ಲಿ ಉತ್ತರ ಕರ್ನಾಟಕ ಬಿಟ್ಟು ಬೇರೆ ಇಲ್ಲ. ಆಮೇಲೆ, ಈ ಹಣವನ್ನು ಹಂಚಲಿಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷತೆಯಲ್ಲಿ ಸಭೆಯಾಗಬೇಕು. 5 ಲಕ್ಷ ರೂಪಾಯಿಗಳನ್ನು ಹಂಚಿಕೊಳ್ಳಲು ಜಿಲ್ಲಾ ಉಸ್ತುವಾರಿ ಸಚಿವರು ಬೆಂಗಳೂರಿನಿಂದ ನಮ್ಮ ಜಿಲ್ಲೆಗೆ ಬಂದರೆ, ಖರ್ಚಾಗುವ ಹಣವನ್ನು ನಮಗೆ ಕೊಟ್ಟರೆ, ನಾವು ಕೆಲವು ಗುಂಡಿಗಳನ್ನಾದರೂ ಮುಚ್ಚುತ್ತೇವೆ. ಅವರು ಬರುವ ಅವಶ್ಯಕತೆ ಇರುವುದಿಲ್ಲ. ಈ ಹಣವನ್ನೇ ನೇರವಾಗಿ ಜಿಲ್ಲಾಧಿಕಾರಿ ಮೂಲಕ ಕ್ಷೇತ್ರಕ್ಕೆ ಇಷ್ಟು ಎಂದು ಹಂಚಿ. ಆದರೆ, ಈ ಒಂದು ವ್ಯವಸ್ಥೆ ಏನಿದೆ, ಹಣವನ್ನು ವಿತರಣೆ ಮಾಡುವಂಥ, ಆಲೋಕೇಷನ್ ಡಿಸ್ಟ್ರಿಬ್ಯೂಟ್ ಮಾಡುವಂಥದ್ದು, ಪ್ರತಿಯಂದು ಕ್ಷೇತ್ರಕ್ಕೆ, ಈಗ ತಾಲ್ಲೂಕಿಗೆ ಕೊಡಬೇಕಾಗಬಹುದು. ತಾಲ್ಲೂಕಿನಲ್ಲಿ ಇಷ್ಟು ಕ್ಷೇತ್ರ ಇದೆ ಎಂದು ಲೆಕ್ಕಹಾಕಿ, ಪ್ರತಿ ಕ್ಷೇತ್ರಕ್ಕೆ ಎಷ್ಟು ಹಣ ಬರುತ್ತದೆಂದು ಲೆಕ್ಕಹಾಕಿ, ಅದನ್ನು ಪ್ರತಿ ಕ್ಷೇತ್ರಕ್ಕೆ ಮಿನಿಮಂ 25–30 ಲಕ್ಷ ರೂಪಾಯಿ ಕೊಡುವ ವ್ಯವಸ್ಥೆ ಮಾಡಿ, ಹೆಚ್ಚುವರಿ ಹಣವನ್ನು ಉತ್ತರ ಕರ್ನಾಟಕಕ್ಕೆ ಕೊಟ್ಟರೆ ನನ್ನ ಅಭ್ಯಂತರವಿಲ್ಲ. ಅದು ಅಭಿವೃದ್ಧಿಯಾಗಬೇಕು. ಆದರೆ, ಇನ್ನೊಂದು ದೊಡ್ಡ ಪ್ರಶ್ನೆಯನ್ನು ನಾನು ಕೇಳಲಿಚ್ಛೆಪಡುತ್ತಿದ್ದೇನೆ, ಪ್ರತಿ ಜಿಲ್ಲೆಗೆ ಈವರೆಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎನ್ನುವ ಪ್ರಶ್ನೆಗೆ ಉತ್ತರ ಬರಲಿಲ್ಲ. ಉತ್ತರ ಕರ್ನಾಟಕಕ್ಕೆ ಕಡಿಮೆ ಹಣವನ್ನು ಕೊಟ್ಟಿದ್ದಾರೆಯೇ? ನಮ್ಮ ಜಿಲ್ಲೆಗಳಿಗೆ ಜಾಸ್ತಿ ಹಣ ಕೊಟ್ಟಿದ್ದಾರೆಯೇ? ಈ ಪ್ರಶ್ನೆಗಳಿಗೆ ಉತ್ತರ ಬೇಕಾಗುತ್ತದೆ. ಒಂದು ವೇಳೆ, ಎಲ್ಲಾ ಜಿಲ್ಲೆಗಳಿಗೆ ಸಮನಾಗಿ ಹಣವನ್ನು ಹಂಚಿದ್ದರೆ, ಅದು ಸರಿಯಾದ ರೀತಿಯಲ್ಲಿ ಈವರೆಗೆ ಹಣ ಖರ್ಚಾಗದಿದ್ದರೆ, ನಮಗೆ ಪನಿಷ್‌ಮೆಂಟ್ ಕೊಡಬೇಡಿ. ಉಡುಪಿ ಮತ್ತು ಮಂಗಳೂರನ್ನು ತೆಗೆದುಕೊಂಡು ಹೋಗಿ ಬಿಜಾಪುರ, ಗುಲ್ಬರ್ಗಾ ಮಾಡಬೇಡಿ, ಗುಲ್ಬರ್ಗಾ ಮತ್ತು ಬಿಜಾಪುರವನ್ನು ಉಡುಪಿ, ಉತ್ತರ ಕರ್ನಾಟಕದ ರೀತಿ ಅಭಿವೃದ್ಧಿಮಾಡಿ. ನಮ್ಮ ಜಿಲ್ಲೆಗಳು ಅಭಿವೃದ್ಧಿಯಾಗಿವೆಯೆಂದು ನಮಗೆ ಹೆಮ್ಮೆ ಇದೆ. ಆದರೆ ನಮ್ಮ ಜಿಲ್ಲೆಗಳಿಗೆ ಕಡಿಮೆ ಅನುದಾನವನ್ನು ಕೊಟ್ಟು ಹಾಳುಮಾಡುವ ಪ್ರಯತ್ನ ಮಾಡಬೇಡಿ. ಒಂದು ವೇಳೆ ಅವರಿಗೆ ಜನಸಂಖ್ಯೆಯ ಆಧಾರದ ಮೇಲೆ ಅನುದಾನವನ್ನು ಕೊಡುವುದಾಗಿದ್ದರೆ ಆಹಾರ ಪದಾರ್ಥಗಳನ್ನು

ಕೊಡುವಾಗ ಮಾಡಿ. ಆದರೆ ರಸ್ತೆಗಳಿಗೆ ಹಣವನ್ನು ಕೊಡುವಾಗ ಎಷ್ಟು ಉದ್ದದ ರಸ್ತೆಗಳಿವೆ, ಆ ಭಾಗದ ಹವಾಮಾನದ ಪರಿಸ್ಥಿತಿಯನ್ನು ನೋಡಿ, ಅದಕ್ಕೆ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆಂಬುದನ್ನು ಬಿಟ್ಟರೆ ಸ್ಪೆಸಿಫಿಕ್ ಆಗಿ ಮಾಡುತ್ತಿದ್ದೇವೆಂದು ಕೇವಲ ಕಛೇರಿಯಲ್ಲಿ ಕುಳಿತು ಮಾಡಿದರೆ ಸರಿಯಾಗುವುದಿಲ್ಲ. ಇದಕ್ಕೆ ನಮ್ಮ ವಿರೋಧವಿದೆ. ಇದನ್ನು ಸರಿಪಡಿಸಬೇಕೆಂದು ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ. ಅಧಿಕಾರಿಗಳು ತಂದಿಟ್ಟ ಕಡತಕ್ಕೆ ಸಹಿಯನ್ನು ಹಾಕುವುದಿಲ್ಲ. ಇದನ್ನು ಸರಿಪಡಿಸಿ ಸಹಿಹಾಕಬೇಕು. ಕಂದಾಯ ಇಲಾಖೆಯಲ್ಲಿ ಕಡತಗಳ ಮಿಸ್ಸಿಂಗ್ ಆಗಿದೆಯೆಂದು ನಾನು ಮೊದಲು ಹೇಳಿದ್ದೆ. ಅದರ ಬಗ್ಗೆ ಸರಿಯಾಗಿ ತನಿಖೆ ಮಾಡಿಸುವ ಕೆಲಸವಾಗಬೇಕಾಗುತ್ತದೆ. ಕೇವಲ ಜಿಲ್ಲಾಧಿಕಾರಿಗಳು, ಅಸಿಸ್ಟೆಂಟ್ ಕಮಿಷನರ್‌ಗಳು ಅವರಿಗೆ ಬಂದ ಕಡತಕ್ಕೆ ಸಹಿ ಮಾಡಿ ಕಳಿಸುವುದಿಲ್ಲ, ಅಥವಾ ಸೆಕ್ರೆಟೇರಿಯೇಟ್‌ನಲ್ಲಿ ಸಹಿಯನ್ನು ಹಾಕಿ ಕಳುಹಿಸುವುದಿಲ್ಲ, ಅವರ ಕಛೇರಿಗೆ ಎಷ್ಟು ಕಡತಗಳು ಬಂದಿವೆ? ಎಷ್ಟು ವಿಲೇವಾರಿಯಾಗಿದೆ? ಉಳಿದ ಕಡತಗಳು ಏಕೆ ವಿಲೇವಾರಿಯಾಗಿಲ್ಲ? ಇದರ ಬಗ್ಗೆ ತನಿಖೆ ಮಾಡಿಸಬೇಕಾಗುತ್ತದೆ. ಅನುದಾನವನ್ನು ವಿತರಣೆ ಮಾಡುವಾಗ ತಾಲ್ಲೂಕಿನ ಬ್ಲಾಕ್ ಲೆವೆಲ್‌ನಲ್ಲಿ ಮಾಡುವುದರಿಂದ ತಾಲ್ಲೂಕುಗಳನ್ನು ಹೆಚ್ಚು ಮಾಡಿ, ಈಗಾಗಲೇ ಹೊಸ ತಾಲ್ಲೂಕುಗಳನ್ನು ಮಾಡುವುದಕ್ಕೆ ನೀವು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ವಿಶೇಷ ತಹಶೀಲ್ದಾರರ ಕಛೇರಿಗಳನ್ನು ತೆಗೆದಿದ್ದೀರಿ, ಹೊಸ ತಾಲ್ಲೂಕುಗಳನ್ನು ಗ್ರಾಮಪಂಚಾಯಿತಿಯ ಚುನಾವಣೆಯ ನಂತರ ಮಾಡಿ. ಆದರೆ ಇನ್ನೊಂದು ಅಡಚಣೆ ಇದೆಯೆಂದು ಸರ್ಕಾರ ಹೇಳಿದ್ದು ನನ್ನ ಗಮನಕ್ಕೆ ಬಂದಿದೆ. ಏನೆಂದರೆ Re-organization of Constituencies, delimitation ದಿಂದಾಗಿ ಕೊಡುವುದಿಲ್ಲವೆಂದು, ಅದು ಮುಂದೆ ಹೋಗಿರುವುದರಿಂದ ಅನುಮತಿಯನ್ನು ತೆಗೆದುಕೊಳ್ಳಿ, ಅದೇನೂ ಅಡ್ಡ ಬರುವುದಿಲ್ಲ. ಏಕೆಂದರೆ ಅದು ಮುಂದೆ ಶಾಶ್ವತವಾಗಿ ಮುಂದೆ ಹೋದರೆ ಇಲ್ಲಿ ನಮ್ಮ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ, ಹೊಸ ತಾಲ್ಲೂಕುಗಳು ಆಗಬೇಕಾಗುತ್ತದೆ, ಅಭಿವೃದ್ಧಿ ಕೆಲಸಗಳು ಜಾಸ್ತಿಯಾಗಬೇಕಾಗುತ್ತದೆ. ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಸೆಕ್ಷನ್ 94 (ಸಿ)ಯಲ್ಲಿ ಹಿಂದೆ ಜನತಾದಳ ಸರ್ಕಾರವಿದ್ದಾಗ ಒಂದು ತೀರ್ಮಾನವನ್ನು ತೆಗೆದುಕೊಂಡಿತ್ತು. ಸರ್ಕಾರಿ ಭೂಮಿಯಲ್ಲಿ ಕುಳಿತಂಥ ಕೃಷಿ ಕೂಲಿ ಕಾರ್ಮಿಕರು ಅಥವಾ ಬೇರೆ ಯಾರಾದರೂ ಬಿ.ಪಿ.ಎಲ್. ಪಟ್ಟಿಯಿಂದ ಕೆಳಗೆ ಇದ್ದವರಿಗೆ ಆ ಜಾಗವನ್ನು ಖಾಯಂ ಮಾಡುವುದು. ನಂತರ ಬಂದ ಸರ್ಕಾರ ಅದಕ್ಕೆ ಮಾರುಕಟ್ಟೆ ಧಾರಣೆಯನ್ನು ಹಾಕಲು ಪ್ರಯತ್ನ ಮಾಡಿತು. ನಾವು ವಿರೋಧ ಮಾಡಿದ್ದಕ್ಕೆ, ಗ್ರಾಮೀಣ ಪ್ರದೇಶದಲ್ಲಿ '30x40' ಉಚಿತ, ಪಟ್ಟಣ ಪ್ರದೇಶದಲ್ಲಿ 20x30 ಉಚಿತವೆಂದು ಮಾಡಿದರು. ಅದಕ್ಕೆ ಹೆಚ್ಚುವರಿ ಇದ್ದ ಜಾಗಕ್ಕೆ ಸ್ಕ್ವೇರ್ ಫೀಟ್ ಒಂದಕ್ಕೆ ಒಂದು ರೂಪಾಯಿಯಂತೆ ಮಾಡಿದರು. ಇವರ ಇಂಟರ್‌ಪ್ರಿಟೇಷನ್ ಬೇರೆಯಾಯಿತು. ಹೆಚ್ಚುವರಿ ಇದ್ದದ್ದಕ್ಕೆ 20x30 ಅಥವಾ 30x40ನ್ನು ಸೇರಿಸಿ ದರವನ್ನು ಹಾಕಲು ಪ್ರಯತ್ನ ಮಾಡಿದರು. ಅದಕ್ಕೆ ಪುನಃ ಬದಲಾವಣೆಯನ್ನು ಮಾಡಿ ಒಂದು ಆದೇಶವನ್ನು ಮಾಡಿದರು. ಆ ಆದೇಶ ಆದದ್ದು ಇಲ್ಲಿ ಮಂತ್ರಿಮಂಡಲ ವಿಸ್ತರಣೆಯಾದ ದಿವಸ. ಆದರೆ ಇವತ್ತಿನವರೆಗೆ ಆ ಆದೇಶ ಹೊರಕ್ಕೆ ಬರಲಿಲ್ಲ. ಕಡತ ಎಲ್ಲಿ ಎಂದು ಕೇಳಿದರೆ ಕಂದಾಯ ಇಲಾಖೆಯವರು ಪಾರ್ಲಿಮೆಂಟರಿ ಅಫೇರ್ಸ್ ಎಂದು ಹೇಳುತ್ತಾರೆ, ಇನ್ನೊಬ್ಬರನ್ನು ಕೇಳಿದರೆ ಹಣಕಾಸು ಇಲಾಖೆಯೆಂದು ಹೇಳುತ್ತಾರೆ. ಇದು ಪರಿಸ್ಥಿತಿ. ಯಾರು ಪಾಪದವರು ಸರ್ಕಾರದ ಭೂಮಿಯಲ್ಲಿ

ಕುಳಿತಿದ್ದಾರೆ ಅವರಿಗೆ ಭೂಮಿಯನ್ನು ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿದರೆ ಅದರ ಪರಿಸ್ಥಿತಿ ಇನ್ನೂ ಸರಿಯಾಗಲಿಲ್ಲ. ತಹಶೀಲ್ದಾರರ ನೇಮಕಾತಿ ಅತೀ ಶೀಘ್ರದಲ್ಲಿ ಆಗಬೇಕಾಗುತ್ತದೆ. ಏಕೆಂದರೆ ಆರು ತಿಂಗಳಿನಲ್ಲಿ ನಿವೃತ್ತರಾಗುವವರೇ ಬರುತ್ತಿದ್ದಾರೆ. ಅವರು ಯಾವ ತೀರ್ಮಾನವನ್ನು ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ತಕ್ಷಣದಲ್ಲಿ ತಹಶೀಲ್ದಾರರ ನೇಮಕಾತಿಯಾಬೇಕು. ಅದನ್ನು ಕೆ.ಪಿ.ಎಸ್.ಸಿ.ಯವರು ಮಾಡುತ್ತಾರೋ, ಸರ್ಕಾರದ ಮಟ್ಟದಲ್ಲಿ ಮಾಡುತ್ತಾರೋ, ಒಟ್ಟಿನಲ್ಲಿ ಅತೀ ಶೀಘ್ರದಲ್ಲಿ ಮಾಡಿ ತಹಶೀಲ್ದಾರರ ನೇಮಕಾತಿ ಮಾಡುವ ವ್ಯವಸ್ಥೆ ಮಾಡಬೇಕು. ನಿನ್ನೆ ತಿದ್ದುಪಡಿ ಮಾಡಿದ್ದಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ ಎಲ್ಲಾ ಕಡತಗಳು ಐದು ಸೆಂಟ್ ಭೂಮಿಯನ್ನು ಗ್ರಾಂಟ್ ಮಾಡಬೇಕಾಗಿದ್ದರೆ ಸರ್ಕಾರಕ್ಕೆ ಬರಬೇಕಾಗಿತ್ತು. ಇವತ್ತು ಅದನ್ನು ಬದಲಾವಣೆ ಮಾಡಿ ಜಿಲ್ಲಾಧಿಕಾರಿಯವರಿಗೆ ಅಧಿಕಾರವನ್ನು ಕೊಟ್ಟಿರತಕ್ಕದ್ದು. ಬಹಳ ನೋವನ್ನು ತರುವಂಥದ್ದು, ಅರ್ಕಾವತಿ ಲೇಔಟ್ ಬಗ್ಗೆ ಮೊನ್ನೆ ಸರ್ಕಾರ ಒಂದು ಉತ್ತರವನ್ನು ಕೊಟ್ಟಿದೆ. ನಾವು 'ಡಿ' ನೋಟಿಫಿಕೇಷನ್ ಮಾಡಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟರು. ಇವತ್ತು 'ಡಿ' ನೋಟಿಫಿಕೇಷನ್ ಮಾಡಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟರು. ಇವತ್ತು 'ಡಿ' ನೋಟಿಫಿಕೇಷನ್ ಮಾಡಲಿಲ್ಲ, ಇವರು ಏನನ್ನು ಮಾಡಿದ್ದಾರೆಂದರೆ, ಸೆಕ್ಷನ್–17ರಲ್ಲಿ ನೋಟಿಫಿಕೇಷನ್ ಅನ್ನು ಮಾಡಿದರು. ಮಾಡುವಾಗಲೇ total extent 0f land ಏನಿದೆ 3800 ಎಕರೆ ಇದ್ದದ್ದನ್ನು 3300 ಎಕರೆ ಎಂದು ಕೊಟ್ಟರು. ಅಲ್ಲೇ 500 ಎಕರೆ ಕಡಿಮೆ ಕೊಟ್ಟರು. Final Notification Section-19 ರಲ್ಲಿ ಬರುವಾಗ 2750 ಎಕರೆ ಮಾತ್ರ ಕೊಟ್ಟರು. ಇಲ್ಲಿ 'ಡಿ' ನೋಟಿಫೈ ಮಾಡುವ ಪ್ರಶ್ನೆಯೇ ಬರಲಿಲ್ಲ. ಇದು ಒಂದು ಹೊಸ ವಿಧಾನವನ್ನು ಹುಡುಕಿದ್ದಾರೆ. ಮೊದಲು ಏಕೆ ಅಷ್ಟು ಭೂಮಿಯನ್ನು ಸ್ವಾಧೀನಕ್ಕೆ ಪ್ರಾರಂಭ ಮಾಡಿದರು. ನಂತರ ಏಕೆ ಅದನ್ನು ಕೈಬಿಟ್ಟಿರು ಎಂದು? ಈಗ 'ಡಿ' ನೋಟಿಫೈ ಎಂದು ಹೇಳುವುದಿಲ್ಲ ಇಲ್ಲಿ. ಅಕ್ವಿಜಿಷನ್‌ಅನ್ನು ಕೈಬಿಟ್ಟರು ಎಂದು ಹೇಳುವಂಥದ್ದು. ಈ ಬಗ್ಗೆ ಮೊನ್ನೆ ರೋಷನ್‌ಬೇಗ್‌ರವರು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ಇದರಲ್ಲಿ ಇನ್ನೊಂದು ದೊಡ್ಡ ತಪ್ಪನ್ನು ಮಾಡಿರತಕ್ಕದ್ದು, ಬಿ.ಡಿ.ಐ. ಗೆ ಸ್ವತಃ ಅಕ್ವಿಜಿಷನ್ ಮಾಡಲು ಅಧಿಕಾರ ಇಲ್ಲ, ಸರ್ಕಾರ ಅಕ್ವಿಜಿಷನ್ ಮಾಡಿ ಬಿ.ಡಿ.ಎ. ಗೆ ಕೊಡಬೇಕಾಗುತ್ತದೆ. ಇವರು ಒಂದು hand billಅನ್ನು ಮಾಡುತ್ತಾರೆ. ಯಾರಾದರೂ ಡೌಟ್ಸ್ ಬಂದರೆ ನಮಗೆ ನೇರವಾಗಿ ಸಂಪರ್ಕ ಮಾಡಿ ತಿಳಿಸಿ ಎಂದು. ಆ ಮ್ಯಾಪ್‌ನ್ನು ನೋಡಿದರೆ ಗೊತ್ತಾಗುತ್ತದೆ. ಮಧ್ಯದಲ್ಲಿರುವ ಜಾಗವನ್ನು ಬಿಡುತ್ತಾರೆ, ಸುತ್ತ ಇರುವ ಜಾಗವನ್ನು acquire ಮಾಡುತ್ತಾರೆ. ಮಧ್ಯ ಇರುವ ಜಾಗವನ್ನು ಏಕೆ ಬಿಟ್ಟರು? ಅಲ್ಲಿಗೆ ಹೋಗಲು ಇವರಿಗೆ ದಾರಿ ಎಲ್ಲಿ? ಸುತ್ತಲು ಇರತಕ್ಕದ್ದನ್ನು ಮಾತ್ರ ಏಕೆ acquire ಮಾಡಿದರು ಎಂಬ ಬಗ್ಗೆ ಸಹ ಸರ್ಕಾರ ತಿಳಿಸಬೇಕಾಗುತ್ತದೆ. ಮೊನ್ನೆ ಮಾನ್ಯ ದೇಶ್‌ಪಾಂಡೆಯವರು ಇರಲಿಲ್ಲ, ನಾನು ಹೇಳಿದೆ, ನೀವು ಒಂದು ಸಲ ಸದನದಲ್ಲಿ ಹೇಳಿದ್ದಿರಿ, ಯಾವುದೇ ಉದ್ದೇಶಕ್ಕಾಗಿ ಲ್ಯಾಂಡ್‌ನ್ನು acquire ಮಾಡುವಾಗ land aduditing ಅನ್ನು ಮಾಡುತ್ತೇವೆಂದು, Land auditing ಅನ್ನು ಮಾಡಿಸಿದ್ದರೆ ಇದು ಇಷ್ಟು ಜಾಗವನ್ನು acquire ಮಾಡಿದ್ದರೆ 'ಡಿ'ನೋಟಿಫೈ ಮಾಡುವುದು ಬರುವುದಿಲ್ಲ, ಮತ್ತು ಕೈಬಿಡುವಂಥದ್ದು ಬರುವುದಿಲ್ಲ, ನೀವು ಒಂದು ಲ್ಯಾಂಡ್‌ನ್ನು acquire ಮಾಡಿ ಲೇಔಟ್ ಮಾಡುವುದಕ್ಕೆ 25 percent of the land should be used for civic amenities.

Sri.R.V.Deshpande:- As per Country Planning Act, ಅದು 50 ಪರ್ಸೆಂಟ್ ಆಗುತ್ತದೆ. Out of 100 acres, 50% goes for roads, reservation for flats, ಇವೆಲ್ಲಾ facilities ಆಗಬೇಕಲ್ಲಾ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ನೀವು ನನ್ನ ಸಹಾಯಕ್ಕೆ ಬಂದದ್ದರಿಂದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇಷ್ಟೆಲ್ಲಾ ಮಾಡಿ 1270 ಕೈಬಿಟ್ಟಮೇಲೆ ಉಳಿದದ್ದು ಎಷ್ಟು ಎಂದು ಸರ್ಕಾರ ಹೇಳಬೇಕಾಗುತ್ತದೆ. 3800 ಎಕರೆಯಿಂದ 2700 ಎಕರೆಗೆ ಬಂದಮೇಲೆ ನೀವೇನು civic amenities ಇಟ್ಟಂಥ ಜಾಗ, ಹಾಗಾದರೆ civic amenities ಜಾಗವನ್ನು ಇಡುವುದಿಲ್ಲವೆಂದು ತೀರ್ಮಾನ ಮಾಡಿರಬೇಕು, ದಯವಿಟ್ಟು ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ಗಮನಹರಿಸಬೇಕು. ಬಿ.ಡಿ.ಎ. ಯವರಿಗೆ ಗ್ರಾಮಪಂಚಾಯಿತಿ ಏರಿಯಾದಲ್ಲಿ land aquire ಮಾಡಲು ಬರುತ್ತದೆಯೇ? ಅವರ hand billನಲ್ಲಿ ನಮಗೆ ಇಷ್ಟು ಲಾಭ ಮಾಡಲು ಬರುತ್ತದೆಂದು ತೋರಿಸುತ್ತಾರೆ. ಇವರು ರಿಯಲ್ ಎಸ್ಟೇಟ್ ಬಿಸಿನೆಸ್‌ನ್ನು ಮಾಡಿದಂತೆ ತೋರಿಸುತ್ತಿದ್ದಾರೆ. ನಾನು ಇನ್ನೊಂದು ಪ್ರಶ್ನೆಯನ್ನು ಕೇಳಿದ್ದೇನೆ. ಅನೇಕ ಮಂದಿಗೆ ನೋವಾದರೂ ಅದನ್ನು ಕೇಳಲು ಇಚ್ಚೆಪಡುತ್ತೇನೆ. ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ, ಅದಕ್ಕೆ ಇದುವರೆಗೆ ಉತ್ತರ ಬರಲಿಲ್ಲ, ಮಾಜಿ ಮತ್ತು ಹಾಲಿ ಶಾಸಕರು, ಮಾಜಿ ಹಾಗೂ ಹಾಲಿ ಸಂಸದರು, ಯಾರ್‍ಯಾರು irrespective of the term ಎಷ್ಟು ಸೈಟುಗಳನ್ನು discretionary quotaದಲ್ಲಿ ತೆಗೆದುಕೊಂಡಿದ್ದಾರೆ, ಅದರಲ್ಲಿ ಯಾರು ಅದನ್ನು ಇಟ್ಟುಕೊಂಡಿದ್ದಾರೆ, ಯಾರು ಮಾರಾಟ ಮಾಡಿದ್ದಾರೆ? ಅಧಿಕಾರಿಗಳದ್ದನ್ನೂ ಕೇಳಬೇಕಾಗುತ್ತದೆ, ಅದಕ್ಕೆ ಹೊರತಾಗಿ ಯಾರ್‍ಯಾರು ತೆಗೆದುಕೊಂಡಿದ್ದಾರೆ, ನ್ಯಾಯಾಂಗವಾಗಲಿ, ಪತ್ರಿಕಾರಂಗವಾಗಲಿ ಯಾರೇ ಕೇಳಿದರೂ ಹೇಳಬೇಕು. ಏಕೆಂದರೆ ತೆಗೆದುಕೊಂಡು ತಕ್ಷಣದಲ್ಲೇ ಮಾರಾಟ ಮಾಡುವಂಥ ಹಕ್ಕನ್ನು ಸರ್ಕಾರ ತಿದ್ದುಪಡಿಯನ್ನು ತಂದು ಮಾಡಿದೆ, ಆದರೆ ಇದು ರಿಯಲ್ ಎಸ್ಟೇಟ್ ಬಿಸ್‌ನೆಸ್ ಅಲ್ಲ, ನಾವು ಬಿಸ್‌ನೆಸ್‌ನ್ನು ಮಾಡಬಾರದು, ಏಕೆಂದರೆ 7 ಲಕ್ಷರೂ.ಗೆ ತೆಗೆದುಕೊಂಡದ್ದಕ್ಕೆ ಒಂದೇ ವಾರದಲ್ಲಿ 70 ಲಕ್ಷ ಸಿಗುವುದಾದರೆ ನಾವು ಬಹಳ ತಪ್ಪನ್ನು ಮಾಡುತ್ತಿದ್ದೇವೆಂದು ಅನ್ನಿಸುತ್ತದೆ. ನಾನೂ ಒಂದು ಸೈಟನ್ನು ತೆಗೆದುಕೊಂಡಿದ್ದೇನೆ. ಇಲ್ಲವೆಂದು ಹೇಳುತ್ತಿಲ್ಲ. ಆದರೆ ಅದನ್ನು ನಾನು ಮಾರಲು ಹೋಗುವುದಿಲ್ಲ. ನನ್ನ ವಾಸ್ತವ್ಯಕ್ಕೆ ಮನೆಯನ್ನು ಕಟ್ಟುವಂಥ ಅಥವಾ ಬಾಡಿಗೆ ಕೊಟ್ಟು ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕೇ ಹೊರತು ನಾನು ತೆಗೆದುಕೊಂಡ ನಿವೇಶನವನ್ನು ತಕ್ಷಣದಲ್ಲಿ ಮಾರಾಟ ಮಾಡುವುದು ತಪ್ಪಾಗುತ್ತದೆ. ದಯವಿಟ್ಟು ಇದರ ಬಗ್ಗೆ ಮಾಹಿತಿಯನ್ನು ನಾನೇನು ಪ್ರಶ್ನೆಯನ್ನು ಕೇಳಿದ್ದೇನೆ, ಅದಕ್ಕೆ ದಯವಿಟ್ಟು ಅತೀ ಶೀಘ್ರದಲ್ಲಿ ಉತ್ತರವನ್ನು ಒದಗಿಸಬೇಕು. ಏಕೆಂದರೆ ನಾಳೆ ಕಡೆ ದಿವಸ, ಪುನಃ ಮುಂದಿನ ಸದನ ಬರುವಾಗ ನನ್ನ ಪ್ರಶ್ನೆ ಏನೆಂದರೆ ಯಾವುದೇ ಪ್ರಶ್ನೆಗೆ ಉತ್ತರ ಬರದಿದ್ದಕ್ಕೆ ನೋವಲ್ಲ, ಇಂಥ ಪ್ರಶ್ನೆಗೆ ಉತ್ತರ ಬರುವುದಿಲ್ಲ, ಸದನ ಮುಗಿದ ಮೇಲೆ ಪುನಃ ಇನ್ನೊಂದು ಸದನಕ್ಕೆ ಪ್ರಶ್ನೆಯನ್ನು ನಾನು ಕೊಡಬೇಕಾಗುತ್ತದೆ.

ಇದು ಕಣ್ಣು ಮುಚ್ಚಾಲೆ ಆಟ ಆಡುವ ಪರಿಸ್ಥಿತಿಗೆ ನಮ್ಮನ್ನು ತೆಗೆದುಕೊಂಡು ಹೋಗಬಾರದು. ದಯವಿಟ್ಟು ಇದರ ಬಗ್ಗೆ ತಮ್ಮ ಕಛೇರಿಯಿಂದ ಆಗಾಗ ಶೀಘ್ರವಾಗಿ ಉತ್ತರ ತರಿಸುವ ವ್ಯವಸ್ಥೆ ಮಾಡಿಸಬೇಕು. ನಾನು ಇನ್ನೂ ಅನೇಕ ಪ್ರಶ್ನೆಗಳನ್ನು ಕೇಳಿದ್ದೇನೆ. ಮುಂದಿನ ಸದನಕ್ಕೆ ಪುನಃ ಪ್ರಶ್ನೆ ಕೇಳಿ ಅದು ಬಂದಾಗ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಪ್ರಶ್ನೆ ಕೇಳಿದ್ದೆ, ಈ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು: ಹೆಗಡೆಯವರೆ, ದಯಮಾಡಿ ಬೇಗ ಮುಗಿಸಬೇಕು. ಬಹಳ ಕಾಲ ಆಯಿತು. ಅರ್ಧ ಗಂಟೆ ತೆಗೆದುಕೊಂಡಿದ್ದೀರಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಗ್ರಾಮೀಣಾಭಿವೃದ್ಧಿಯಲ್ಲಿ ಆಶ್ರಯ ಮನೆಗಳನ್ನು ಕೊಡುವುದು ಗ್ರಾಮ ಪಂಚಾಯಿತಿಗೆ ಕೊಡಬಾರದು, ಶಾಸಕರಿಗೇ ಕೊಡಬೇಕೆಂದು ನಿನ್ನೆ ಒಂದು ಹಂತದಲ್ಲಿ ಮುಖ್ಯ ಮಂತ್ರಿಗಳ ಸಭೆಯಲ್ಲಿ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ತಾತ್ಕಾಲಿಕ ಉಪಶಮನಗಳನ್ನು ನಾವು ಪ್ರತಿ ವರ್ಷ ಕಾಣುತ್ತಿದ್ದೇವೆ. ಆದರೆ ಶಾಶ್ವತವಾದ ಪರಿಹಾರ ಏನು ಕಂಡು ಹಿಡಿಯಬೇಕೆಂದು ನೋಡಬೇಕು. ಪಟ್ಟಣ ಪ್ರದೇಶಗಳಿಗೆ ಶಾಶ್ವತ ಪರಿಹಾರ ಕಾಣುವುದಕ್ಕೆ ಪಟ್ಟಣ ಪ್ರದೇಶಗಳಿಗೆ ಬೆಂಗಳೂರು ಅರ್ಬನ್ ವಾಟರ್ ಸಪ್ಲೈ ಮತ್ತು ಸಿವರೇಜ್ ಬೋರ್ಡ್ ಏನು ಮಾಡಿದ್ದೀರಿ, ಕರ್ನಾಟಕ ಅರ್ಬನ್ ವಾಟರ್ ಸಿವರೇಜ್ ಬೋರ್ಡ್ ಏನು ಮಾಡಿದ್ದೀರಿ, ಅದೇ ರೀತಿ ಗ್ರಾಮೀಣ ಪ್ರದೇಶಗಳಿಗೆ ಇಂತಹ ಒಂದು ಕಾರ್ಪೋರೇಷನ್ ಮಾಡಿ ಅದಕ್ಕೆ ಸಾಲ ಪಡೆದು ಮಾಡುವುದಕ್ಕೆ ಸಾಧ್ಯವಾದರೆ ಗ್ರಾಮೀಣ ಪ್ರದೇಶಗಳಿಗೆ ಇಂತಹ ಒಂದು ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್ ವ್ಯವಸ್ಥೆ ಮಾಡಿ. ಆದರೆ ನಮಗೆ ಆ ದೊಡ್ಡ ಜಲಾಶಯಗಳು ಅಥವಾ ಕೃಷ್ಣೆ ಕಾವೇರಿ ರೀತಿಯ ದೊಡ್ಡ ಯೋಜನೆಗಳು ಇಲ್ಲ. ಆದರೆ ನಮ್ಮಲ್ಲಿ ಪಶ್ಚಿಮ ವಾಹಿನಿ ಎನ್ನುವ ಕಾರ್ಯಕ್ರಮ ಏನು ಮಾಡಿದ್ದಾರೆ ಸಮುದ್ರಕ್ಕೆ ಹೋಗುವ ನೀರು ಅದನ್ನು ನಾನು ಮೊನ್ನೆ ಹೇಳಿದ್ದೆ. ನಮ್ಮಲ್ಲಿ ಎಲ್ಲಾ ಭಾಗಕ್ಕಿಂತ ಹೆಚ್ಚು ಮಳೆ ನೀರು ಬರುತ್ತದೆ. ಆದರೆ ಮಳೆ ನೀರು ಅಲ್ಲಿ ನಿಲ್ಲುವುದಿಲ್ಲ. porous nature of the soil, ಎಲ್ಲಾ ಸಮುದ್ರಕ್ಕೆ ಹೋಗುತ್ತದೆ. ಅದನ್ನು ತಡೆಯುವ ವ್ಯವಸ್ಥೆಗೆ ಉಪ್ಪು ನೀರು ತಡೆ ಅಣೆಕಟ್ಟುಗಳನ್ನು ಪ್ರತಿ ನದಿಗಳಿಗೆ ಮಾಡಿದಾಗ ನಮ್ಮ ರೈತರಿಗೂ ಜಲದ ಮಟ್ಟ ಮೇಲೆ ಬರುತ್ತದೆ. ರೈತರಿಗೆ ನೀರು ಸಿಗುತ್ತದೆ. ಎಲ್ಲ ಬಾವಿಗಳಲ್ಲಿ ಹಾಗೂ ಬೋರ್‌ವೆಲ್‌ಗಲ್ಲಿ ಕುಡಿಯುವ ನೀರಿನ ಮಟ್ಟ ಮೇಲೆ ಬರುತ್ತದೆ. ಅದಕ್ಕೆ ಪ್ರಾಯಶಃ ಕರಾವಳಿ ಪ್ರದೇಶಗಳಲ್ಲಿ, 150–200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ, ಉತ್ತರ ಕರ್ನಾಟಕ, ಉಡುಪಿ ಮತ್ತು ದಕ್ಷಿಣ ಕನ್ನಡಕ್ಕೆ ಸಾಕಾಗಬಹುದು. ಇದರ ಬಗ್ಗೆ ಸರ್ಕಾರ ಯಾವ ಸಣ್ಣ ನೀರಾವರಿ ಇಲಾಖೆಯಲ್ಲಿ ಇದೆ, ಮೇಜರ್ ಇರಿಗೇಷನ್‌ಗೆ ಬಹಳಷ್ಟು ಹಣ ಕೊಡುತ್ತಿದ್ದೀರಿ, ಸಣ್ಣ ನೀರಾವರಿಯನ್ನೂ ಸಹ ನೀರಾವರಿ ನಿಗಮಕ್ಕೆ ಸೇರಿಸಿದ್ದೇವೆಂದು ಹೇಳಿದ್ದಾರೆ. ಅದರ ಮುಖೇನ ಸ್ವಲ್ಪ ಹಣವನ್ನು ಕೊಟ್ಟು ಅಭಿವೃದ್ಧಿ ಮಾಡಿದಾಗ ನಮ್ಮ ಭಾಗದ ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತಾ, ಕಳೆದ ಬಾರಿ ಅನೇಕ ಸ್ನೇಹಿತರು ಹೇಳಿದರು, ನಮ್ಮ ಭಾಗದಲ್ಲಿ ಟ್ಯಾಂಕರುಗಳಲ್ಲಿ ನೀರನ್ನು ಕೊಟ್ಟಿದ್ದೇವೆಂದು. ನಮ್ಮ ಭಾಗಕ್ಕೆ ಬಂದಾಗ ಬಹಳಷ್ಟು ಮಳೆ ಬರುತ್ತದೆ ಎಂದು ಹೇಳಿದರು. ಆದರೆ ಮಂತ್ರಿಗಳು ಒಪ್ಪಿಕೊಂಡರು. ಭೂಮಿಯ ಗುಣಮಟ್ಟದಿಂದ ನೀರು ನಿಲ್ಲುವುದಿಲ್ಲ, ನಾವೂ ಸಹ ಟ್ಯಾಂಕರ್‌ಗಳಿಂದ ನೀರು ಸಪ್ಲೈ ಮಾಡಿದ್ದೇವೆ. ಕರಾವಳಿ ಮಲೆನಾಡಿನಲ್ಲಿ ಮಳೆ ಜಾಸ್ತಿ ಆದರೂ ಸಹ ಟ್ಯಾಂಕರ್‌ಗಳಲ್ಲಿ ಮನೆ ಮನೆಗೆ ನೀರು ಕಳುಹಿಸುವ ಪರಿಸ್ಥಿತಿ ಬಂದಿದೆ. ಇದಕ್ಕೋಸ್ಕರ ಅತಿ ಶೀಘ್ರದಲ್ಲಿ ಇದಕ್ಕೆ ಒಂದು ಪರಿಹಾರವನ್ನು ಕಂಡು ಹಿಡಿಯಬೇಕೆಂದು ಹೇಳುತ್ತೇನೆ. ಮಾನ್ಯ ಸಿದ್ಧರಾಮಯ್ಯನವರು ಇದ್ದರೆ ಅನೇಕ ವಿಷಯಗಳು ಮಾತನಾಡುವುದು ಇತ್ತು, ನಮ್ಮ ಭಾಗದ ಎಲ್ಲಾ ಹೋಟೆಲ್ ಉದ್ದಿಮೆದಾರರು ದೊಡ್ಡ ದೊಡ್ಡ ಹೋಟೆಲ್ ಉದ್ದಿಮೆದಾರರು ಅಲ್ಲ, ಮಧ್ಯಮ

ವರ್ಗದವರೂ ಮತ್ತು ಸಣ್ಣ ವರ್ಗದ ಹೋಟೆಲ್‌ನವರು ಎಲ್ಲಾ ಇದ್ದಾರೆ. ಅವರ ಟ್ಯಾಕ್ಸ್ ಸ್ಟ್ರಕ್ಚರ್ ಹಿಂದೆ ಮಾನ್ಯ ಸಿದ್ಧರಾಮಯ್ಯನವರು ಇದ್ದಾಗ ಎರಡು ಪರ್ಸೆಂಟ್‌ಗೆ ತಂದಿದ್ದು, ಹಿಂದಿನ ಸರ್ಕಾರದವರು ಜಾಸ್ತಿ ಮಾಡಿದ್ದರು. ಅದನ್ನು ಮೊನ್ನೆ ಸಹ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಮಾನ್ಯ ಸಿದ್ಧರಾಮಯ್ಯನವರನ್ನೇ ಕರೆದು ಮನವಿ ಕೊಟ್ಟಿದ್ದಾರೆ. ಅದರಲ್ಲಿ ಪುನಃ ಎರಡು ಲಕ್ಷದಿಂದ 30 ಲಕ್ಷ ರೂಪಾಯಿಗಳವರೆಗೆ ವ್ಯವಹಾರ ಇರುವುದು ಮನ್ನಾ ಮಾಡಬೇಕು. ಎರಡು ಪರ್ಸೆಂಟ್ ಟ್ಯಾಕ್ಸ್ ಅನ್ನು ಉಳಿದವರಿಗೆ ಹಾಕಬೇಕು. ಮತ್ತು ನಾನ್‌ವೆಜ್ ರೆಸ್ಟೋರೆಂಟ್‌ಗಳಿಗೆ 12 ಪರ್ಸೆಂಟ್ ಜಾಸ್ತಿ, 23 ಪರ್ಸೆಂಟ್ ಟ್ಯಾಕ್ಸ್ ಇಂಪೋಸ್ ಮಾಡಿದ್ದು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ. ವ್ಯಾಟ್ ಇಂಟ್ರಡ್ಯೂಸ್ ಮಾಡುವಾಗ ಇದನ್ನು ಸರಿಪಡಿಸಬೇಕೆಂದು ಹೇಳುತ್ತಾ, ಹೋಟೆಲ್ ಪರಿಸ್ಥಿತಿ ನೋಡಿ ಲಕ್ಸುರಿ ಟ್ಯಾಕ್ಸ್ ಹಾಕಬೇಕು. ಎಲ್ಲಾ ಹೋಟೆಲ್‌ಗಳಿಗೆ ಲಕ್ಸುರಿ ಟ್ಯಾಕ್ಸ್ ಹಾಕಿದರೆ ಕೆಲವೊಂದು ಹೋಟೆಲ್‌ಗಳಿಗೆ ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗದೆ ಇರುವ ಪರಿಸ್ಥಿತಿ ಬಂದಿದೆ. ದಯವಿಟ್ಟು ಅದನ್ನು ಮಾಡಿ. ಮೀನುಗಾರಿಕೆ ಇಲಾಖೆಯವರ ಹತ್ತಿರ ನಾನು ಕೇಳಿಕೊಂಡೆ, ಅನೇಕ ವಿಷಯಗಳನ್ನು ಸರಿಪಡಿಸಿಕೊಟ್ಟಿದ್ದಾರೆ. ಒಂದು ನೆಟ್ ಮೇಲಿನ ಟ್ಯಾಕ್ಸ್ ತೆಗೆದಿದ್ದಾರೆ. ಸಲಕರಣೆಗಳ ಮೇಲಿನ ಟ್ಯಾಕ್ಸ್ ತೆಗೆದಿದ್ದಾರೆ. ಅವರು ಮೀನುಗಾರಿಕೆ ಉಪಯೋಗ ಮಾಡುವ ಡೀಸಲ್ ಮೇಲಿನ ದರವನ್ನು 50 ಕಿಲೋ ಲೀಟರ್‌ವರೆಗೆ ಕಡಿಮೆ ಮಾಡಿದ್ದಾರೆ. ಕಳೆದ ಬಾರಿ ಉತ್ತರ ಕೊಡುವಾಗ 75,000 ಕಿಲೋ ಲೀಟರ್ ಕೇಳಿದ್ದಕ್ಕೆ ಅದನ್ನು ಕೊಡುತ್ತೇವೆಂದು ಹೇಳಿದ್ದರು. ಅದನ್ನು ಮಾಡಿಕೊಡಬೇಕೆಂದು ಹೇಳುತ್ತಾ, ಎಕ್ಸೈಸ್‌ನವರು ಸ್ಪಿರಿಟನ್ನು ಪಾನೀಯ ನಿಗಮದಲ್ಲಿ ತಂದರು. ಆದರೆ ಆ ಸಾರಾಯಿ ಮ್ಯಾನುಫ್ಯಾಕ್ಚರ್ ಮಾಡುವುದನ್ನು ಯಾರು, ಸಾರಾಯಿ ಮಾರಾಟ ಮಾಡುತ್ತಾರೆ ಅಂತಹ ಡಿಸ್ಟಿಲರೀಸ್‌ಗೆ ಕೊಟ್ಟರು. ಆದರೆ ಮೇಲಾಸಿಸ್‌ನಲ್ಲಿ ಅವರ ಕೈಗೆ ಸಿಗಲಿಲ್ಲ. ಮಲಾಸಿಸ್ ಲೆಕ್ಕ ತೆಗೆದುಕೊಳ್ಳದೆ ಯಾರು ಸಾರಾಯಿ ತಯಾರು ಮಾಡುತ್ತಾರೆ ಅವರೇ ಡೂಪ್ಲಿಕೇಟ್ ಮಾಡಿ ಮಾರುಕಟ್ಟೆಗೆ ಬರುವ ಪರಿಸ್ಥಿತಿ ಬಂದಿದೆ. ಸಾರಾಯಿಯನ್ನು ಮಾರುಕಟ್ಟೆಗೆ ತರುವಂತಹವರೇ ಬೇರೆ ಬೇರೆ ಕಡೆಯಿಂದ ಅಲ್ಲ, ಯಾರಿಗೆ ಸ್ಪಿರಿಟ್ ಕೊಟ್ಟಿದ್ದಾರೆ, ಮೆಲಾಸ್ ಲೆಕ್ಕ ಹಿಡಿದರೆ ಮಾತ್ರ ಇವರಿಗೆ ಇಷ್ಟು ಸ್ಪಿರಿಟ್ ಬಂದಿದೆ, ಯಾರ್‍ಯಾರು ಯಾವುದಕ್ಕೆ ಉಪಯೋಗ ಮಾಡಿದ್ದಾರೆ ಎಂದು ಲೆಕ್ಕ ಸಿಗುತ್ತದೆ. ಅದು ಬಿಟ್ಟು ಕೇವಲ ಸ್ಪಿರಿಟ್ ಮಾತ್ರ ಲೆಕ್ಕ ತೆಗೆದುಕೊಂಡರೆ ಲೆಕ್ಕ ಸಿಗುವುದಿಲ್ಲ. ಅವರು ಏನು ಮಾಡಿದ್ದಾರೆ ಕಾಸ್ಲಿ ಬ್ರ್ಯಾಂಡ್ ವಿಸ್ಕಿಗಳನ್ನು ಕಡಿಮೆ ಮಾಡಿದ್ದಾರೆ. ಆದರೆ ಕಡಿಮೆ ದರದ ಬ್ರಾಂಡ್‌ಗಳನ್ನು ಕಡಿಮೆ ಮಾಡಿಲ್ಲ. ಏಕೆಂದರೆ ಸಾರಾಯಿಯವರಿಗೆ ಹೊಡೆತ ಬೀಳುತ್ತದೆ. ಸಾರಾಯಿಗಿಂತ ಕಳ್ಳ ಸಾರಾಯಿ ವ್ಯವಹಾರ ಯಾರು ಮಾಡುತ್ತಾರೆ ಅವರಿಗೆ ಹೊಡೆತ ಬೀಳುತ್ತದೆ. ಅದಕ್ಕೋಸ್ಕರ ಮಾನ್ಯ ಉಪ ಮುಖ್ಯಮಂತ್ರಿಗಳ ಹತ್ತಿರ ಕೇಳುತ್ತೇನೆ, ಅವರು ಚೀಪರ್ ಬ್ರ್ಯಾಂಡ್ ಇನ್ನೂ ಚೀಪರ್ ಮಾಡಿ ಇವರಿಗೆ ಅದರಲ್ಲಿ ಲಾಭ ಸಿಗುವ ಹಾಗೆ ಮಾಡಿ ಕಮರಿ ಪಟ್ಟಿ ಉಳಿಯುವುದಿಲ್ಲ, ಯಾವುದೂ ಉಳಿಯುವುದಿಲ್ಲ. ಅವರು ಇದನ್ನು ಗಮನಕ್ಕೆ ತೆಗೆದುಕೊಳ್ಳದೆ ಹೋದರೆ ಇವರು ಏನು ಬದಲಾವಣೆ ತಂದಿದ್ದಾರೆ ಅದಕ್ಕೆ ಅವರು ಹೇಳುತ್ತಾರೆ 500 ಕೋಟಿ ರೂಪಾಯಿ ಜಾಸ್ತಿ ಆದಾಯ ಬಂದಿದೆ ಎಂದು ಅದಕ್ಕಿಂತ ಜಾಸ್ತಿ ಬರಬೇಕಾದರೆ ಈ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗುತ್ತದೆ ಎಂದು ಹೇಳುತ್ತಾ, ಇನ್ನು ಶಿಕ್ಷಣ ಇಲಾಖೆಯಲ್ಲಿ ಟ್ರೈಮಿಸ್ಟರ್ ಪದ್ಧತಿ ತಂದರು. ಬಂದ ತಕ್ಷಣ ಅದು ಪ್ರಯೋಜನ ಇಲ್ಲ ಇದನ್ನು ಬರುವ ವರ್ಷದಿಂದ ತೆಗೆಯಬೇಕೆಂದು ಆಲೋಚನೆ ಪ್ರಾರಂಭವಾಗಿದೆ. ಮಕ್ಕಳನ್ನು ಗಿನ್ನಿಪಿಗ್

ರೀತಿ ಪ್ರಯೋಗ ಮಾಡುತ್ತಿದ್ದಾರೆ. ಮಕ್ಕಳಿಗೆ ಯಾವ ರೀತಿ ಒಂದು ವರ್ಷ ಈ ಪದ್ಧತಿ ತರುವುದು, ಬರುವ ವರ್ಷ ಪದ್ಧತಿ ಬದಲಾವಣೆ ಮಾಡುವುದು ಇದು ಎಂಥದ್ದು, ಅವರು ಔಷಧಿಯನ್ನು ಗಿನ್ನಿಪಿಗ್ ಮೇಲೆ ಪ್ರಯೋಗ ಮಾಡಿ ಇನ್ನೂ ಒಂದು ಇದೆ ಥರ್ಡ್ ಡಿಗ್ರಿ ಟೆಸ್ಟ್ ಎಂದು, ಕಳೆದ ಬಾರಿ ಬಿ.ಆರ್. ಪಾಟೀಲರು ಇದೇ ಸದನದಲ್ಲಿ ಎತ್ತಿದ್ದರು. ಯುವಕರು ಮತ್ತು ಯುವತಿಯರನ್ನು ಕರೆದು ಕೋರಮಂಗಲದ ಒಂದು ಲ್ಯಾಬೊರೇಟರಿಯಲ್ಲಿ ಒಂದು ಇಂಜೆಕ್ಷನ್ ಕೊಟ್ಟು ಪರೀಕ್ಷೆ ಮಾಡುವುದು. ಆ ಔಷಧಿ ಮನುಷ್ಯರ ಮೇಲೆ ಹೇಗೆ ಪರಿಣಾಮ ಆಗುತ್ತದೆ ಎಂದು ನೋಡುವುದು. ಪ್ರಾಯಶಃ ಮಕ್ಕಳ ಮೇಲೆ ಇದೇ ಪ್ರಯೋಗ ಮಾಡುತ್ತಿದ್ದೀರಿ. ದಯವಿಟ್ಟು ಇದರ ಆಗುಹೋಗುಗಳ ಬಗ್ಗೆ ಮೊದಲು ಆಲೋಚನೆ ಮಾಡಿ. ಶಿಕ್ಷಣ ತಜ್ಞರ ಸಹಾಯ ಪಡೆದು ಚರ್ಚೆ ಮಾಡಿ. ಕೇವಲ ನಿಮ್ಮ ಬೇರೆ ಬೇರೆ ಸ್ನೇಹಿತರು ಮತ್ತು ಅಧಿಕಾರಿ ವರ್ಗದವರು ಇಂತಹವರು ಅಲ್ಲ, ಶಿಕ್ಷಣ ಇಲಾಖೆಯಲ್ಲಿ 50 ವರ್ಷ ಕೆಲಸ ಮಾಡಿದವರು ಏನಿದ್ದಾರೆ ಅವರ ಹತ್ತಿರ ಚರ್ಚೆ ಮಾಡಿ ಇದರ ಬಗ್ಗೆ ಬದಲಾವಣೆ ಮಾಡುವಾಗ ಸ್ವಲ್ಪ ಆಲೋಚನೆ ಮಾಡಿ. ಈ ವರ್ಷ ಟ್ರೈಮಿಸ್ಟರ್‌ನಲ್ಲಿ ಇದ್ದವರು ಬರುವ ವರ್ಷ ಏನು ಮಾಡಬೇಕು, ಪುನಃ ವಾಪಸ್ ಹಳೆಯ ಪದ್ದತಿಗೆ ಹೋಗಬೇಕಾಗುತ್ತದೆ ಅವನು ಇಲ್ಲಿ ಅಡ್ಜಸ್ಟ್ ಆಗುವಾಗ ಪುನಃ ವಾಪಸ್ ತೆಗೆದುಕೊಳ್ಳುವುದು. ಇದು ದುರಂತ. ದಯವಿಟ್ಟು ಇದನ್ನು ಮಾಡಬೇಡಿ. ಸಿಇಟಿ ಬಗ್ಗೆ ಈಗಲೆ ನೀವು ತೀರ್ಮಾನ ತೆಗೆದುಕೊಂಡು ಪರಿಹಾರ ತೆಗೆದುಕೊಳ್ಳದೆ ಇದ್ದರೆ ಸುಪ್ರೀಂ ಕೋರ್ಟ್‌ಗೆ ನೀವು ಒಂದು ಮಾತು ಹೇಳಬೇಕಾಗುತ್ತದೆ. ಅವರು ಕ್ರಾಸ್ ಸಬ್ಸಿಡೈಸ್ ಮಾಡಬಾರದು ಎಂದು ಹೇಳಿದ್ದರು. ಅವರು ಮಾಡಿದ್ದು ಪುನಃ ಕ್ರಾಸ್ ಸಬ್ಸಿಡೈಸ್ ಮಾಡಿದ್ದಾರೆ. ಮೊದಲು 15 ಪರ್ಸೆಂಟ್ ಮ್ಯಾನೇಜ್‌ಮೆಂಟ್‌ಗೆ ಇತ್ತು, ಶೇಕಡ 85 ಕಾಲೇಜ್ ಮ್ಯಾನೇಜ್‌ಮೆಂಟ್‌ಗೆ ಇತ್ತು. ಇವತ್ತು ಏನಾಗಿದೆ ಎಂದರೆ, ಮೆರಿಟ್ ಲಿಸ್ಟ್ ಒಂದು, ಸರ್ಕಾರ ನಿಗದಿಪಡಿಸುವುದು ಒಂದು ಆಮೇಲಿ ಮುರಗೋಡು ಸಮಿತಿ ಆಮೇಲೆ ಕಾಮೆಡ್ ಕೆ. ಇದು ಏನು ಕ್ರಾಸ್ ಸಬ್ಸಿಡೈಸ್ ಮಾಡಿದ್ದು ಅಲ್ಲವ? ಮ್ಯಾನೇಜ್‌ಮೆಂಟ್‌ಗೆ ಹೆಚ್ಚು ಲಾಭದಾಯಕವಾಗಿ ಕ್ರಾಸ್ ಸಬ್ಸಿಡೈಸ್ ಯಾವುದು ಆಗಿದೆ ಅದನ್ನು ಜಾರಿಗೆ ತಂದಿದ್ದೀರಿ. ಸುಪ್ರೀಂಕೋಟ್‌ನವರೂ ಮಾಡಿದ್ದು ಅದೇ ತಪ್ಪು.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು): ಇದರ ಬಗ್ಗೆ ಈಗಾಗಲೇ ಚರ್ಚೆ ಮಾಡಿದ್ದೇವೆ. ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಇದೆ. ಅದು ಬಹುತೇಕ ಈ ವಾರದಲ್ಲಿ ಅಥವಾ 15 ದಿವಸಗಳಲ್ಲಿ ತೀರ್ಮಾನವಾಗುತ್ತದೆ. ಅದಾದ ಮೇಲೆ ನಾವು ಕುಳಿತು ಮತ್ತೆ ಮಾತನಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಕಳೆದ ಸಾರಿ ತಂದಿದ್ದೂ ಸಹ ಕ್ರಾಸ್ ಸಬ್ಸಿಡೈಸ್ ಮಾಡಿದ ಹಾಗೆ ಆಗಿದೆ. ಹಳೆಯ ಪದ್ಧತಿ ತನ್ನಿ, ಬೇಕಾದರೆ 15 ರಿಂದ 25 ತೆಗೆದುಕೊಂಡು ಹೋಗಿ. ಉಳಿದ ಮಕ್ಕಳಿಗೆ 45 ರಿಂದ 50 ಸಾವಿರ ರೂ.ನಲ್ಲಿ ಸೀಟ್ ಕೊಡಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನನಗೆ ಬಂದ ಮಾಹಿತಿ ಪ್ರಕಾರ ನಾವು ಏನು ನಿಯೋಗ ಹೋಗಿ ಕೇಂದ್ರ ಸರ್ಕಾರವನ್ನು ಕೇಳಿದ್ದೆವು, ಸೆಂಟ್ರಲ್ ಲೆಜಿಸ್ಲೇಷನ್ ತರಬೇಕೆಂದು ಹೇಳಿದ್ದವು. ಸೆಂಟ್ರಲ್ ಗವರ್ನಮೆಂಟ್ ಸುಪ್ರೀಂ ಕೋರ್ಟ್ ಮುಂದೆ ನಿನ್ನೆ ಅಫಿಡವಿಟ್ ಹಾಕಿದೆಯಂತೆ. There is no time limit to frame the Central legislation ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅಫಿಡವಿಟ್ ಹಾಕಿದ್ದಾರಂತೆ ನೋಡಿ. ಏಕೆಂದರೆ We are all expecting

and depending on the Central legislation to solve this problem. But I got information from the sources that the Central Government day before yesterday filed an affidavit stating that there is no time limit for passing Central legislation ಎಂದು ಹೇಳಿರುವುದರಿಂದ ಇದು ಸೀರಿಯಸ್ ಆದಂಥದ್ದು; ಬಿಕ್ಕಟ್ಟಿಗೆ ಸಿಕ್ಕಿಹಾಕಿಕೊಳ್ಳುವಂಥ ಸ್ಥಿತಿ ಇದೆ. ಹಾಗಾಗಿ ಈಗಲೇ ಏನಾದರೂ ಅದಕ್ಕೆ ಪ್ರಯತ್ನ ಮಾಡಿ. ಇಲ್ಲದೇ ಹೋದರೆ ನೀವು ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತೀರಿ.

ಶ್ರೀ ಡಿ.ಮಂಜುನಾಥ್(ಉನ್ನತ ಶಿಕ್ಷಣ ಸಚಿವರು):- ಕಳೆದ ತಿಂಗಳು ಸೆಂಟ್ರಲ್ ಮಿನಿಸ್ಟರ್ ಇಲ್ಲಿಗೆ ಬಂದಾಗ ಇಡೀ ರಾಷ್ಟ್ರದಲ್ಲಿರುವ ರಾಜ್ಯಗಳ ಶಿಕ್ಷಣ ಮಂತ್ರಿಗಳ ಸಮ್ಮೇಳನ ಆಯಿತು. ಆಗ ಅವರು ಏನು ಹೇಳಿದರು ಎಂದರೆ ಮುಂದೆ ಲೋಕಸಭಾ ಅಧಿವೇಶನ ಪ್ರಾರಂಭವಾದಾಗ ಈ ಬಗ್ಗೆ ಚರ್ಚೆ ಮಾಡತ್ತೇವೆ ಎಂದು ಹೇಳಿದರು. ನಾವು ಒತ್ತಾಯ ಮಾಡಿದ್ದೇವೆ. ಕಡೇ ಪಕ್ಷ ಆರ್ಡಿನೆನ್ಸ್‌ನ್ನು ಆದರೂ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದೇವೆ. ಆದರೂ ಅವರು ಹಾಗೆ ಮಾಡುವುದು ಬೇಡ, ಮುಂದಿನ ಲೋಕಸಭಾ ಅಧಿವೇಶನದಲ್ಲಿ ಈ ವಿಷಯದ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಏಕೆಂದೆ ಸಧ್ಯಕ್ಕೆ ಬಹುತೇಕ ಸೆಂಟ್ರಲ್ ಲೆಜಿಸ್ಲೇಶನ್ ಆಗುವುದಿಲ್ಲ. ಅದಕ್ಕೋಸ್ಕರವೇ ನಾವು ಇಲ್ಲಿ ಏನಾದರೂ ಮಾಡಿ ಒಂದು ರೀತಿಯಲ್ಲಿ ತೀರ್ಮಾನ ಮಾಡಿ ಮಕ್ಕಳಿಗೆ ಹಾಗೂ ಪೋಷಕರಿಗೆ ಅನುಕೂಲ ಹಾಗುವ ರೀತಿಯಲ್ಲಿ ಮಾಡೋಣ ಎಂದು ಯೋಚನೆ ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನೀವು ಆ ಪ್ರಯತ್ನವನ್ನು ಮಾಡಿ. ಆದರೆ ನಾವು ಏನು ಕೇಂದ್ರ ಸರ್ಕಾರಕ್ಕೆ ಸೆಂಟ್ರಲ್ ಲೆಜಿಸ್ಲೇಶನ್ ತರಬೇಕು ಎಂದು ಒತ್ತಾಯ ಮಾಡಿದ್ದೇವೆ ಎಲ್ಲರೂ ಹೋಗಿ ಅಲ್ ಪಾರ್ಟಿ ಡೆಲಿಗೇಶನ್, ಅದಕ್ಕೆ ಮಾನ್ಯ ಅರ್ಜುನ್‌ಸಿಂಗ್ ಇಲ್ಲಿಗೆ ಬಂದಾಗ ಏನು ಹೇಳಿದ್ದರು Contrary to that, day before yesterday they have filed an affidavit before the Supreme Court stating that, there is no time and we are not fixed time limit for passing the central legislation. They may pass or they may not pass in the next coming Session.

ಶ್ರೀ ಡಿ.ಮಂಜುನಾಥ್:- ನೋಡೋಣ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಆಮೇಲೆ ಹೊಸ ಕಾಲೇಜ್‌ಗಳನ್ನು ಕೊಟ್ಟಿರುವ ಬಗ್ಗೆ ನಿನ್ನೆ ಹೇಳಿದಿರಿ. ಹೊಸ ಕಾಲೇಜುಗಳನ್ನು ಕೊಡುತ್ತಿದ್ದೀರಿ, ಆದರೆ ಅದಕ್ಕೆ ಟ್ರೈನ್ಡ್ ಸ್ಟಾಫ್ ಇದ್ದಾರಾ?

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ Before you go for the Second Pre-University, that is a very crucial stage. ಈಗ ಪಿ.ಯು.ಸಿ. ಎಜುಕೇಷನ್ ಮಂಜುನಾಥ್‌ರವರಿಗೆ ಬರುತ್ತದೋ ಅಥವಾ ರೆಡ್ಡಿಯವರಿಗೆ ಬರುತ್ತದೋ ಗೊತ್ತಿಲ್ಲ. ನೇಬರ್‌ಹುಡ್ ಸ್ಕೂಲ್ಸ್‌ಗಳಲಿ ಅಡ್ಮಿಶನ್ಸ್ ಪ್ರೀಯುನಿವರ್ಸಿಟಿಯದು, ಅದರ ಬಗ್ಗೆ ನೋಡಬೇಕು. ಏಕೆಂದರೆ ಆ ಮಕ್ಕಳು ಪಿ.ಯು.ಸಿ. ಅಡ್ಮಿಶನ್ಸ್‌ಗೆ ಬರುವಷ್ಟು ಹೊತ್ತಿಗೆ ಮಕ್ಕಳ ತಂದೆ

ತಾಯಿಗಳನ್ನು ಗೋಳಾಡಿಸುತ್ತಾರೆ ಗೊತ್ತೆ? ಮತ್ತೆ ಆ ದುಡ್ಡಿನ ವ್ಯವಹಾರ, ರಾಜಕಾರಣಿಗಳ ಹತ್ತಿರ ಸುತ್ತುವುದು, ಆಫೀಸರ್‌ಗಳ ಹತ್ತಿರ ಸುತ್ತುವುದು, that is something terrible. They should take a very serious note of it.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ನೇಬರ್‌ಹುಡ್ ಸ್ಕೂಲ್ಸ್ ಬಗ್ಗೆ ಒಂದು ಕಾನೂನು ಮಾಡಿ, ಆ ಕಾನೂನಿನ ಅಡಿಯಲ್ಲಿ ಅವುಗಳನ್ನು ತರಬೇಕಾಗುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಇದು ಒಂದು ವಿಚಾರ. ಎರಡನೆಯದಾಗಿ, ಟ್ಯೂಶನ್ ಹಾವಳಿ ಬಗ್ಗೆ ಹೇಳುವುದಾದರೆ. . .

ಶ್ರೀ ಡಿ. ಮಂಜುನಾಥ್:– ಈಗೇನಾಗಿದೆಯೆಂದರೆ ಎಲ್ಲರೂ ಸಹ ಬೆಂಗಳೂರಿಗೆ ಬರಬೇಕು ಎನ್ನುತ್ತಾರೆ, ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್‌ಗೆ ಬರಬೇಕು ಎನ್ನುತ್ತಾರೆ, ಹೀಗಾಗಿ ನೇಬರಿಂಗ್ ಸ್ಕೂಲ್ಸ್ ಏನಿವೆ ಪಿ.ಯು.ಸಿ.ಯಲ್ಲಿ ಅಲ್ಲಿ ಸ್ಟ್ರೆಂಗ್ತ್ ಇಲ್ಲದೇ ಕೆಲವು ಮುಚ್ಚುವ ಸ್ಟೇಜ್‌ಗೆ ಬಂದಿವೆ. ಅದಕ್ಕೇ ಆ ಬಗ್ಗೆ ಆಲೋಚನೆಯನ್ನು ಮಾಡುತ್ತೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ನಾನು ಅವರ ಬಗ್ಗೆ ಹೇಳಲಿಲ್ಲ. ಬೆಂಗಳೂರಿನಲ್ಲಿ ಇರುವವರ ಗತಿ ಹೇಳಿ, ಅಡ್ಮಿಶನ್ಸ್ ಇಲ್ಲದೇ ಇರುವುದನ್ನು ಬೇಕಾದರೆ ನೀವು ಮುಚ್ಚಿಬಿಡಿ. ಆದರೆ ನಾವು ಹೇಳುತ್ತಿರುವುದು ಬೆಂಗಳೂರಿನಲ್ಲಿ ಆಗುತ್ತಿರುವ ಬಗ್ಗೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಮಂತ್ರಿಗಳೆ, ರೂರಲ್‌ನಲ್ಲಿ ನೀವು ಪಿ.ಯು.ಸಿ. ಕಾಲೇಜ್ ಕೊಡುತ್ತೀರಿ. ಆದರೆ ಅಲ್ಲಿಗೆ ಮೇಷ್ಟ್ರುಗಳನ್ನು ಹಾಕುವುದಿಲ್ಲ, ಜವಾನರು ಇರುವುದಿಲ್ಲ, ಲ್ಯಬೋರೇಟರಿ ಇರುವುದಿಲ್ಲ, ಪುಸ್ತಕಗಳು ಇರುವುದಿಲ್ಲ, ಬಿಲ್ಡಿಂಗ್ ಇರುವುದಿಲ್ಲ, ಹೀಗೆ ಅಲ್ಲಿ ಪಾಠವೇ ಇಲ್ಲದಿರುವಾಗ ಅಲ್ಲಿ ಕಾಲೇಜ್ ತಾನೇ ಹೇಗೆ ನಡೆಯುತ್ತದೆ? ಅಲ್ಲಿ ಕಾಲೇಜ್ ಓಪನ್ ಮಾಡಿದರೂ ಏನು ಪ್ರಯೋಜನವಾಗುತ್ತದೆ ಹೇಳಿ. ಅದಕ್ಕೋಸ್ಕರವೇ ಡಿಸ್ಟ್ರಿಕ್ಟ್‌ಗೆ ಬರುವುದು.

ಶ್ರೀ ಡಿ. ಮಂಜುನಾಥ್:– ಅಲ್ಲೇನಾಗಿದೆ ಎಂದರೆ. . .

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಂತ್ರಿಗಳೇ, ನಾನು ಮೊದಲು ಹೇಳಿಬಿಡುತ್ತೇನೆ. ಆಮೇಲೆ ನೀವು ಉತ್ತರ ಕೊಡಿ. ಈಗ ನೀವು ಸರ್ಕಾರದಲ್ಲಿ ರಿಕ್ರೂಟ್‌ಮೆಂಟ್ ಮಾಡಿ ಉದ್ಯೋಗ ಕೊಡುವುದನ್ನು ಕಡಿಮೆ ಮಾಡಿದ್ದೀರಿ. ರಿಕ್ರೂಟ್‌ಮೆಂಟ್‌ನ್ನು ನೀವು ರೆಡ್ಯೂಸ್ ಮಾಡುತ್ತಿದ್ದೀರಿ. ಈಗ ಉದ್ಯೋಗಕ್ಕೆ ಖಾಸಗಿ ಸಂಸ್ಥೆಗಳಿಗೆ ಹೋಗಬೇಕಾಗಿದೆ. ಖಾಸಗಿ ಸಂಸ್ಥೆಗಳವರು ಎಂದರೆ ಯಾವ ತರಹದ್ದು ಬಿ.ಪಿ.ಓ. ಅಂದರೆ ಬಿಸಿನೆಸ್ ಪ್ರೋಸೆಸ್ ಔಟ್‌ಸೋರ್ಸಿಂಗ್, ಅವರು ಏನು ಮಾಡುತ್ತಾರೆಂದರೆ ಇಂಗ್ಲೀಷ್ ಮಾತನಾಡಲು ಬಂದವರನ್ನು ಮಾತ್ರ ಉದ್ಯೋಗಕ್ಕೆ ತೆಗೆದುಕೊಳ್ಳುತ್ತಾರೆ. ಕನ್ನಡ ಶಾಲೆಗಳಲ್ಲಿ ಇಂಗ್ಲೀಷ್ ಕಲಿಯಲು ಮಕ್ಕಳಿಗೆ ಆಗುತ್ತಿಲ್ಲ. ಆದರೆ ಪ್ರತಿಯೊಬ್ಬ ತಂದೆ ತಾಯಿಗಳು ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಕಳುಹಿಸಬೇಕೆಂದು ತೀರ್ಮಾನ ಮಾಡಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ತಪ್ಪು ತಿಳಿದುಕೊಳ್ಳದಿದ್ದರೆ ಒಂದು ಮಾತನ್ನು ಹೇಳುತ್ತೇನೆ. ನಾನು ಎಲ್ಲಾ ಕಡೆ ಹೇಳುತ್ತೇನೆ, ನಮ್ಮ ಮಕ್ಕಳು, ಇಲ್ಲಿರುವವರ ಎಲ್ಲರ ಮಕ್ಕಳು, ಮೊಮ್ಮಕ್ಕಳು ಇಂಗ್ಲಿಷ್ ಮೀಡಿಯಂ ಶಾಲೆಗೇ ಹೋಗುವುದು. ಆದರೆ ಇಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನೆ ಮುಂದುವರಿಸಬೇಕು ಎಂದು ಹೇಳುವುದು, ಕನ್ನಡ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸಬಾರದು ಎಂದು ಹೇಳುವಂಥದ್ದು. ಆಮೇಲೆ ಉತ್ತರ ಹೇಳಿ.

ಶ್ರೀ ವಾಟಾಳ್ ನಾಗರಾಜ್:- ನನ್ನ ಇಬ್ಬರೂ ಮಕ್ಕಳು ಕನ್ನಡ ಮಾಧ್ಯಮದಲ್ಲಿಯೇ ಓದಿದ್ದು, ಈಗ ಇಬ್ಬರಿಗೂ ಮದುವೆಯಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಇರಬಹುದು. ಆದರೆ ಅವರ ಮಕ್ಕಳು? ಅದನ್ನೇ ನಾನು ಹೇಳಿದ್ದು ಅವರ ಮಕ್ಕಳು ಇಂಗ್ಲಿಷ್ ಮೀಡಿಯಂ ಸ್ಕೂಲ್‌ಗೆ ಹೋಗುತ್ತಾರೆ. ನಾನು ಆಗಲೇ ಬರೇ ಮಕ್ಕಳು ಎಂದು ಹೇಳಲಿಲ್ಲ. ಮಕ್ಕಳು, ಮೊಮ್ಮಕ್ಕಳು ಎಂದು ಹೇಳಿದ್ದು. ಅದಕ್ಕೆ ಕಾರಣ ಇದೆ. ಆದರೆ ಹಳ್ಳಿಯಲ್ಲಿದ್ದ ಮಕ್ಕಳಿಗೆ ಇಂಗ್ಲಿಷ್‌ನ್ನು ನೀವು ಕಲಿಸುವುದಿಲ್ಲ. ಇಂಗ್ಲಿಷ್ ಮೀಡಿಯಂ ಸ್ಕೂಲ್‌ಗೆ ಹೋಗುವುದಕ್ಕೆ ಹಳ್ಳಿಯಲ್ಲಿ ಆಗುವುದಿಲ್ಲ. ಅಲ್ಲಿ ಇಂಗ್ಲಿಷ್‌ನ್ನು ಕಲಿಸುವುದಿಲ್ಲ. ಅವರಿಗೆ ಇಂಗ್ಲಿಷ್ ಮಾತನಾಡುವುದಕ್ಕೆ ಬರುವುದಿಲ್ಲ. ಆ ಮಕ್ಕಳು ನಮ್ಮ ಮಕ್ಕಳೊಂದಿಗೆ ಸ್ಪರ್ಧೆಯನ್ನು ಮಾಡಬಾರದು ಎನ್ನುವ ಉದ್ದೇಶ ಇದ್ದರೂ ಇರಬಹುದು. ನೀವು ನೋಡಿ, ಯಾರಿಗಾದರೂ ಇಂಗ್ಲಿಷ್ ಮಾತನಾಡುವುದಕ್ಕೆ ಬರದಿದ್ದವರಿಗೆ ಇವೊತ್ತು ಎಲ್ಲಾದರೂ ಉದ್ಯೋಗ ನೀವು ಕೊಡಿಸಿಕೊಟ್ಟರೆ ನಾನು ಎಲ್ಲರನ್ನೂ ನಿಮ್ಮ ಮನೆ ಬಾಗಿಲಿಗೆ ಕಳುಹಿಸಿಕೊಡುತ್ತೇನೆ. ಆಗ ನಾನು ಸರೆಂಡರ್ ಆಗಿ ನನ್ನ ತಪ್ಪನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರತಿಯೊಂದು ಸಂಸ್ಥೆಯಲ್ಲೂ ಕೂಡ ಇಂಗ್ಲಿಷ್ ಬರದಿದ್ದವರಿಗೆ ಕೆಲಸವನ್ನು ಕೊಡುವುದಿಲ್ಲ. ಈ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಅದಕ್ಕೋಸ್ಕರ ಪ್ರತಿಯೊಬ್ಬರೂ ಇಂಗ್ಲಿಷ್ ಕಲಿಯಬೇಕಾಗಿದೆ. ದಯವಿಟ್ಟು ನೀವು ಸರ್ಕಾರಿ ಶಾಲೆಗಳಲ್ಲಿ ಒಂದು ಗಂಟೆ ಕಾಲಾವಧಿಯಲ್ಲಿ ಇಂಗ್ಲಿಷ್‌ನ್ನು ಕಲಿಸಿ. ಇಂಗ್ಲಿಷ್ ಮೀಡಿಯಂ ಬೇಕಾಗಿಲ್ಲ. ಇಂಗ್ಲಿಷ್‌ನ್ನು ತರಗತಿಗಳಲ್ಲಿ ಪ್ರಾರಂಭ ಮಾಡಿ. ಮಕ್ಕಳ ತಂದೆ ತಾಯಿಗಳು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಾರೆ. ಅದ್ದರಿಂದ ಜನರಿಗೆ ಏನು ಬೇಕೋ ಅದನ್ನು ಮಾಡಬೇಕು ನಾವು, ಅದನ್ನು ಬಿಟ್ಟು ನಮಗೆ ಬೇಕಾದ್ದನ್ನು ಜನರ ಮೇಲೆ ಹೇರಬಾರದು. ಇನ್ನು ತಾವು ಹೊಸದಾಗಿ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯಲು ಅವಕಾಶ ಮಾಡಿಕೊಡುತ್ತಿದ್ದೀರಿ. ನಿಮಗೆ ಟ್ರೈನ್ಡ್ ಸ್ಟಾಫ್ ಸಿಗುತ್ತಾರಾ? ಮೆಡಿಕಲ್‌ಗೂ ಇಲ್ಲ, ಇಂಜಿನಿಯರಿಂಗ್‌ಗೂ ಇಲ್ಲ, ಇವೊತ್ತು ನೀವು ಕೊಟ್ಟ ಇಂಜಿನಿಯರಿಂಗ್, ನರ್ಸಿಂಗ್, ಮೆಡಿಕಲ್ ಕಾಲೇಜುಗಳು ಮುಂದೊಂದು ದಿನ ಜಾಹಿರಾತನ್ನು ಕೊಟ್ಟು ಕಾಲೇಜುಗಳು ಮಾರಾಟಕ್ಕೆ ಇವೆ ಎಂದು ಹೇಳಬಹುದು. ಏಕೆಂದರೆ ಆ ಕಾಲೇಜುಗಳನ್ನು ನಡೆಸುವುದಕ್ಕೆ ಅವರಿಗೆ ಆಗುವುದಿಲ್ಲ. ಕೆಲವರು ಕಾಲೇಜುಗಳನ್ನು ತೆರೆದದ್ದು ಅದೇ ಉದ್ದೇಶದಿಂದ ಇರಬಹುದು, ಒಂದು ಕಡೆ ಕಾಲೇಜುಗಳನ್ನು ತೆರೆಯುವುದು, ಇನ್ನೊಂದು ಕಡೆ ಮಾರಾಟ ಮಾರುವುದು. ನೀವು ಬೇಕಾದರೆ ಪಟ್ಟಿಯನ್ನು ತರಿಸಿ ನೋಡಿ, ಯಾರು ಯಾರು ಕಾಲೇಜ್‌ಗಳನ್ನು ತೆರೆಯಲು ಅನುಮತಿಯನ್ನು ತೆಗೆದುಕೊಂಡಿದ್ದಾರೆ ಅವರುಗಳೇನಾದರೂ ಕಾಲೇಜ್‌ಗಳನ್ನು ನಡೆಸುತ್ತಿದ್ದಾರೆಯೇ ಎಂಬುದನ್ನು ನೋಡಿ. ಇನ್ನು ನಿನ್ನೆಯ ದಿವಸ ವೈದ್ಯರುಗಳು ಗ್ರಾಮಾಂತರ ಪ್ರದೇಶಕ್ಕೆ ಹೋಗುವುದಿಲ್ಲ ಎಂಬ ಬಗ್ಗೆ ಚರ್ಚೆಯಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಅವರು ಮಾತನಾಡುವುದಕ್ಕೆ ಖಂಡಿತವಾಗಿಯೂ ನನ್ನ ಅಭ್ಯಂತರವಿಲ್ಲ. ಏಕೆಂದರೆ ಮಾತನಾಡಲು ಬಹಳಷ್ಟು ವಿಷಯಗಳೂ ಇವೆ ಹಾಗೂ ಅವರು ಮಾಜಿ ಸಚಿವರಾಗಿರುವುದರಿಂದ ಅವರಿಗೆ ಬಹಳಷ್ಟು ಅನುಭವವೂ ಇದೆ. ಮಾನ್ಯ ಅಧ್ಯಕ್ಷರೆ, ನಾನು ನಿಮ್ಮನ್ನು ಕೇಳುತ್ತೇನೆ, ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. 79 ಶಾಸಕರು ನಮ್ಮ ಕಡೆಯವರು ಇಲ್ಲಿಗೆ ಬಂದಿರುವವರು ನಾವೇನು ಮಾಡಬೇಕು ಹೇಳಿ. ಜನಕ್ಕೇನು ನಾವು

ಉತ್ತರ ಕೊಡಬೇಕು ಹೇಳಿ. ನಾನು ತಮಗೆ ಮಾರ್ಗದರ್ಶನ ಕೊಡುವುದಿಲ್ಲ. ಈಗ ಲೋಕಸಭೆಯಲ್ಲಿ ಒಂದು ಸಿಸ್ಟಂ ಇದೆ ಎಂದು ನಾನು ತಮಗೆ ಅತ್ಯಂತ ಗೌರವದಿಂದ ಹೇಳಬಯಸುತ್ತೇನೆ. ಅಲ್ಲಿ ಪ್ರಾತಿನಿಧ್ಯಕ್ಕೆ ತಕ್ಕಂತೆ ಸಮಯವನ್ನು ನಿಗದಿ ಮಾಡುತ್ತಾರೆ. ಆ ರೀತಿ ತಾವು ನಿಗದಿ ಮಾಡುತ್ತೀರಾ? ಇಲ್ಲದಿದ್ದರೆ ನಮ್ಮ ಶಾಸಕರು ಕ್ಷೇತ್ರಕ್ಕೆ ವಾಪಸ್ಸು ಹೋದಾಗ ಏನು ಉತ್ತರ ಕೊಡಬೇಕು ಹೇಳಿ. ಪ್ರತಿಪಕ್ಷವಾಗಿರುವ ನಮಗೆ ನಾವು ಏನು ಮಾಡಬೇಕು ಎಂದು ತಾವು ಮಾರ್ಗದರ್ಶನ ಮಾಡಿ. ಸಭಾನಾಯಕರು ನನಗೆ ಮಾರ್ಗದರ್ಶನ ಮಾಡಲಿ. ತಾವು ನಮಗೆ ಮಾರ್ಗದರ್ಶನ ಮಾಡದಿದ್ದರೆ ನಾವು ಇಲ್ಲಿ ಕಾರ್ಯಕಲಾಪ ನಡೆಸುವುದಕ್ಕೆ ಆಗುವುದಿಲ್ಲ ಸಾರ್. ಜನರು ಕ್ಷೇತ್ರಗಳಲ್ಲಿ ನಮಗೆ ನೀವು ಶಾಸನಸಭೆಗೆ ಹೋಗಿ ಏನು ಮಾಡುತ್ತಿದ್ದಿರಿ ಎಂದು ಕೇಳುತ್ತಾರೆ. ಮಾನ್ಯ ಅಧ್ಯಕ್ಷರೆ, ತಾವು ಅಧಿವೇಶನವನ್ನು ಸೋಮವಾರ, ಮಂಗಳವಾರದವರೆಗೂ ವಿಸ್ತರಣೆ ಮಾಡಿ. ನಾವು ಇನ್ನೇನನ್ನೂ ಮಾಡುವುದಕ್ಕಾಗುವುದಿಲ್ಲ. ಅಧಿವೇಶನ ಪ್ರಾರಂಭವಾದಾಗಿನಿಂದ ಒಂದು ನಿಮಿಷವನ್ನೂ ವೇಸ್ಟ್ ಮಾಡದೇ ನಿಮಗೆ ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟಿದ್ದೇವೆ. ಆದ್ದರಿಂದ ದಯಮಾಡಿ ತಾವು ಪ್ರತಿಪಕ್ಷಕ್ಕೆ ಸಮಯವನ್ನು ನಿಗದಿ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ:– ಅಸೆಂಬ್ಲಿ ಶುರುವಾದಾಗಿನಿಂದ ಅವರ ಕಡೆಯವರು ಎಷ್ಟು ಹೊತ್ತು ಮಾತನಾಡಿದ್ದಾರೆ ಎಂಬ ಬಗ್ಗೆ ತಿಳಿಯಲು ದಾಖಲೆ ತರಿಸಿ ನೋಡಿ. ಅವರ ಪಕ್ಷದವರು ಅಸೆಂಬ್ಲಿ ಪ್ರಾರಂಭವಾದಾಗಿನಿಂದ ಎಷ್ಟು ಸಮಯ ಮಾತನಾಡಿದ್ದಾರೆ ಎಂಬುದು ದಾಖಲೆಯಲ್ಲಿ ಇರುತ್ತದೆ. ಮಾನ್ಯ ಅಧ್ಯಕ್ಷರೆ, ದಯಮಾಡಿ ದಾಖಲೆ ತರಿಸಿ ಯಾರು ಯಾರು ಎಷ್ಟು ಕಾಲ ವೇಸ್ಟ್ ಮಾಡಿದ್ದಾರೆ ಎಂಬುದೂ ತಿಳಿಯುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ದಾಖಲೆ ತರಿಸಿ. ಮಾಧುಸ್ವಾಮಿಯವರು ಒಬ್ಬರೇ ಎಷ್ಟು ಹೊತ್ತು ಮಾತನಾಡಿದ್ದಾರೆ ಮತ್ತು ಎಷ್ಟು ಸಾರಿ ಅವರು ಬೇರೆಯವರು ಮಾತನಾಡುವಾಗ ಮಧ್ಯೆ ಪ್ರವೇಶ ಮಾಡಿ ಎಷ್ಟು ಗಂಟೆ ಉಪಯೋಗಿಸಿಕೊಂಡಿದ್ದಾರೆ ಎಂಬ ಬಗ್ಗೆ ತಾವು ದಾಖಲೆಯನ್ನು ತೆಗೆದು ನೋಡಿ. ಈ ರೀತಿಯಾದರೆ ಕಾರ್ಯಕಲಾಪ ನಡೆಸುವುದಕ್ಕೆ ಆಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ನೀವು ಸಂಖ್ಯಾಬಲದ ಮೇಲೆ ನಮಗೆ ಸಮಯವನ್ನು ನಿಗದಿ ಮಾಡಬೇಕು. ಅವರು ಮಾತನಾಡುವುದಕ್ಕೆ ನನ್ನ ಅಭ್ಯಂತರವಿಲ್ಲ; ಅವರಿಗೆ ಮಾತನಾಡುವುದಕ್ಕೆ ಸಂಪೂರ್ಣ ಸ್ವಾತಂತ್ರ್ಯ ಇದೆ. ಅವರ ಬಗ್ಗೆ ನಾನು ಮಾತನಾಡಲೇ ಇಲ್ಲ. ಆದರೆ ನಮ್ಮ ಬಿ.ಜೆ.ಪಿ.ಯ 79 ಮಂದಿ ಶಾಸಕರಿಗೆ ಮಾತನಾಡಲು ಸಮಯವನ್ನು ತಾವು ನಿಗದಿ ಮಾಡಿ. ಅವರು ಮಾತನಾಡಲಿ. ಅವರು ಮಾತನಾಡಲು ನನ್ನದೇನೂ ಅಭ್ಯಂತರವಿಲ್ಲ. ನಾವು 79 ಮಂದಿ ಶಾಸಕರಿದ್ದೇವೆ. ನಮ್ಮ ಪೈಕಿ ಇಲ್ಲಿಯವರೆಗೆ ಒಬ್ಬರೇ ಒಬ್ಬರು ಮಾತನಾಡಿರುವುದು. ವಿರೋಧ ಪಕ್ಷದ ನಾಯಕನಾಗಿ ನಾನು ಮಾತನಾಡಿರುವುದು ಕೇವಲ ಒಂದು ಗಂಟೆ ಹತ್ತು ನಿಮಿಷ ಮಾತ್ರ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:– ಸಮಯವನ್ನು ನಿಗದಿ ಮಾಡುವುದು ನಿಮ್ಮದೇ ಜವಾಬ್ದಾರಿ ಮಾನ್ಯ ಅಧ್ಯಕ್ಷರೆ, ನಾವು ಆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೆ, ನಾನು ಪ್ರತಿ ಹಂತದಲ್ಲೂ ಕೂಡ ಬೇಗ ಮುಗಿಸಿ ಎಂದು ಹೇಳುತ್ತಿದ್ದೇನೆ. ಅದನ್ನು ಸದಸ್ಯರಾದವರೂ ಕೂಡ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾವು ಕ79 ಮಂದಿ ಶಾಸಕರಿದ್ದೇವೆ. ನಮ್ಮ ಕಡೆಯವರೂ ಮಾತನಾಡುವವರು ಬೇಕಾದಷ್ಟು ಮಂದಿ ಸದಸ್ಯರು ಇದ್ದಾರೆ.

ಅಧ್ಯಕ್ಷರು:– ಆಯಿತು, ಈಗ ಹೆಗಡೆಯವರೆ, ತಾವು ಬೇಗ ಮಾತನಾಡಿ ಮುಗಿಸಿಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸಮಯವನ್ನು ನಿಗದಿ ಮಾಡುವುದು ನಿಮ್ಮ ಜವಾಬ್ದಾರಿ ಮಾನ್ಯ ಅಧ್ಯಕ್ಷರೆ.

(ಗೊಂದಲ)

ಅಧ್ಯಕ್ಷರು:– ನಾನು ನನ್ನ ಜವಾಬ್ದಾರಿಯನ್ನು ಅರಿತು ಹಾಗೆ ಮಾಡುತ್ತಿರುವುದು. ನನ್ನ ಜವಾಬ್ದಾರಿಯನ್ನು ನಾನು ಸರಿಯಾಗಿ ನಿರ್ವಹಿಸಲಿಲ್ಲ ಎಂದು ಹೇಳುತ್ತೀರಾ?

(ಗೊಂದಲ)

ಅಧ್ಯಕ್ಷರು:– ಈಗ ಬೇಗ ಮುಗಿಸಿಯಪ್ಪ.

(ಗೊಂದಲ)

ಅಧ್ಯಕ್ಷರು:– ಆಯಿತು, ಮುಗಿಸಿ ಎಂದು ಹೇಳಿದ್ದೇನೆ. ಅವರು ಮುಗಿಸಲಿ.

(ಗೊಂದಲ)

ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ:– ನಾವು ಹೊರಗಡೆ ಕುಳಿತು ಚರ್ಚೆ ಮಾಡಿದ್ದೇವೆ, ನಮ್ಮ ಕಡೆ ರೈತರಿಗೆ ನಾವೇನು ಹೇಳುವುದು?

(ಗೊಂದಲ)

ಅಧ್ಯಕ್ಷರು:– ದಯಮಾಡಿ, ಎಲ್ಲಾ ಕುಳಿತುಕೊಳ್ಳಿ. ಏನೇನು ಮಾತನಾಡುತ್ತಿದ್ದೀರಿ? ಅಗಲ್ಲ ಸ್ವಾಮಿ, ಎಲ್ಲರಿಗೂ ಇದೆ ನೋವು, ನನಗೂ ನೋವಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನೀವು ಬನ್ನಿ. . .

ಅಧ್ಯಕ್ಷರು:– ನಾನು ಇಲ್ಲೇ ಇರುತ್ತೇನೆ. ಹೊರಗಡೆ ಏಕೆ ಹೋಗ ಬೇಕು. ನಾನು; ಯಡಿಯೂರಪ್ಪನವರೆ, ನಾನು ಇಲ್ಲೇ ಇರುತ್ತೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾವೇನೂ ನಿಮ್ಮನ್ನು ಕೇಳುತ್ತಿಲ್ಲ, ಸಮಯ ನಿಗದಿ ಮಾಡಿ.

ಅಧ್ಯಕ್ಷರು:– ಆಯಿತು ಸ್ವಾಮಿ, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಸರ್, ನೀವು ಕಳೆದ ಈ ಅಧಿವೇಶನದ ಕಾರ್ಯಕಲಾಪಗಳನ್ನು ನೋಡಿ. ಎಷ್ಟು ನಿಲುವಳಿ ಸೂಚನೆ ಕಳುಹಿಸಿದ್ದೇವೆ. ಎಷ್ಟು ಕಾಲಿಂಗ್ ಅಟೆನ್ಷನ್ ಕಳುಹಿಸಿದ್ದೇವೆ. ನಾವು 79 ಜನ ಶಾಸಕರು ಎಷ್ಟು ಸಮಯ ಉಪಯೋಗ ಮಾಡಿಕೊಂಡಿದ್ದೇವೆ. ನಾನು, ಸ್ವತಂತ್ರವಾಗಿ ಬಂದಿರುವಂತಹ ಬೇರೆ ಪಕ್ಷದ ಶಾಸಕರು ಮಾತನಾಡುವುದಕ್ಕೆ ಅಡ್ಡಿ ಮಾಡುತ್ತಿಲ್ಲ. ನನ್ನ ನೋವು ಏನೆಂದರೆ ಈ 79 ಜನ ಆಯ್ಕೆಯಾಗಿರುವಂತಹ ಶಾಸಕರು ಅವರ ಕ್ಷೇತ್ರಕ್ಕೆ ಹೋದಾಗ ಅವರು ಏನು ಉತ್ತರ ಕೊಡಬೇಕು? ಅದಕ್ಕೆ ಸಮಯವನ್ನು ನಿಗದಿ ಮಾಡಿ. ಈ ಸಮಯದಲ್ಲಿ ನೀವು 79 ಜನ ಮಾತನಾಡಬೇಕಾಗುತ್ತದೆ ಎಂದು ಸಮಯವನ್ನು ನಿಗದಿ ಮಾಡಬೇಕಾಗುತ್ತದೆ.

ಅಧ್ಯಕ್ಷರು:– ಯಡಿಯೂರಪ್ಪನವರೆ, ಇನ್ನು ಮೇಲೆ, ದಯಮಾಡಿ ನನ್ನ ಮಾತನ್ನು ಕೇಳಿ, ಅದು ಕಾಲಿಂಗ್ ಅಟೆನ್‌ಷನ್ ಆಗಬಹುದು, ಇನ್ನೊಂದು ಆಗಬಹುದು ಯಾವ್ಯಾವ ಸದಸ್ಯರು ಎಷ್ಟು ಸಮಯ ತೆಗೆದುಕೊಂಡಿದ್ದಾರೆ? ಯಾವ್ಯಾವ ಪಕ್ಷಗಳು ಎಷ್ಟೆಷ್ಟು ಸಮಯ ತೆಗೆದುಕೊಂಡಿವೆ? ಎಲ್ಲವನ್ನೂ ನಿಗದಿಪಡಿಸಿ ಅದರ ಪ್ರಕಾರ ನಾನು ಸಮಯವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಒಂದು ವಿಷಯವೇನೆಂದರೆ ಕೆಲವು ಹಿರಿಯ ಸದಸ್ಯರುಗಳು ಅವರ ಹಿರಿತನದಿಂದ, ಅನುಭವದಿಂದ ಸ್ವಲ್ಪ ಜಾಸ್ತಿ ಮಾತನಾಡುತ್ತಾರೆ. ಆದ್ದರಿಂದ ಅವರಿಗೆ ಸ್ವಲ್ಪ ಜಾಸ್ತಿ ಕೊಟ್ಟಿದ್ದಾರೆ. ದಯಮಾಡಿ ಕೇಳಿ, ಆದರೆ ಅವರುಗಳು ವಿವಿಧ ಪಕ್ಷದ ಮುಖಂಡರುಗಳು ಮಾತನಾಡಿದರೂ ಕೂಡ ಅವರಿಗೆ ಒಂದು ಅಂಕೆನಲ್ಲಿ ಆ ನಿಯಮವನ್ನು ಅವರೇ ವಿಧಿಸಿಕೊಂಡು ಮಾತನಾಡಿ ಎಂದು ರಿಪೀಟೆಡ್ ಆಗಿ ರಿಕ್ವೆಸ್ಟ್ ಮಾಡಿದ್ದೇನೆ ಅದು ತಮಗೂ ಗೊತ್ತು. ಇಷ್ಟೆಲ್ಲಾ ಇದ್ದರೂ ನಾವೇನು ಮಾಡುವುದು? ನಾನು ಹೊಸ ಸದಸ್ಯರುಗಳಿಗೆ, ಆ ಕಡೆ ಇರಬಹುದು, ಈ ಕಡೆ ಇರಬಹುದು, ಹೆಚ್ಚು ಸಮಯವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸರ್, ನನ್ನ ಜಾಗದಲ್ಲಿ ಇದ್ದಿದ್ದರೆ ತಾವೇನು ಮಾಡುತ್ತಿದ್ದಿರಿ?

ಅಧ್ಯಕ್ಷರು:– ನನಗೆ ಅರ್ಥವಾಗುತ್ತದೆ, ಆದರೆ ಈಗ ಏನೆಂದರೆ ಪ್ರತಿಯೊಬ್ಬರೂ ಅವರವರ ಜವಾಬ್ದಾರಿಯನ್ನು ಅರ್ಥಮಾಡಿಕೊಳ್ಳಬಾರದೆ ಸ್ವಾಮಿ? ಎಲ್ಲರೂ ಜನರಿಂದ ಚುನಾಯಿತರಾಗಿ ಬಂದಿದ್ದಾರೆ. ಬಹಳ ಜನ ಹಿರಿಯರಿದ್ದಾರೆ, ಅನುಭವಿಗಳಿದ್ದಾರೆ, ಎಲ್ಲರೂ ಅರ್ಥಮಾಡಿಕೊಳ್ಳಬೇಕಲ್ಲಾ. ಈಗ ಹೆಗಡೆಯವರೆ, ಬೇಗ ಮುಗಿಸಿ.

ಮಾನ್ಯ ಸದಸ್ಯರು:– ಒಬ್ಬರಿಗೆ ಆಕಡೆ ಕೊಡಿ, ಒಬ್ಬರಿಗೆ ಈ ಕಡೆ ಕೊಡಿ.

ಅಧ್ಯಕ್ಷರು:– ಆಯಿತು, ಕುಳಿತುಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:– ಮಾನ್ಯ ಅಧ್ಯಕ್ಷರೆ, ನಿನ್ನೆ ಇನ್ನೊಂದು ವಿಷಯ ಚರ್ಚೆಯಾಯಿತು. ವೈದ್ಯರುಗಳು ಗ್ರಾಮೀಣ ಪ್ರದೇಶಕ್ಕೆ ಹೋಗುವುದಿಲ್ಲವೆನ್ನುವ ಬಗ್ಗೆ. ಈಗ ಗ್ರಾಮೀಣ ಕೃಪಾಂಕದಲ್ಲಿ ಯಾರ್‍ಯಾರನ್ನು ನೇಮಕ ಮಾಡಿದ್ದಾರೆ, ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಅವರ ಕೆಲಸ ಹೋಯಿತು. ಅವರೆಲ್ಲಾ ಗ್ರಾಮೀಣ ಪ್ರದೇಶದಲ್ಲಿ ಇದ್ದವರೆ. ಆದರೆ ಅವರ ನಂತರ ಕೆಲವು ಡಾಕ್ಟರ್ಸ್ ಮತ್ತು ಅವರ ಜೂನಿಯರ್ಸ್ ರೆಗ್ಯುಲರ್ ಅಪಾಯಿಂಟ್‌ಮೆಂಟ್ ಕೆ.ಹೆಚ್.ಎಸ್.ಡಿ.ಪಿ. ಯಲ್ಲಿ ಮತ್ತು ಬೇರೆ ಬೇರೆ ಕಡೆಗಳಲ್ಲಿ ಆಯಿತು. ಇವರಲ್ಲಿ ಕೆಲವರಿಗೆ ಸುಪ್ರೀಂ ಕೋರ್ಟ್ ಆದೇಶದ ಮೇಲೆ ಉದ್ಯೋಗ ಹೋಯಿತು, ರೆಗ್ಯುಲರೈಜ್ ಮಾಡಿದ್ದಾರೆ. ಕೆಲವರು ಇನ್ನೂ ಬಾಕಿ ಇದ್ದಾರೆ. 10 ರಿಂದ 15 ವರ್ಷಗಳ ಕಾಲ ಅವರನ್ನು ಖಾಯಂ ಮಾಡದೆ ಇದ್ದರೆ ಅವರು ಕಂಟ್ರಾಕ್ಟ್ ಬೇಸಿಸ್‌ನಲ್ಲಿ ಕೆಲಸ ಮಾಡಿ ಎಂದು ಹೇಳಿದರೆ ಅದು ಯಾವ ನ್ಯಾಯ? ಅದನ್ನೇ ರೆಗ್ಯುಲರೈಜ್ ಮಾಡಿ. ಅವರನ್ನು ಅಲ್ಲೇ ಕೂರಿಸಿ, ಮತ್ತೇ ಅವರಿಗೆ ನೀವು ಸೀಟು ಕೊಡುವಾಗಲಿ ರೂರಲ್ ಸರ್ವೀಸ್ ಬಗ್ಗೆ ಕಂಡೀಷನ್ ಹಾಕಿ. ಯಾರಿಗೆ ರಿಸರ್ವೇಷನ್‌ನಲ್ಲಿ, ಮೆರಿಟ್‌ನಲ್ಲಿ, ಸರ್ಕಾರಿ ಕಾಲೇಜುಗಳಲ್ಲಿ ಕೊಡುತ್ತೀರಿ ಹಾಗೂ ಅವರು ಡೊನೇಷನ್ ಕೊಟ್ಟು ಬರುವುದಿಲ್ಲ, ಅವರಿಗೆ ಕಂಡೀಷನ್ ಹಾಕಿ ಅವರಿಗೆ ರೂರಲ್ ಸರ್ವೀಸ್ ಇಷ್ಟು ವರ್ಷ ಮಾಡಬೇಕೆಂದು, ಆಗ ಅವರು ಮಾಡಲೇಬೇಕಾಗುತ್ತದೆ. ದಯವಿಟ್ಟು ಯಾರು ಗ್ರಾಮೀಣ ಪ್ರದೇಶದಲ್ಲಿ ಹೋಗಿ

ಕೆಲಸವನ್ನು ಮಾಡುತ್ತಿರುತ್ತಾರೆ, ಅವರನ್ನು ಖಾಯಂ ಎಂದು ತಾವು ತಕ್ಷಣದಲ್ಲಿ ಮಾಡಬೇಕಾಗುತ್ತದೆ. ಮತ್ತೆ ಇಂಜಿನಿಯರ್ಸ್ ಪಾಪ, ಅವರಿಗ ಉದ್ಯೋಗ ಇಲ್ಲ. ಇದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ಮತ್ತೆ ಡ್ರಗ್ಸ್ ಪರ್‌ಚೇಸ್ ಬಗ್ಗೆ ಕರ್ನಾಟಕ ಆಟಿಬಯಾಟಿಕ್ ಸಂಸ್ಥೆ ಏನಿದೆ ಅದಕ್ಕೆ ಟ್ರಾನ್ಸ್‌ಫರೆನ್ಸಿ ಆ್ಯಕ್ಟ್ ಅಪ್ಲೈ ಆಗುವುದಿಲ್ಲ. ಆದರೆ ಅಲ್ಲಿಂದ ಪರ್ಚೇಸ್ ಮಾಡುತ್ತಿಲ್ಲವೆಂದು ಕೇಳಿದ್ದೇನೆ, ದಯವಿಟ್ಟು ಅದು ಒಳ್ಳೆಯ ಸಂಸ್ಥೆ, ಅದನ್ನು ಉಳಿಸುವುದಕ್ಕೆ ಸರ್ಕಾರ ಸಹ ಸಹಾಯವನ್ನು ಮಾಡಬೇಕಾಗುತ್ತದೆ. ಮತ್ತೆ ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗ ಇಂಜೆಕ್ಷನ್ ಟ್ಯೂಬ್ ಖರೀದಿಯಲ್ಲಿ ಒಂದು ಹಗರಣವಾಯಿತು ಎಂದು ಹೇಳಿದರು. ಏನೆಂದರೆ ಇಲ್ಲಿಂದ ಪ್ರತಿ ಜಿಲ್ಲಾ ವೈದ್ಯಾಧಿಕಾರಿಗಳಿಗೆ ಆದೇಶ ಹೋಗಿದ್ದು, ಸಿಗ್ಮಾ ಕಂಪನಿಯಿಂದ ಸಿರಂಜ್ ಅನ್ನು ತೆಗೆದುಕೊಳ್ಳಿ ಎಂದು ಹೇಳಿದ್ದರು. ಇವತ್ತು ಏನಾಗಿದೆ? ಆ ವೈದ್ಯಾಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ವರ್ಗಾವಣೆ ಮಾಡುವುದಕ್ಕೆ ಹೆಲ್ತ್ ಡಿಪಾರ್ಟ್‌ಮೆಂಟ್ ಪ್ರಾರಂಭ ಮಾಡಿದೆ. ಇದರ ಬಗ್ಗೆ ತನಿಖೆಯಾಗಲಿ, ಈ ರೀತಿಯಾಗಿ ಯಾರಿಂದ ಆದೇಶ ಹೋಯಿತು? ಏತಕ್ಕಾಗಿ ಅಲ್ಲಿಯ ವೈದ್ಯಾಧಿಕಾರಿಗಳನ್ನು **scapegoat** ಮಾಡುತ್ತಿದ್ದಾರೆ ಎನ್ನುವುದೂ ಸಹ ತನಿಖೆಯಲ್ಲಿ ಬರಬೇಕಾಗುತ್ತದೆ. ಆಮೇಲೆ ಇನ್ನೂ ಅನೇಕ ಹಗರಣಗಳು ಇವೆ, ಆದರೆ ಸಮಯ ಬಹಳ ಕಡಿಮೆ ಇರುವುದರಿಂದ. . . ನಾನು ಮುಗಿಸಿಬಿಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನೀವು ಮಾತನಾಡುತ್ತಿರುವ ಇಶ್ಯೂ ಬಗ್ಗೆ ನನಗೂ ಜವಾಬ್ದಾರಿ ಇರುವುದರಿಂದ ಒಂದು ಮಾತನ್ನು ಹೇಳಬಯಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:– ನನಗೆ ಸಮಸ್ಯೆ ಏನು ಗೊತ್ತಾ? ಮಧ್ಯದಲ್ಲಿ ಎಲ್ಲರೂ ಮಾತನಾಡಿ, ಆ ಸಮಯ ಲೆಕ್ಕ ಹಾಕಿದರೆ . . .

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ಈ ಸರ್ಕಾರಿ ಆಸ್ಪತ್ರೆಗೆ ಕೊಟ್ಟಂತಹ ಸುಮಾರು 6 ಲಕ್ಷ ರೂಪಾಯಿಯಷ್ಟು ಔಷಧವನ್ನು ಮೈಸೂರಿನ ಸ್ಥಳೀಯ ಯುವಕರ ತಂಡ ಅದೆಲ್ಲಿ ಸ್ಟಾಕ್ ಇತ್ತು ಅದನ್ನು ಹಿಡಿದು, ಅದರ ಬಗ್ಗೆ ಮೈಸೂರಿನಲ್ಲಿ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅಂದರೆ ಸಾಮಾನ್ಯ ಜನರಿಗೆ ಸಿಗಬೇಕೆಂದು ಸರ್ಕಾರದ ಬೊಕ್ಕಸದಿಂದ ಹಣಕೊಟ್ಟು ಕೊಡುವಂತಹ ಔಷಧಗಳು ಸರ್ಕಾರಿ ಆಸ್ಪತ್ರೆಯಲ್ಲಿ ದುರುಪಯೋಗವಾಗುತ್ತಿದೆ ಎನ್ನುವುದು ಪತ್ರಿಕೆಗಳಲ್ಲಿ ಬಂದಿರುವಂತಾದ್ದು ಮತ್ತು ಅದನ್ನು ಸೀಜ್ ಮಾಡಿದ್ದಾರೆ. ಅವರ ಮೇಲೆ ಸರಿಯಾದಂತಹ ಕ್ರಮವನ್ನು ನೀವು ಒಂದು ಕಡೆ ತೆಗೆದುಕೊಂಡರೆ, ಅದು ಸರಿ ಎಂದು ಕಂಡರೆ, ಅದು ಸರ್ಕಾರಿ ಆಸ್ಪತ್ರೆಯ ಔಷಧ ಆರು ಲಕ್ಷ ರೂಪಾಯದು ಸಿಕ್ಕಿದೆ ಎಂದರೆ ಅವರ ಮೇಲೆ ತೀವ್ರವಾದಂತಹ ಕ್ರಮ ತೆಗೆದುಕೊಂಡರೆ ಇನ್ನೊಂದು ಕಡೆ ಅವ್ಯವಹಾರ ಆಗದ ಹಾಗೆ ತಡೆಯಬಹುದು. ಇನ್ನು ತಾವು ಮುಂದುವರೆಸಿ, ಇದೊಂದು ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:– ಅಲ್ಲಿ ಯಾರು ಜಿಲ್ಲಾ ವೈದ್ಯಾಧಿಕಾರಿಗಳನ್ನು ತಪ್ಪು ಇಲ್ಲದೆ ಹೋದರೂ ಅವರನ್ನು ವರ್ಗಾವಣೆ ಮಾಡಿದ್ದಾರೆ ಅದನ್ನು ಅಲ್ಲಿ ಸ್ಥಗಿತಗೊಳಿಸಬೇಕು. ಕೆಲವರು ನಿವೃತ್ತರಾಗುವುದಕ್ಕೆ ಎರಡು–ಮೂರು–ನಾಲ್ಕು ತಿಂಗಳು ಇದ್ದವರನ್ನು ಇವರು ವರ್ಗಾವಣೆ ಮಾಡಿದ್ದಾರೆ. ಏನು ಉದ್ದೇಶ? ಅದಕ್ಕೋಸ್ಕರ ಇದರ ಬಗ್ಗೆ ಕ್ರಮವನ್ನು ತೆಗೆದು ಕೊಳ್ಳಬೇಕು, ಅವರನ್ನು ಅಲ್ಲಿಯೇ ಮುಂದುವರೆಸಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತಾ, ಮಾನ್ಯ ಅಧ್ಯಕ್ಷರೆ,

ನಾನು ಬೇರೆಯವರು ಮಾತನಾಡುವಾಗ ಮಧ್ಯದಲ್ಲಿ ಎದ್ದು ಮಾತನಾಡುವಂತಹ ಹವ್ಯಾಸವನ್ನು ನಾನು ಇಟ್ಟುಕೊಂಡಿಲ್ಲ. ಆದರೆ ನಾನು ಮಾತನಾಡುವಾಗ ಎಲ್ಲರೂ ಒಂದು ನಿಮಿಷ ಒಂದು ನಿಮಿಷ ಕೊಡಿ ಎಂದು ಕೇಳಿದಾಗ ಅದಕ್ಕೆ ಸುಮಾರು ಸಮಯ ಹೋಗುತ್ತದೆ. ಆ ಅಭಿಪ್ರಾಯದಂತೆ ನಮಗೆ ಜಾಸ್ತಿ ಸಮಯ ಕೊಟ್ಟಿದ್ದಾರೆ ಎಂದೆನಿಸುತ್ತದೆ. ದಯವಿಟ್ಟು ನಮ್ಮ ಸಮಯವನ್ನು ಕೊಟ್ಟಿರುವುದರ ಬಗ್ಗೆ ಯಾರೂ ಚರ್ಚೆಯನ್ನು ಮಾಡಬಾರದು. ಅವರ ಪಕ್ಷಕ್ಕೆ ಎಷ್ಟು ಸಮಯ ಬೇಕು ನೀವು ನಿಗದಿಪಡಿಸಿ. ಅದನ್ನು ಅವರು ಹಂಚಿಕೊಳ್ಳಲಿ, ನಾನೇನೂ ಅಭ್ಯಂತರ ಮಾಡುವುದಿಲ್ಲ. ತಾವು ನನಗೆ ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ನೀವು ಜಾಸ್ತಿ ಸಮಯ ತೆಗೆದುಕೊಳ್ಳುತ್ತೀರಿ ಎಂದೇ ಅವರ ವಾದ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:– ನಮ್ಮ 13 ಜನ ಪಕ್ಷೇತರರು ಇದ್ದಾರೆ, ಅವರೆಲ್ಲರ ಬದಲು ನಾನೊಬ್ಬನೇ ಮಾತನಾಡುತ್ತಿದ್ದೇನೆ. ಅವರು ಬೇರೆ ಯಾರೂ ಮಾತನಾಡುತ್ತಿಲ್ಲ.

ಅಧ್ಯಕ್ಷರು:– ಆಯಿತು, ಕುಳಿತುಕೊಳ್ಳಿ ಈಗ.

ಶ್ರೀ ಹೆಚ್. ಆಂಜನೇಯ (ಭರಮ ಸಾಗರ):– ಮಾನ್ಯ ಅಧ್ಯಕ್ಷರೆ, ಹೊಸದಾಗಿ 105 ಜನ ನಾವು ಆಯ್ಕೆಯಾಗಿ ಬಂದಿದ್ದೇವೆ. ಈ ಹೌಸ್‌ನಲ್ಲಿ ಇದು ಪ್ರಥಮ ಬಾರಿಗೆ ಇರಬಹುದು. ನಾವೂ ಕೂಡ ಮಾತನಾಡತಕ್ಕಂಥ ಸಂದರ್ಭದಲ್ಲಿ ನಮ್ಮಲ್ಲಿರತಕ್ಕಂಥ ಪ್ರತಿಭೆಗಳನ್ನು ಹೊರಗೆಡವಬೇಕಾಗುತ್ತದೆ. ಇತರರನ್ನು ಅನುಕರಣೆ ಮಾಡಿ ನಾವೂ ಕೂಡ ಒಳ್ಳೆಯ ಸಂಸದೀಯ ಪಟುಗಳು ಆಗಬೇಕೆಂದು ಬಯಕೆ ಇರುತ್ತದೆ. ಆದುದರಿಂದ ಹೊಸದಾಗಿ ಆಯ್ಕೆಯಾಗಿ ಬಂದಿರತಕ್ಕಂಥ ಸದಸ್ಯರಿಗೂ ಕೂಡ ಸಮಾನಾವಕಾಶವನ್ನು ಕೊಟ್ಟು ಅವರಿಗೆ ಉತ್ತೇಜನವನ್ನು ನೀಡಬೇಕು, ನಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು ಎಂದು ಹೇಳಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ಈಗ ಹೊಸ ಸದಸ್ಯರಿಗೆ ಅವಕಾಶವನ್ನು ಮಾಡಿಕೊಡುತ್ತೇನೆ. ಈಗ ಮಾನ್ಯ ಬೋಪಯ್ಯನವರು ಮಾತನಾಡಿ. ದಯಮಾಡಿ ಕುಳಿತುಕೊಳ್ಳಿ, ಈಗ ನಾನು ಮಾನ್ಯ ಬೋಪಯ್ಯನವರನ್ನು ಕರೆದಿದ್ದೇನೆ. ಈಗ ನೂತನ ಸದಸ್ಯರು ಹೊಸದಾಗಿ ಗೆದ್ದು ಬಂದಿರುವವರಿಗೆ ನಾನು ಜಾಸ್ತಿ ಅವಕಾಶವನ್ನು ಕೊಡುತ್ತೇನೆ. ಬೋಪಯ್ಯನವರೇ, ಮಾತನಾಡಿ.

ಶ್ರೀ ಕೆ.ಜಿ.ಬೋಪಯ್ಯ (ಮಡಿಕೇರಿ):– ಮಾನ್ಯ ಅಧ್ಯಕ್ಷರೆ, ನನಗೆ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಮಾತನಾಡಲು ಅವಕಾಶವನ್ನು ಕೊಟ್ಟದ್ದಕ್ಕಾಗಿ, ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಲು ಪಟ್ಟಿಯಲ್ಲಿ ನನ್ನ ಹೆಸರು ಇಲ್ಲವೇ?

ಅಧ್ಯಕ್ಷರು: ಈಗ ಹೊಸ ಸದಸ್ಯರುಗಳಿಗೆ ಒಂದಿಬ್ಬರಿಗೆ ಮಾತನಾಡಲು ಅವಕಾಶವನ್ನು ಕೊಟ್ಟು, ನಂತರ ನಿಮಗೆ ಕೊಡುತ್ತೇನೆ. ತಮಗೆ ಮಾತನಾಡಲು ಅವಕಾಶವನ್ನು ಕೊಡುತ್ತೇನೆ, ತಾವು ಏಕೆ ಕೋಪ ಮಾಡಿಕೊಳ್ಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ನಾನು 1967ನೇ ಇಸವಿಯಿಂದಲೂ ಮಾತನಾಡಿದ್ದೇನೆ, ಮುಂದಿನ ವರ್ಷ ಮಾತನಾಡೋಣ ಬಿಡಿ.

ಅಧ್ಯಕ್ಷರು: ಹೊಸ ಸದಸ್ಯರು ಮಧ್ಯೆ ಮಾತನಾಡಿದರೆ, ಏನಾಗುತ್ತದೆ? ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ.ಜೆ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಈ ಭಾಷಣದಲ್ಲಿ ಎಲ್ಲಾ ವಿಚಾರಗಳನ್ನು, ಮತ್ತು ರಾಜ್ಯ ಸರ್ಕಾರದ ಸಾಧನೆಗಳನ್ನು, ಹಾಗೆ ಮುಂದೆ ಮಾಡುತ್ತಿರುವಂತಹ ಕಾರ್ಯಕ್ರಮಗಳನ್ನು ತಿಳಿಸಿದ್ದಾರೆ. ಆದರೆ ನಮ್ಮ ಕೊಡಗು ಜಿಲ್ಲೆಯ ಅಭಿವೃದ್ಧಿ ಬಗ್ಗೆ, ಮತ್ತು ಈ ಕೊಡಗು ಜಿಲ್ಲೆಯ ಬಗ್ಗೆ ಸರ್ಕಾರ ಏನು ವಿಶೇಷ ಗಮನವನ್ನು ಹರಿಸಿದೆ ಎಂಬುದರ ಬಗ್ಗೆ ಯಾವುದೇ ಪ್ರಸ್ತಾವನೆ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ಕಳೆದ ಜೂನ್, ಜುಲೈ, ಆಗಸ್ಟ್, ತಿಂಗಳಲ್ಲಿ ಜಿಲ್ಲೆಯಲ್ಲಿ ಸಾಕಷ್ಟು ಮಳೆಯಾಗಿ ಅನಾಹುತಗಳು ಆಗಿವೆ. ಈ ಬಗ್ಗೆ ಕಳೆದ ಸದನದಲ್ಲಿ ಪ್ರಸ್ತಾಪವಾಗಿ, ಮಾನ್ಯ ಕಂದಾಯ ಮಂತ್ರಿಗಳು, ವಿಶೇಷವಾಗಿ ಇಲ್ಲಿಂದ ಅಧಿಕಾರಿಗಳನ್ನು ಕಳುಹಿಸಿ, ಕಂದಾಯ ಕಾರ್ಯದರ್ಶಿಯವರು ಜಿಲ್ಲೆಗೆ ಭೇಟಿ ನೀಡಿ, 26 ಕೋಟಿ ರೂಪಾಯಿಗಳ ನಷ್ಟವಾಗಿದೆಯೆಂದು ವರದಿಯನ್ನು ಕೊಟ್ಟರು. ಈ ಮಳೆ ಹಾನಿಯ ಪರಿಹಾರವನ್ನು ಕೊಡಬೇಕೆಂದು ನಾವು ಒತ್ತಾಯವನ್ನು ಮಾಡಿದೆವು. ಆದರೆ ಮಳೆ ಹಾನಿಯ ಪರಿಹಾರವೆಂದು ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇನ್ನೊಂದು ಕೋಟಿ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳ ಬಳಿ ಕುಡಿಯುವ ನೀರಿಗಾಗಿ ಎಂದು ವಿಶೇಷವಾಗಿ ಇಟ್ಟಿದ್ದಂತಹ ಹಣವನ್ನು ಬಿಡುಗಡೆ ಮಾಡಿದ್ದಾರೆ. ಈ ರೀತಿಯ ತಾರತಮ್ಯ ಜಿಲ್ಲೆಗೆ ಏಕೆ? ಕೊಡಗು ಜಿಲ್ಲೆಗೆ ಮಳೆ ಬಂದಾಗ, ಇಲ್ಲಿ ಬೆಂಗಳೂರು, ಮೈಸೂರು, ಮಂಡ್ಯದ ಜನರು ಇರಬಹುದು. ಎಲ್ಲರೂ ಕೊಡಗು ಜಿಲ್ಲೆಯಲ್ಲಿ ಮಳೆಯೆಂದರೆ ಸಂತೋಷವನ್ನು ಪಡುತ್ತಾರೆ. ನಮ್ಮ ಕಷ್ಟಕ್ಕೆ ಯಾವುದೇ ಪರಿಹಾರವಿಲ್ಲ. ಅಲ್ಲಿ ಜನರು ಕಣ್ಣೀರು ಹಾಕುತ್ತಾರೆ, ಶಾಪವನ್ನು ಹಾಕುತ್ತಾರೆ. ಅವರು ಮಳೆ ಬರುವುದು ಬೇಡವೆಂದು ಹೇಳುತ್ತಾರೆ. ಆದರೆ ನಮ್ಮ ಜಿಲ್ಲೆಯಲ್ಲಿ 26 ಕೋಟಿ ರೂಪಾಯಿಗಳು ನಷ್ಟವಾಗಿದೆಯೆಂದು ವರದಿ ಕೊಟ್ಟರೆ, ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಆದರೆ, ಇವತ್ತು ನಮ್ಮ ಜಿಲ್ಲೆಯ ರಸ್ತೆಗಳಲ್ಲಿ ಯಾವುದೇ ವಾಹನಗಳು ಓಡಾಡಲು ಆಗದಂತಹ ಪರಿಸ್ಥಿತಿ ಇದೆ. ಎಲ್ಲಾ ಶಾಸಕರು ಬಹಳಷ್ಟು ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಯಾವುದೂ ಬಂದಿಲ್ಲ. ಸಿ.ಆರ್.ಎಸ್.ಫಂಡ್ ಇದರಲ್ಲೂ ತಾರತಮ್ಯವಾಗಿದೆ. ನಮ್ಮ ಜಿಲ್ಲೆಗಂತೂ ಇದರಲ್ಲಿ ಒಂದು ರೂಪಾಯಿಯನ್ನು ಬಿಡುಗಡೆ ಮಾಡಿಲ್ಲ. ಇವತ್ತು ರಸ್ತೆಗಳಲ್ಲಿ ಇರುವಂತಹ ಗುಂಡಿಗಳನ್ನು ಮುಚ್ಚುವಂತಹ ಕಾರ್ಯಕ್ರಮವೂ ಜಿಲ್ಲೆಯಲ್ಲಿ ಆಗುತ್ತಾ ಇಲ್ಲ. ಇನ್ನು ಮೂರು ತಿಂಗಳಲ್ಲಿ ಮತ್ತೆ ಮಳೆ ಪ್ರಾರಂಭವಾಗುತ್ತದೆ. ಜಿಲ್ಲೆಯಲ್ಲಿ ಯಾವುದೇ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ಚುನಾವಣೆಯೆಂದು ಫೆಬ್ರವರಿ, ಮಾರ್ಚ್ ತಿಂಗಳ 15ನೇ ತಾರೀಖಿನವರೆಗೂ, ಯಾವುದೇ ಕೆಲಸಗಳು ಆಗುವುದಿಲ್ಲ. ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಚುನಾವಣೆಗಳು, ಚುನಾವಣೆಗಳು ಬಂದು ಯಾವುದೇ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಈಗ ಮತ್ತೇ ಮಳೆ ಬರುತ್ತದೆ. ನಮ್ಮ ಜಿಲ್ಲೆಯಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೇ ಇರುವಂತಹ ಪರಿಸ್ಥಿತಿಯಾಗಿದೆ. ಇದನ್ನು ಸರ್ಕಾರದ ಗಮನಕ್ಕೆ ತಂದರೆ, ಏನು ಕ್ರಮ ತೆಗೆದುಕೊಳ್ಳುತ್ತಿಲ್ಲ. ಕೊಡಗು ಜಿಲ್ಲೆಗೆ ಕಳೆದ ಡಿಸೆಂಬರ್ 2004ರಲ್ಲಿ ಪ್ಯಾಕೇಜ್ ಅನ್ನು ಘೋಷಣೆ ಮಾಡಿದರು. ಅದು ವಿಶೇಷ ಪ್ಯಾಕೇಜ್ ಎಂದು ಅದಕ್ಕೆ 107 ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಹೇಳಿದರು. ಅದರಲ್ಲಿ 39 ರಸ್ತೆಗಳನ್ನು ಗುರುತು ಮಾಡಿದ್ದೇವೆಂದು, ಅಂದಿನ ಮಾನ್ಯ ಮುಖ್ಯಮಂತ್ರಿಯವರು ಮತ್ತು ಉಸ್ತುವಾರಿ ಮಂತ್ರಿಗಳು, ಮಂತ್ರಿಗಳು ಎಲ್ಲರೂ ಸೇರಿ ಪತ್ರಿಕಾ ಹೇಳಿಕೆಯನ್ನು ಕೊಟ್ಟರು. ಕೊಡಗು ಜಿಲ್ಲೆಗೆ 107 ಕೋಟಿ ರೂಪಾಯಿಗಳನ್ನು ಪ್ಯಾಕೇಜ್ ಎಂದು ಕೊಡುತ್ತೇವೆ. ಇವತ್ತಿನಿಂದಲೇ ಅಭಿವೃದ್ಧಿ ಕೆಲಸಗಳು

ಪ್ರಾರಂಭವಾಗುತ್ತವೆ ಎನ್ನುವ ಮಾತನ್ನು ಪತ್ರಿಕಾ ಗೋಷ್ಠಿಯನ್ನು ಮಾಡಿದಾಗ ಹೇಳಿದರು. ಆದರೆ ಮುಂದೆ ಬಂದಂತಹ ಸರ್ಕಾರ, ಹಿಂದೆ ಮಾಡಿದಂತಹ ರಾಜ್ಯಪಾಲರ ಭಾಷಣದಲ್ಲಿ ನನ್ನ ಸರ್ಕಾರವೂ ಕೊಡಗು ಜಿಲ್ಲೆಯ ಪ್ಲಾಕೇಜನ್ನು ಪೂರ್ಣಗೊಳಿಸುತ್ತದೆನ್ನುವಂತಹ ಮಾತನ್ನು ಹೇಳಿದರು. ಆದರೆ ಇವತ್ತು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಬಂದು, ಅಕ್ಟೋಬರ್ ತಿಂಗಳಲ್ಲಿ ನಿಮ್ಮ ಜಿಲ್ಲೆಗೆ ಯಾವುದೇ ಪ್ಯಾಕೇಜ್ ಇಲ್ಲವೆಂದು ಹೇಳುತ್ತಾರೆ. ನಾನು ಈ ಬಗ್ಗೆ ವಿಧಾನಸಭೆಯಲ್ಲಿ ಪ್ರಶ್ನೆಯನ್ನು ಮಾಡಿದ್ದೆ. ಸನ್ಮಾನ್ಯ ಉಪ ಮುಖ್ಯಮಂತ್ರಿಯವರು 15 ದಿವಸಗಳ ಸಮಯ ಬೇಕೆಂದು ಹೇಳಿದರು. ಹೀಗಾಗಿ ನಮ್ಮ ಪ್ರಶ್ನೆಗಳಿಗೆ ಉತ್ತರವನ್ನೇ ಕೊಡುವುದಿಲ್ಲ. ಈ ಪರಿಸ್ಥಿತಿಯಾದರೆ, ಜಿಲ್ಲೆಯನ್ನು ಕಡೆಗಣಿಸುವಂತಹ ಕೆಲಸ ಸತತವಾಗಿ ಆಗುತ್ತಿದೆ. ಇವತ್ತು ಜಿಲ್ಲೆಯಲ್ಲಿರುವಂತಹ ಅರಣ್ಯದ ಸಮಸ್ಯೆಯ ಬಗ್ಗೆ ಹೇಳುವುದಾದರೆ, ನಮ್ಮ ಕೊಡಗು ಜಿಲ್ಲೆಯಲ್ಲಿರುವಂತಹ ಅರಣ್ಯ, ರಿಜರ್ವ್ ಫಾರೆಸ್ಟ್, ಅದನ್ನು ಜನರು ಅನೇಕ ವರ್ಷಗಳಿಂದ ರಕ್ಷಣೆಯನ್ನು ಮಾಡಿಕೊಂಡು ಬಂದಿದ್ದಾರೆ. ತಮ್ಮ ತಮ್ಮ ಜಮೀನಿನಲ್ಲಿ ಇರುವಂತಹ, ಕಾಫಿ ತೋಟಗಳಲ್ಲಿ ಇರುವಂತಹ ಮರಗಳನ್ನು ಯಾರೂ ಸಾರಾಸಗಟಾಗಿ ತೆಗೆದಿಲ್ಲ. ಮಳೆಗಾಲದಲ್ಲಿ ಒಂದು ಮರ ಬಿದ್ದರೆ ಯಾವ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಕೇಳುವುದಿಲ್ಲ. ನಾವು ನಮ್ಮಷ್ಟಕ್ಕೆ ನಾವೇ ಹೊಸ ಮರಗಳನ್ನು ನೆಡುತ್ತೇವೆ. ಮಳೆಯಿಂದ ಏನಾದರೂ ಒಂದು ಮರ ಬಿದ್ದರೆ, ಮಗು ಸತ್ತಹಾಗೆ ರೈತರು ಅಳುತ್ತಾರೆ. ಈ ರೀತಿ ಇದ್ದರೂ ಇವತ್ತು ಸರ್ಕಾರ ಮರಗಳ ಮೇಲೆ ನಿಮಗೆ ಯಾವ ಹಕ್ಕು ಇಲ್ಲವೆನ್ನುತ್ತಾರೆ. ಆ ಲ್ಯಾಂಡೇ ನಿಮ್ಮದು ಅಲ್ಲವೆನ್ನುವಂತಹ ತಾರತಮ್ಯದ ವ್ಯವಸ್ಥೆಯಾಗುತ್ತಿದೆ. ನಮ್ಮ ಜಿಲ್ಲೆಯಲ್ಲಿ ಅನೇಕ ಜನರು ಬೆಂಗಳೂರು, ಮೈಸೂರು, ಎಲ್ಲಾ ಕಡೆಗಳಲ್ಲೂ ಸೆಟಲ್ ಆಗಿದ್ದಾರೆ. ಅವರಿಗೆ ಅವರ ಜಾಗದಲ್ಲಿರುವಂತಹ ಮರಗಳನ್ನು ಕಡಿದು ಇಲ್ಲಿಗೆ ಮರಗಳನ್ನು ತರುವಂತಹ ವ್ಯವಸ್ಥೆಯೂ ಇತ್ತು. ಈಗ ಏಕಾಏಕಿ 6 ತಿಂಗಳುಗಳಿಂದ ಇದನ್ನು ನಿಲ್ಲಿಸಿದ್ದಾರೆ. ಇದಕ್ಕೆ ಇವರು ನಿಮಗೆ ಮರದ ಮೇಲೆ ಹಕ್ಕಿಲ್ಲವೆಂಬ ಕಾರಣವನ್ನು ಕೊಡುತ್ತಾರೆ. ನಿಮಗೆ ಮಹಾರಾಜರು ಕೊಟ್ಟಂತಹ ಜಾಗವೆಂದು ಹೇಳುತ್ತಾರೆ. ಈ ರೀತಿಯ ವ್ಯವಸ್ಥೆ ಏನಿದೆ ಇದು ಕೊನೆಯಾಗಬೇಕು. ಅನೇಕ ವರ್ಷಗಳಿಂದ ಈ ಮರಗಳ ಹಕ್ಕನ್ನು ನಾವು ಕೇಳುತ್ತಿದ್ದೇವೆ. ಇದರ ಬಗ್ಗೆ ಹೈಕೋರ್ಟ್‌ನಲ್ಲೂ ಸಹ ಜಡ್ಜ್‌ಮೆಂಟ್ ಆಗಿದೆ. ಇಲ್ಲಿ ಯಾವುದೋ ಒಂದು ಜಡ್ಜ್‌ಮೆಂಟ್ ಅನ್ನು ಎತ್ತಿ ಹಿಡಿದು ಈ ಜಡ್ಜ್‌ಮೆಂಟ್‌ನಲ್ಲಿ ನಿಮಗೆ ಮರಗಳ ಮೇಲೆ ಹಕ್ಕು ಇಲ್ಲವೆಂದೂ, ಹಾಗಾಗಿ ನಿಮಗೆ ಕೊಡುವುದಕ್ಕೆ ಆಗುವುದಿಲ್ಲ, ಎಂದು ಹೇಳುತ್ತಾರೆ. ಇದರ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲೂ ಕೂಡ ಮರಗಳ ಮೇಲೆ ಹಕ್ಕು ಇದೆಯೆಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನಮ್ಮ ಈ ಅರಣ್ಯ ಅಧಿಕಾರಿಗಳು ಏನೇನು ಅನಾಹುತಗಳನ್ನು ಮಾಡುತ್ತಾರೆಂಬ ಬಗ್ಗೆ, ನಾನು ಮೊನ್ನೆ ದಿವಸವೂ ಕೇಳಿದ್ದೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ಬೈ ಬ್ಯಾಕ್ ಎಂಬ ಒಂದು ಸ್ಕೀಮ್ ಅನ್ನು ತಂದಿದ್ದಾರೆ. ಇಲ್ಲಿ ಅಭಯಾರಣ್ಯದಲ್ಲಿ 70 ಹಳ್ಳಿಗಳು ಇವೆ. ಆ ಜನರ ಜಮೀನನ್ನು ಇವರು ಪರ್ಚೇಸ್ ಮಾಡುತ್ತಾರಂತೆ, ಅರಣ್ಯ ಇಲಾಖಾ ವತಿಯಿಂದ ಇದನ್ನು ಕೊಂಡುಕೊಳ್ಳುತ್ತೇವೆ. ನೀವು ಹೊರಗೆ ಹೋಗಿ ಎಂದರೆ ಇದರ ಅರ್ಥ ಏನು? ನಮ್ಮ ಊರಿನ ಜಮೀನುಗಳಲ್ಲಿ ಕೃಷಿ ಮಾಡುವುದನ್ನು ನಿಲ್ಲಿಸಿದ್ದಾರೆ, ಮನೆಗಳನ್ನು ಕಟ್ಟುವಂಥಾದ್ದನ್ನು ನಿಲ್ಲಿಸಿದ್ದಾರೆ. ಜನರು ಕಣ್ಣೀರು ಹಾಕಿಕೊಂಡು ಬೀದಿಗೆ ಇಳಿದಿದ್ದಾರೆ. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ತಮ್ಮ ನಿರ್ಧಾರವನ್ನು ಪ್ರಕಟ ಮಾಡಬೇಕು. ಮಲೆನಾಡಿನಲ್ಲಿ ಇರುವ ಕಾಡನ್ನು ರಕ್ಷಣೆ

ಮಾಡುವುದಕ್ಕೆ ನಿಮಗೆ ಇವತ್ತು ಹಣವಿಲ್ಲ, ಗಾರ್ಡ್‌ಗಳು ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ರೈತರ ಜಮೀನುಗಳನ್ನು ಕೊಂಡು ಕೊಂಡು ಅವರನ್ನು ಒಕ್ಕಲೆಬ್ಬಿಸಿದರೆ, ನಾವು ಮಲೆನಾಡಿನವರು ಎಲ್ಲಿಗೆ ಹೋಗಬೇಕು? ಆದುದರಿಂದ ದಯಮಾಡಿ ತಮ್ಮ ನೀತಿಯನ್ನು ಪ್ರಕಟ ಮಾಡಬೇಕು. ನಾವು ಈಗಾಗಲೇ ಜನಪ್ರತಿನಿಧಿಗಳು, ಮತ್ತು ಸಾರ್ವಜನಿಕರು ತಮ್ಮನ್ನು ಭೇಟಿ ಮಾಡಿದ್ದೇವೆ. ಇದರ ಒತ್ತಡ ತಮಗೂ ಗೊತ್ತಿದೆ. ಇದನ್ನು ದಯಮಾಡಿ ತೆಗೆದುಹಾಕಬೇಕು. ಆ ಅರಣ್ಯ ವ್ಯಾಪ್ತಿಯಲ್ಲಿ ಜನರು ಸುಖವಾಗಿ ಬದುಕುವಂಥಾದ್ದಕ್ಕೆ ಹಕ್ಕನ್ನು ಕೊಡುವುದಕ್ಕೆ ಅರಣ್ಯಾಧಿಕಾರಿಗಳು ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ, ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಅರಣ್ಯ ಮತ್ತು ಪರಿಸರ ಖಾತೆ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಅರಗಜ್ಞಾನೇಂದ್ರ ರವರು ಪ್ರಸ್ತಾಪಿಸಿದ ವಿಷಯದ ಬಗ್ಗೆ ನಿನ್ನೆ ಮೀಟಿಂಗ್ ಮಾಡಿದ್ದೇನೆ. ನಿಜ, ಕಳೆದ ಬಾರಿ ಬೈ ಬ್ಯಾಕ್ ಸ್ಕೀಮ್ ಬಗ್ಗೆ ಪ್ರಶ್ನೆಯನ್ನು ಕೇಳಿದ್ದರು. ಇದಕ್ಕೆ 39,50,000 ರೂಪಾಯಿಗಳು ಮಾತ್ರ ಇದೆ. ಇಲ್ಲಿ ಯಾರಾದರೂ ಖುಷಿಯಿಂದ ಕೊಟ್ಟರೆ ತೆಗೆದುಕೊಳ್ಳುತ್ತೇವೆ. ಇಲ್ಲದಿದ್ದರೆ ಇಲ್ಲವೆಂಬ ಮಾತನ್ನು ಹೇಳಿದ್ದೇವೆ. ನಾನು ನಿನ್ನೆ ದಿವಸ ಮೀಟಿಂಗ್ ಮಾಡಿದೆ, ಬಹಳ ಜನರು ಬಂದಿದ್ದರು, ಡಿಸ್‌ಕಸ್ ಮಾಡಿದೆ. ಅವರ ತೊಂದರೆಯೂ ಅರ್ಥವಾಗಿದೆ, ಕಷ್ಟವೂ ಇದೆ. ಆದುದರಿಂದ ನಾವು ಬೈ ಬ್ಯಾಕ್ ಸ್ಕೀಮ್ ಅನ್ನು ಕೈ ಬಿಡುತ್ತೇವೆ, ವಾಪಸ್ಸು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಸಿ ಅಂಡ್ ಡಿ ಲ್ಯಾಂಡ್ ಎಂದು ಇದೆ, ಅದು ರೆವಿನ್ಯೂ ಇಲಾಖೆಗೆ ಸೇರಿದ್ದು. ಬಹುಶಃ 1994ನೇ ಇಸವಿಯಲ್ಲಿ ಸುಮಾರು 1,31,000 ಹೆಕ್ಟಾರ್ ಭೂಮಿಯಲ್ಲಿ ಲ್ಯಾಂಡ್ ಬ್ಯಾಂಕ್ ಮರ ಗಿಡಗಳನ್ನು ಮಾತ್ರ ನೆಡಿ, ಬೇಕಾದಾಗ ಅದನ್ನು ವಾಪಸ್ಸು ತೆಗೆದುಕೊಳ್ಳುವಂತಹ ಅವಕಾಶವಿದೆಯೆಂಬ ಆದೇಶವನ್ನು ಮಾಡಿ, ಅರಣ್ಯ ಇಲಾಖೆಗೆ ಕೊಟ್ಟಂಥಾದ್ದು ಇದೆ. ಅದರಲ್ಲಿ ಅನೇಕ ಜನರು ಕೃಷಿಯನ್ನು ಮಾಡಿಕೊಂಡು ಇದ್ದಾರೆ. ಆದರೆ ಅದಕ್ಕೆ ಷರತ್ತನ್ನು ಹಾಕಿದ್ದಾರೆ, ಅದನ್ನು ಮೀಸಲು ಅರಣ್ಯವೆಂದು ಮಾಡಬಾರದೆಂದು ಇದೆ. ಆದರೆ ಇವತ್ತು ದಾಖಲೆಯನ್ನು ತೆಗೆದು ನೋಡಿದರೆ, ಇದೆಲ್ಲವೂ ಫಾರೆಸ್ಟ್, ಅಲ್ಲಿ ಕುಳಿತಿರುವವರ ಪರಿಸ್ಥಿತಿ ಏನು? ಎಷ್ಟು ಜನರು ಇದ್ದಾರೆ, ಅವರು ಯಾರೂ ಸಾವಿರಗಟ್ಟಲೆ ಎಕರೆಯನ್ನು ಮಾಡಿಲ್ಲ. ಎರಡು ಎಕರೆ, ಒಂದು ಎಕರೆ, ಅರ್ಧ ಎಕರೆ, ಮಾಡಿದಂತಹ ಸಾಮಾನ್ಯ ಜನರು ಇದ್ದಾರೆ. ಅವರನ್ನು ಒಕ್ಕಲೆಬ್ಬಿಸುವಂತಹ ಪ್ರಯತ್ನ ಆಗಿದೆ. ಇವತ್ತು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಬೇಕಾದರೆ, ಅನೇಕ ವರ್ಷಗಳಿಂದ ಫಾರೆಸ್ಟ್ ಒಳಗೆ ರಸ್ತೆಗಳು ಇವೆ. ಅರಣ್ಯಾಧಿಕಾರಿಗಳೂ ಅದನ್ನು ರಿಪೇರಿ ಮಾಡುವುದಕ್ಕೆ ಬಿಡುವುದಿಲ್ಲ. ಅದನ್ನು ಕೇಳಿದರೆ ಸುಪ್ರೀಂಕೋರ್ಟ್‌ನ ಜಡ್ಜ್‌ಮೆಂಟ್ ಇದೆಯೆಂದು ಹೇಳುತ್ತಾರೆ. ಮಡಿಕೇರಿಯಿಂದ ಸುಬ್ರಮಣ್ಯಕ್ಕೆ ಹೋಗುವುದಕ್ಕೆ 33ಕಿ.ಮೀ ಇದೆ. ಇವತ್ತು ಹೋಗಬೇಕೆಂದರೆ 90ಕಿ.ಮೀ. ದೂರ ಸುತ್ತಿಕೊಂಡು ಬರಬೇಕು. ಅದು 8 ಕಿ.ಮೀ. ರಸ್ತೆ ಇದೆ, ಅದನ್ನು ರಿಪೇರಿ ಮಾಡುವುದಕ್ಕೆ ಬಿಡುತ್ತಿಲ್ಲ. ಅದನ್ನು ಕೇಳಿದರೆ ರಿಸರ್ವ್ ಫಾರೆಸ್ಟ್ ಎಂದು ಹೇಳುತ್ತಾರೆ. ಈ ಪರಿಸ್ಥಿತಿಯನ್ನು ತೆಗೆದುಹಾಕಬೇಕು. ಅರಣ್ಯ ಉಳಿಸಿಕೊಂಡಿದ್ದೇವೆ, ಅಲ್ಲಿ ರಸ್ತೆಯಲ್ಲಿ ತಿರುಗಾಡುವುದಕ್ಕೆ ಬಿಡುವುದಿಲ್ಲವೆಂದರೆ, ಇಲ್ಲಿ ಅರಣ್ಯಾಧಿಕಾರಿಗಳಿಗೆ ತಕ್ಕ ಸೂಚನೆಯನ್ನು ಕೊಡಬೇಕು. ಇದು ಇರುವ ರಸ್ತೆಯೇ, ಅದು ಅರಣ್ಯ ಇಲಾಖೆಯವರು ಈ ರಸ್ತೆಯ ಮಧ್ಯೆ ಇರಬಹುದು. ಆ ರಸ್ತೆಯನ್ನು ರಿಪೇರಿ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ನಾನು ಮಾನ್ಯ ಅರಣ್ಯ ಸಚಿವರಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇದರ ಜೊತೆಗೆ, ಒಂದು ವಿಷಯವನ್ನು ಹೇಳಿ ನನ್ನ

ಮಾತುಗಳನ್ನು ಮುಗಿಸುತ್ತೇನೆ. ಕ್ರೀಡೆಯ ಬಗ್ಗೆ ಎಲ್ಲರೂ ಸಾಕಷ್ಟು ಮಾತನಾಡಿದ್ದಾರೆ. ಕೊಡಗಿನಲ್ಲಿ ಸಾಕಷ್ಟು ಕ್ರೀಡಾಪಟ್ಟುಗಳಿದ್ದಾರೆ ಎಂದು ನಿನ್ನೆ ಕೂಡ ಹೇಳಿದರು. ಆದರೆ ಈ ಜಿಲ್ಲೆಯಲ್ಲಿ ಕ್ರೀಡೆಗೆ ಏನು ಪ್ರೋತ್ಸಾಹ ಕೊಡುತ್ತಿದ್ದಾರೆ ಎನ್ನುವುದರ ಬಗ್ಗೆ ಹೇಳುತ್ತೇನೆ. ಸೋಮವಾರಪೇಟೆ ತಾಲ್ಲೂಕಿನಲ್ಲಿ ಒಂದು ಕ್ರೀಡಾ ಶಾಲೆ ಇದೆ. ಇಡೀ ರಾಜ್ಯದಲ್ಲಿ, 8ನೇ ತರಗತಿಯಿಂದ 10ನೇ ತರಗತಿಯವರೆಗೆ ಓದುತ್ತಿರುವಂಥ ವಿದ್ಯಾರ್ಥಿಗಳನ್ನು ಅಲ್ಲಿಗೆ ಆಯ್ಕೆ ಮಾಡುತ್ತಾರೆ. ಅನೇಕ ಕ್ರೀಡಾಪಟುಗಳು ಅಲ್ಲಿ ತರಬೇತಿ ಪಡೆದು ರಾಜ್ಯಕ್ಕೆ ಮಟ್ಟಕ್ಕೆ, ರಾಷ್ಟ್ರ ಮಟ್ಟಕ್ಕೆ ಹೋಗಿದ್ದಾರೆ. ಅದು ರವಿ ನಾಯಕ್ ಇರಬಹುದು, ಮತ್ತೊಬ್ಬರು ಇರಬಹುದು, ಈ ರೀತಿ ಅನೇಕರು ಹೋಗಿದ್ದಾರೆ. ಆದರೆ ಇವತ್ತು ಆ ಶಾಲೆಯ ವ್ಯವಸ್ಥೆ ಹೇಗಿದೆ ಎಂದರೆ ಅದನ್ನು ಯಾರೂ ನೋಡುವುದಿಲ್ಲ. ಅಲ್ಲಿಯ ಮಕ್ಕಳಿಗೆ ಸ್ನಾನ ಮಾಡಲು ಬಿಸಿ ನೀರಿನ ವ್ಯವಸ್ಥೆ ಇಲ್ಲ; ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಇದು ನೀವು ಕ್ರೀಡೆಗೆ ನಮ್ಮ ಜಿಲ್ಲೆಗೆ ಕೊಡುವಂಥ ಒಂದು ಪ್ರೋತ್ಸಾಹ. ಸ್ಪೋರ್ಟ್ಸ್ ಆಥಾರಿಟಿ ಆಫ್ ಇಂಡಿಯಾದಿಂದ ಒಂದು ಶಾಲೆಯನ್ನು ನಡೆಸುತ್ತಿದ್ದಾರೆ. ಅದಕ್ಕೆ ಒಂದು ಪ್ರತ್ಯೇಕ ಸ್ಟೇಡಿಯಂ ಮಾಡಬೇಕೆಂದು ಕೇಂದ್ರ ಸರ್ಕಾರ ಮೂರು ವರ್ಷಗಳ ಹಿಂದೆ ನನ್ನ ಪಾಲಿನ 35 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು, ಆ ಕಟ್ಟಡ ಅರ್ಧದಲ್ಲೇ ನಿಂತಿದೆ. ಅದಕ್ಕೆ ರಾಜ್ಯ ಸರ್ಕಾರದಿಂದ ಕೊಡಬೇಕಾದಂಥ ಮ್ಯಾಚಿಂಗ್ ಗ್ರ್ಯಾಂಟನ್ನು ಕೊಡುತ್ತಿಲ್ಲ. ಈ ರೀತಿಯಾಗಿ, ಎಲ್ಲಾ ರೀತಿಯಿಂದಲೂ ನಮ್ಮ ಜಿಲ್ಲೆ ತಿರಸ್ಕಾರಕ್ಕೆ ಒಳಗಾಗಿದೆ.

ಇನ್ನು, ಕಾವೇರಿ ನೀರಾವರಿ ಅಭಿವೃದ್ಧಿ ನಿಗಮದ ಬಗ್ಗೆ ಎರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕಾವೇರಿ ನೀರಾವರಿ ಅಭಿವೃದ್ಧಿ ನಿಗಮ ಕೈಗೆತ್ತಿಕೊಂಡಿರುವ ಯೋಜನೆಯೆಂದರೆ, ತಲಕಾವೇರಿಯನ್ನು ಅಭಿವೃದ್ಧಿ ಮಾಡುವುದು. ಇದಕ್ಕೆ ಹತ್ತೂವರೆ ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ; ಸಂತೋಷ ಬೇರೆ ಜಿಲ್ಲೆಗಳಲ್ಲಿ ಕಾವೇರಿ ನೀರಾವರಿ ಅಭಿವೃದ್ಧಿ ನಿಗಮದ ಅಡಿಯಲ್ಲಿ ಇತರ ಎಲ್ಲಾ ಕೆಲಸಗಳನ್ನೂ ಮಾಡುತ್ತಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯೂ ಮಾಡುತ್ತಿಲ್ಲ, ಕಾವೇರಿ ನೀರಾವರಿ ಅಭಿವೃದ್ಧಿ ನಿಗಮದಿಂದಲೂ ಕೈಗೆತ್ತಿಕೊಳ್ಳುತ್ತಿಲ್ಲ. ನಿಮ್ಮಲ್ಲಿ ಅದನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಈ ರಾಜ್ಯಕ್ಕೆ, ಮಳೆ ಬಂದು ಕಾವೇರಿ ಹೊಳೆಯ ನೀರು ಬೇಕು. ಆದರೆ ಕಾವೇರಿ ಬೇಸಿನ್‌ನಲ್ಲಿ ಅಭಿವೃದ್ಧಿ ಮಾತ್ರ ಬೇಡ. ಈ ತಾರತಮ್ಯವನ್ನು ತೆಗೆದು ಹಾಕಿ ನಮ್ಮ ಜಿಲ್ಲೆಗೆ ವಿಶೇಷ ಗಮನವನ್ನು ಕೊಡಬೇಕು. ಇಲ್ಲದೇ ಹೋದರೆ ಅಸಮತೋಲನವಾಗುತ್ತದೆ. ನಮ್ಮ ಜಿಲ್ಲೆಯನ್ನು ಈ ರೀತಿ ಕಡೆಗಣಿಸುವಂಥ ಪ್ರವೃತ್ತಿಯನ್ನು ಕೈಬಿಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಹೆಚ್.ಎಂ.ವಿಶ್ವನಾಥ್‌ರವರು, ತಾವು ಐದು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಹೆಚ್.ಎಂ. ವಿಶ್ವನಾಥ್(ಸಕಲೇಶಪುರ): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಆದರೆ ಐದು ನಿಮಿಷದಲ್ಲಿ ಮುಗಿಸಿ ಎಂದು ಹೇಳುತ್ತಿದ್ದೀರಿ. ನಾವು ಈ ಸದನದಲ್ಲಿ ಕೊನೆಯ ಭಾಗದಲ್ಲಿರುವವರು.

ಅಧ್ಯಕ್ಷರು: ನೀವು ನಿಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೇಳಿ; ನಿಮ್ಮ ಲೀಡರ್‌ಗಳು ಜಾಸ್ತಿ ಹೊತ್ತು ಮಾತನಾಡುತ್ತಾರೆ.

ಶ್ರೀ ಹೆಚ್.ಎಂ. ವಿಶ್ವನಾಥ್: ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೇ, ನಾವು ಈ ಸದನದ ಕೊನೆಯ ಭಾಗದಲ್ಲಿದ್ದೇವೆ. ಅಲ್ಲದೆ, ಈ ರಾಜ್ಯದ ಕೊನೆಯ ಭಾಗದಲ್ಲಿ ಪಶ್ಚಿಮ ಘಟ್ಟದಲ್ಲಿದ್ದೇವೆ ನಾವು. ಇವತ್ತಿನ ದಿವಸ ಶುಂಠಿ, ವೆನಿಲ್ಲಾ, ಬಾಳೆ, ಅರಿಶಿಣ, ಅನಾನಸ್, ಪಚೋಲಿ, ಹಸಿಮೆಣಸಿನಕಾಯಿ,

ನಿಂಬೆ, ಕಿತ್ತಲೆಗಳನ್ನು ಬೆಳೆಯುತ್ತಿರ ತಕ್ಕಂಥ ಪ್ರದೇಶದಲ್ಲಿ ನಾವು ಇದ್ದೇವೆ. ಅದನ್ನು ಅಭಿವೃದ್ಧಿ ಪಡಿಸುವುದಕ್ಕೆ, ಅವುಗಳನ್ನು ಹೊರಗಡೆ ಕಳುಹಿಸಬೇಕಾದರೆ, ಅದನ್ನು ಮಾರುಕಟ್ಟೆ ಮಾಡಲು ಬೇಕಾದಂಥ ವ್ಯವಸ್ಥೆ ಇರಲಿಲ್ಲ. ಸನ್ಮಾನ್ಯ ಕೈಗಾರಿಕಾ ಸಚಿವರು ನಿನ್ನೆ ಸದನದಲ್ಲಿ, ಅಲ್ಲಿ ಒಂದು ಉದ್ಯಮವನ್ನು ಸ್ಥಾಪನೆ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿರುವುದರಿಂದ, ಅವರಿಗೆ ಮತ್ತು ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸಿ ಸ್ವಾಗತ ಮಾಡುತ್ತೇನೆ.

ಇನ್ನು, ನಮ್ಮ ಭಾಗದಲ್ಲಿ ಪಶುಸಂಗೋಪನಾ ಇಲಾಖೆಯಿಂದ ಭಾರೀ ತೊಂದರೆಯಾಗುತ್ತಿದೆ. ಕಾರಣವೆಂದರೆ, ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ಆಲೂರು ಮತ್ತು ಸಕಲೇಶಪುರ–ಈ ಎರಡು ತಾಲ್ಲೂಕುಗಳಲ್ಲಿ ಪಶು ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ ಎಷ್ಟಿದೆ ಎಂದರೆ 40 ಜನರ ಕೊರತೆ ಇದೆ. ನಮ್ಮ ಭಾಗದಲ್ಲಿರತಕ್ಕಂಥ ಒಟ್ಟು 487 ಹಳ್ಳಿ ಇರತಕ್ಕಾಥ ನಮ್ಮ ಭಾಗದಲ್ಲಿ 40 ಜನ ಸಿಬ್ಬಂದಿಗಳು ಮತ್ತು ವೈದ್ಯರ ಕೊರತೆ ಇದೆ. ಗೊದ್ದು ಎನ್ನತಕ್ಕಂಥ ಗ್ರಾಮದಲ್ಲಿ ಮೊನ್ನೆ ಒಂದೇ ದಿನ ಒಂದೇ ಮನೆಯ ಏಳು ಎಮ್ಮೆಗಳು ಸತ್ತು ಹೋಗಿವೆ. ಅದನ್ನು ನೋಡುವುದಕ್ಕೆ ವೈದ್ಯರು ಅಲ್ಲಿಗೆ ಸಕಲೇಶಪುರದಿಂದ, 55 ಕಿ.ಮೀ. ದೂರದಿಂದ ಹೋಗಬೇಕು. ಅಲ್ಲಿ, ತಾಲ್ಲೂಕಿನಲ್ಲಿರತಕ್ಕಂಥ ಪಶು ವೈದ್ಯ ಶಾಲೆಯಲ್ಲಿ ಸಿಬ್ಬಂದಿಗಳು, ಡಾಕ್ಟರ್‌ಗಳೇ ಇಲ್ಲ. ಇಂಥ ಒಂದು ಪರಿಸ್ಥಿತಿ ಮಲೆನಾಡು ಭಾಗದ ಈ ಎರಡು ತಾಲ್ಲೂಕುಗಳಲ್ಲಿ ಇದೆ. ಸರ್ಕಾರ ಇದರ ಬಗ್ಗೆ ಗಮನ ಹರಿಸಿ ಕೂಡಲೇ ಅಲ್ಲಿಗೆ ಸಿಬ್ಬಂದಿಗಳು ಮತ್ತು ಅಲ್ಲಿಗೆ ಬೇಕಾದಂಥ ಔಷಧಿಗಳನ್ನು ವ್ಯವಸ್ಥೆ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಇನ್ನು, ಅರಣ್ಯದ ಬಗ್ಗೆ ನಮ್ಮ ಸ್ನೇಹಿತರು ಈಗಾಗಲೇ ಮಾತನಾಡಿದ್ದಾರೆ. ಜಗತ್ತಿನ 18 ಅತ್ಯುನ್ನತವಾದಂಥ ಅರಣ್ಯಗಳಲ್ಲಿ ಬಿಸ್ಲೆ ಅರಣ್ಯ ಮತ್ತು ಪಶ್ಚಿಮ ಘಟ್ಟದ ಸಕಲೇಶರಪುರ ಭಾಗದಲ್ಲಿರತಕ್ಕಂಥ ಅರಣ್ಯಗಳೂ ಸೇರಿವೆ. ನಮ್ಮ ಕೊಡಗಿನ ಭಾಗದಲ್ಲಿ ಬರತಕ್ಕಂಥ ಪುಷ್ಪಗಿರಿ ತಪ್ಪಲು ಅತ್ಯುನ್ನತವಾದುದು. ಇಲ್ಲಿರತಕ್ಕಂಥ ಮರಗಳು ಮತ್ತು ಪ್ರಾಣಿ ಸಂಕುಲ ನಮ್ಮಲ್ಲಿ ಇದೆ. ಅದರಲ್ಲೂ ಕೂಡ ಬರ್ಕಾ, ಪುಣಗ, ಕಡವೆ ಕಾಡೆಮ್ಮೆ, ಕಪ್ಪು ಚಿರತೆ, ಕಾಡು ಕುರಿಗಳು, ಕಾಡು ಬೆಕ್ಕುಗಳು, ಹಾರಗನ ಬೆಕ್ಕು ಈ ರೀತಿಯ, ನೀವ್ಯಾರೂ ನೋಡದೇ ಇರತಕ್ಕಂಥ ವಿಶೇಷವಾದ ಗುಣಗಳಿರತಕ್ಕಂಥ ಮತ್ತು ಅದರಿಂದ ಪ್ರಕೃತಿಗೆ ಅನುಕೂಲವಾಗತಕ್ಕಂಥ ಪ್ರಾಣಿ ಪಕ್ಷಿಗಳು ಇವೆ. ಅವುಗಳನ್ನು ರಕ್ಷಣೆ ಮಾಡಲು ನಮ್ಮ ಅರಣ್ಯ ಇಲಾಖೆ ಸಂಪೂರ್ಣ ವಿಫಲವಾಗಿದೆ. ಕಾರಣವೆಂದರೆ, ಎಸನೂರು ಅರಣ್ಯ ಇಲಾಖೆಯ ಸಿಬ್ಬಂದಿಗಳ ಬಳಿ ರೈಫಲ್ ಇದೆ, ಆದರೆ ಬುಲೆಟ್ ಇಲ್ಲ. ರೈಫಲ್‌ಗೆ ಬೇಕಾದಂಥ ಬುಲೆಟ್‌ಗಳು ಇಲ್ಲದೇ ಇರುವಂಥ ವ್ಯವಸ್ಥೆಯಲ್ಲಿ ಯಾರನ್ನು ಯಾರು ರಕ್ಷಣೆ ಮಾಡುತ್ತಾರೆ? ನಮ್ಮಲ್ಲಿ ಇನ್ನೊಂದು ಸಮಸ್ಯೆ ಎಂದರೆ, ಬಗರ್ ಹುಕುಂನಲ್ಲಿ ಸಾಗುವಳಿ ಮಾಡುತ್ತಿದ್ದಂಥವರು ಅದನ್ನು ಕ್ರಮಬದ್ಧಗೊಳಿಸಲು ಫಾರಂ–53ರಲ್ಲಿ ಅರ್ಜಿ ಹಾಕುತ್ತಿದ್ದಾರೆ. ನಮ್ಮ ಭಾಗದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಭೂರಹಿತರು ಮತ್ತು ಮನೆ ಇಲ್ಲದೇ ಇರತಕ್ಕಂಥ ಜನರು ಇದ್ದಾರೆ. ಅವರು ಈಗ ಫಾರಂ–53ರ ಮೂಲಕ, ಸರ್ಕಾರೀ ಜಾಗವನ್ನು ಒತ್ತುವರಿ ಮಾಡಿರುವುದನ್ನು ಕ್ರಮಬದ್ಧಗೊಳಿಸುವ ಸಂದರ್ಭದಲ್ಲಿ ಅರಣ್ಯ ಇಲಾಖೆಯಿಂದ ನಮಗೆ ಸಮಸ್ಯೆಯಾಗುತ್ತಿದೆ. ಬಫರ್ ಜೋನ್ ಎಂದು ಹೇಳಿ ಅರಣ್ಯ ಜಾಗದಿಂದ 300 ಅಡಿ ಅಂದರೆ 100 ಮೀಟರ್ ಜಾಗವನ್ನು ಬಿಟ್ಟು ನೀವು ಭೂಮಿ ಉಳುಮೆ ಮಾಡಬೇಕು ಎಂದು ಹೇಳುತ್ತಾರೆ. ಅವರು 100 ಮೀಟರ್ ಬಿಟ್ಟು ಎಲ್ಲಿಗೆ

ಹೋಗುವುದು? ಹೀಗಾಗಿ, ಅವರು ಹಕ್ಕುಪತ್ರ ತೆಗೆದುಕೊಳ್ಳುವುದರಲ್ಲಿ ಅರಣ್ಯ ಇಲಾಖೆಯವರಿಂದ ಸಮಸ್ಯೆ ಸೃಷ್ಟಿಯಾಗುತ್ತಿದೆ. ಇದು ಭಾರೀ ದೊಡ್ಡ ಸಮಸ್ಯೆಯಾಗಿದೆ. ಹಾಗಾಗಿ ಸುಮಾರು 400ಕ್ಕೂ ಹೆಚ್ಚು ಫೈಲುಗಳು ನಮ್ಮಲ್ಲಿ ಹಾಗೇ ಉಳಿದುಕೊಂಡಿವೆ. ಆದ್ದರಿಂದ, ಸರ್ಕಾರ ಕೂಡಲೇ ಸಾಮಾಜಿಕ ಅರಣ್ಯ ಗಳ ಪಕ್ಕದಲ್ಲಿರತಕ್ಕಂಥ ಅರಣ್ಯಗಳಲ್ಲಿ ಬಫರ್ ಜೋನಿನ ನಿಬಂಧನೆಯನ್ನು ತೆಗೆದು ಹಾಕಬೇಕು ಎನ್ನುವ ಮನವಿಯನ್ನು ನಾನು ಮಾಡಿಕೊಳ್ಳುತ್ತಿದ್ದೇನೆ. ಇನ್ನು, ನಮ್ಮ ಭಾಗದಲ್ಲಿ ಬರತಕ್ಕಂಥ ದೊಡ್ಡ ಸಮಸ್ಯೆ ಎಂದರೆ ನೀರಾವರಿ ಸಮಸ್ಯೆ. ಹೇಮಾವತಿ ಜಲಾಶಯ 1968ರಲ್ಲಿ ಪ್ರಾರಂಭವಾಗಿ 1984ರಲ್ಲಿ ಮುಕ್ತಾಯವಾಗಿದೆ. ಸುಮಾರು 34–35 ಟಿ ಎಂ ಸಿ ನೀರು ನಿಲ್ಲಿಸುವಂಥ ಒಂದು ದೊಡ್ಡ ಜಲಾಶಯವದು. ಇದರ ಹಿನ್ನೀರಿನಲ್ಲಿ ಸುಮಾರು 45 ಹಳ್ಳಿಗಳು ಮುಳುಗಡೆಯಾಗಿವೆ. ಇವತ್ತು ಈ ನೀರಿನಿಂದ ತುಮಕೂರು, ಮಂಡ್ಯ ಮತ್ತು ಹಾಸನದ ಕೆಲವು ಬರಡಾದ ಭಾಗದಲ್ಲಿನ ಜಮೀನಿನಲ್ಲಿ ಕೃಷಿ ಮಾಡಿಕೊಂಡು, ಉತ್ತಮವಾದಂಥ ಬೆಳೆ ಬೆಳೆಯುವಂಥ ಪರಿಸ್ಥಿತಿಯಾಗಿದೆ. ಹೀಗೆ ಮುಳುಗಡೆಯಾದಂಥ ಪ್ರದೇಶದಲ್ಲಿ ನೀರು ನಿಲುಗಡೆಯಾಗಿ 23 ವರ್ಷಗಳಾದವು. ಈ 23 ವರ್ಷಗಳಲ್ಲಿ ಸುಮಾರು 46 ಗ್ರಾಮಗಳು ಸಂಪೂರ್ಣ ಮುಳುಗಿ ಹೋಗಿವೆ. ಈ ಜಲಾಶಯದ ಅಂಚಿನಲ್ಲಿ ಸುಮಾರು 35 ಹಳ್ಳಿಗಳಿವೆ. ಈ ಜಲಾಶಯಕ್ಕೆ ಶೇಕಡಾ 70ರಿಂದ 80ರಷ್ಟು ಪ್ರಮಾಣದಲ್ಲಿ ನೀರು ನಿಂತರೂ ಸಾಕು, ಈ 35 ಹಳ್ಳಿಗಳ ಪೈಕಿ 15 ಹಳ್ಳಿಗಳು ವಿಪರೀತ ನೀರಿನ ಹತ್ತಿರವಿರುವುದರಿಂದ, 70 ಭಾಗ ನಿಂತರೆ ಸಾಕು, 5ರಿಂದ 15 ಅಡಿ ಹತ್ತಿರಕ್ಕೆ ನೀರು ಬರುತ್ತದೆ. ಹೀಗಾಗಿ ಈ ಪ್ರದೇಶಗಳು ಶೀತಪೀಡಿತ ಪ್ರದೇಶಗಳಾಗಿವೆ. ಈ ರೀತಿ ಶೀತ ಪೀಡಿತ ಭಾಗದಲ್ಲಿನ ಹಳ್ಳಿಗಳ ಪರಿಸ್ಥಿತಿಯನ್ನು ನೀವು ನೋಡಬೇಕು. ಆ ಭಾಗದಲ್ಲಿ, ಜೂನ್ ತಿಂಗಳಿಂದ ನವೆಂಬರ್ ತಿಂಗಳವರೆಗೆ ಅಂದರೆ ಸುಮಾರು ಆರು ತಿಂಗಳ ಕಾಲ ಆ ಭಾಗದ ಊರುಗಳು ಶೀತಪೀಡಿತವಾಗಿರುತ್ತವೆ. ಆ ಊರುಗಳ ಒಳಗೆ ಓಡಾಡಲೂ ಸಾಧ್ಯವಿಲ್ಲ. ಮನೆಗಳ ಗೋಡೆಗಳು ಶೀತವಾಗುತ್ತವೆ. ಕೆಲವು ಊರುಗಳಲ್ಲಿ, ಮನೆಗಳ ಒಳಗೆ ಮಲಗಬೇಕೆಂದರೆ ಹುಲ್ಲು ಹಾಕಿಕೊಂಡು ಮಲಗುವಂಥ ಪರಿಸ್ಥಿತಿ ಇದೆ. ಅಲ್ಲದೆ, ಈ ಭಾಗ ಸುಮಾರು 40ರಿಂದ 400 ಇಂಚುಗಳಷ್ಟು ಮಳೆ ಬೀಳತಕ್ಕಂಥ ಪ್ರದೇಶ. ಹೀಗಾಗಿ ಆ ಭಾಗದಲ್ಲಿ ಮಳೆಯ ಶೀತದ ಜೊತೆಗೆ, ಜಲಾಶಯದ ಶೀತ ಇವರೆಡೂ ಸೇರಿಕೊಂಡು ಸುಮಾರು 32 ಹಳ್ಳಿಗಳಲ್ಲಿಯ ಜನಜೀವನ ಅಸ್ತವ್ಯಸ್ತವಾಗಿದೆ. 1990ರಲ್ಲಿ ನಾವು ಚಳುವಳಿ ಮಾಡಿ, ಹೋರಾಟ ಪ್ರಾರಂಭ ಮಾಡಿ ಇದನ್ನು ಸರ್ಕಾರದ ಗಮನಕ್ಕೆ ತಂದೆವು. 1994ರಲ್ಲಿ ಅಂದಿನ ಸರ್ಕಾರಕ್ಕೆ ನಾವು ವರದಿ ಕೊಟ್ಟು, ಈ ರೀತಿಯ ಶೀತಪೀಡಿತ ಪ್ರದೇಶದಿಂದ ನಮ್ಮ ಜನರನ್ನು ಹೊರಗೆ ತನ್ನಿ ಎಂದು ಕೇಳಿಕೊಂಡಿದ್ದೇವೆ. 1996ರಲ್ಲಿ, ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ನಾವು ಇದನ್ನು ಸರ್ಕಾರದ ಗಮನಕ್ಕೆ ತಂದಾಗ, ಅವರು ಒಂದು ಆದೇಶವನ್ನು ಹೊರಡಿಸಿದರು. ಈ ಭಾಗದಲ್ಲಿ ಎಷ್ಟು ಶೀತ ಪೀಡಿತ ಪ್ರದೇಶವಿದೆ ಎನ್ನುವುದನ್ನು ಪತ್ತೆ ಹಚ್ಚಿ ಅದನ್ನು ಸರ್ಕಾರದ ಗಮನಕ್ಕೆ ತನ್ನಿ, ಅದಕ್ಕೆ ಬೇಕಾದಂಥ ಪುನರ್ವಸತಿ ಮತ್ತು ಪರಿಹಾರವನ್ನು ನೀಡುತ್ತೇವೆ ಎನ್ನುವ ಮಾತನ್ನು ಹೇಳಿದರು. ನಂತರ 1998ರಲ್ಲಿ ಇದರ ಬಗ್ಗೆ ಮತ್ತೆ ಪ್ರಸ್ತಾವನೆ ಆಗಿ ಸರ್ಕಾರದ ನಮ್ಮ ಗೊರೂರು ಮುಖ್ಯ ಇಂಜಿನಿಯರ್‌ರವರು ಒಂದು ವರದಿಯನ್ನು ನೀಡಿದರು. ಆ ವರದಿಲ್ಲಿ 17 ಹಳ್ಳಿಗಳು ಸಂಪೂರ್ಣ ಶೀತಪೀಡಿತವಾಗಿವೆ, ಇವುಗಳಿಗೆ ಪರಿಹಾರ ನೀಡಬೇಕೆನ್ನುವುದರ ಬಗ್ಗೆ ಸಂಪೂರ್ಣವಾದಂಥ ಒಂದು ನೀಲಿ ನಕಾಶೆ ತಯಾರು ಮಾಡಿ ಅದಕ್ಕೆ ಸಂಬಂಧಪಟ್ಟಂಥ ಅಂದಾಜು

ವೆಚ್ಚವನ್ನು ತಯಾರು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಈ ಸದನ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗಡೆ ಅತ್ಯುನ್ನತವಾದ ಸ್ಥಾನ ಎಂದು ತಿಳಿದುಕೊಂಡಿದ್ದೇನೆ. ಇಲ್ಲಿ ಮಾತನಾಡತಕ್ಕಂಥ ಮಾತುಗಳು ಕಡತದೊಳಗೆ ಹೋಗುತ್ತದೆ ಮತ್ತು ಅದನ್ನು ಸರ್ಕಾರ ಜಾರಿಗೆ ತರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಹೇಮಾವತಿ ಜಲಾಶಯ ನಿರ್ಮಾಣವಾಗಿ 23 ವರ್ಷಗಳಾಯಿತು. ದುರಂತ ಏನೆಂದರೆ, ನಾನು ಮೊನ್ನೆ 'ಜಲಾಶಯದ ಹಿನ್ನೀರಿನಿಂದಾಗಿ ಶೀತಪೀಡಿತವಾದ ಗ್ರಾಮಗಳೆಷ್ಟು' ಎಂದು ಪ್ರಶ್ನೆ ಕೇಳಿದ್ದು ಅದಕ್ಕೆ ಏನು ಉತ್ತರ ಕೊಟ್ಟಿದ್ದಾರೆಂದರೆ– ಈ ಜಲಾಶಯದ ಹಿನ್ನೀರಿನಿಂದ ಯಾವುದೇ ಗ್ರಾಮಗಳು ಶೀತಪೀಡಿತವಾಗಿರುವುದಿಲ್ಲ ಎಂದು ಮುಖ್ಯ ಇಂಜಿನಿಯರ್‌ರವರು, ಹೇಮಾವತಿ ಜಲಾಶಯ, ಗೊರೂರು, ಇವರು ತಿಳಿಸಿರುತ್ತಾರೆ. ಆದರೆ '17 ಹಳ್ಳಿಗಳು ಶೀತಪೀಡಿತ ಪ್ರದೇಶಕ್ಕೆ ಒಳಪಟ್ಟಿವೆ ಹಾಗೂ ಇದಕ್ಕೆ ಸುಮಾರು 10.82 ಕೋಟಿ ರೂಪಾಯಿಗಳ ಒಟ್ಟು ಅಂದಾಜು ಆಗುತ್ತದೆನ್ನುವ ವರದಿಯನ್ನು ಸರ್ಕಾರಕ್ಕೆ ಅವರೇ ಕೊಟ್ಟಿದ್ದಾರೆ. ಅದಲ್ಲದೆ ಸರ್ಕಾರ 1999 ಆದಮೇಲೆ 2003ರಲ್ಲಿ ಕಂದಾಯ ಇಲಾಖೆ ಕಾರ್ಯದರ್ಶಿಯವರ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿದ್ದು, ಸದರಿ ಸಮಿತಿಯವರು 17 ಹಳ್ಳಿಗಳಲ್ಲಿ ಮೂರು ಹಳ್ಳಿಗಳನ್ನು ಈಗಾಗಲೇ ಸ್ಥಳ ತನಿಖೆ ಮಾಡಿದ್ದಾರೆ. ಆದರೆ ಶಾಸನ ಸಭೆಗೆ ಒಂದು ವರದಿ ಕೊಡುತ್ತಾರೆ, ಅದೇನೆಂದರೆ, ಒಂದನೆಯದಾಗಿ 'ಯಾವುದೇ ಹಳ್ಳಿಗಳು ಶೀತಪೀಡಿತ ಪ್ರದೇಶಕ್ಕೆ ಸೇರಿಲ್ಲ ಎಂದು ಕೊಡುತ್ತಾರೆ ಮತ್ತು ಎರಡನೆಯದಾಗಿ, ಅಲ್ಲಿ ಯಾವುದೇ ತರದ ಶೀತಪೀಡಿತ ಪ್ರದೇಶಕ್ಕೆ ಬೇಕಾದಂಥ ಯಾವುದೇ ಯೋಜನೆಗಳು ನಮ್ಮ ಹತ್ತಿರ ಇಲ್ಲ ಎನ್ನತಕ್ಕಂಥ ವರದಿ ಕೊಡುತ್ತಾರೆ. ಹಾಗಾದರೆ ಸದನವನ್ನು ತಪ್ಪು ಹಾದಿಗೆ ತರತಕ್ಕಂಥ ಈ ಅಧಿಕಾರಿಗಳ ಮೇಲೆ ಕ್ರಮ ಏನು? ಈ 17 ಹಳ್ಳಿಯ ಜನರ ಜೀವನ ಅತ್ಯಂತ ಕೆಟ್ಟ ಸ್ಥಿತಿಯಲ್ಲಿದೆ.

ಅಧ್ಯಕ್ಷರು: ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಪ್ರಾರಂಭ ಮಾಡಿ 11 ನಿಮಿಷಗಳಾಯಿತು. ದಯಮಾಡಿ ಬೇಗನೆ ಮುಕ್ತಾಯಗೊಳಿಸಿ.

ಶ್ರೀ ಹೆಚ್.ಎಂ.ವಿಶ್ವನಾಥ್:– ಸ್ವಾಮಿ, ಕಳೆದ 7 ದಿನಗಳಲ್ಲಿ ಇದೇ ಮೊದಲ ಬಾರಿಗೆ ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ.

ಅಧ್ಯಕ್ಷರು: ಏನು ನಡೆದಿತ್ತು. ಏನಾಗಿದೆ ಎನ್ನುವುದೆಲ್ಲಾ ಗೊತ್ತಿದೆ. ಹೀಗೆ ಮಾತನಾಡುತ್ತಾ ಹೋದರೆ ಬೇರೆ ಸದಸ್ಯರೆಲ್ಲರಿಗೆ ನಾನು ಹೇಗೆ ಅವಕಾಶ ಮಾಡಿಕೊಡಲಿ? ಇನ್ನು ಒಂದು ನಿಮಿಷದಲ್ಲಿ ಮುಗಿಸಿ.

ಶ್ರೀ ಹೆಚ್.ಎಂ.ವಿಶ್ವನಾಥ್: ಆಯಿತು. ಆದ್ದರಿಂದ ನಾನು ಈ ಸಂದರ್ಭದಲ್ಲಿ ಕೇಳುವುದೇನೆಂದರೆ, ಈ 17 ಹಳ್ಳಿಗಳು ಮತ್ತು ಅದರ ಅಂಚಿನಲ್ಲಿರುವಂಥ 15 ಹಳ್ಳಿಗಳು ಹೀಗೆ ಸುಮಾರು 32 ಹಳ್ಳಿಗಳ ಜನಜೀವನ ಇವತ್ತಿಗೂ ಕೂಡ ಅಸ್ತವ್ಯಸ್ತವಾಗಿದೆ. ಒಂದು ನಲ್ಲುಳ್ಳಿ ಎನ್ನುವಂಥ ಗ್ರಾಮದಲ್ಲಿ ಒಂದು ಮನೆಯೊಳಗಡೆ ಒಬ್ಬ ಮನುಷ್ಯ ಅರ್ಧ ಮನೆ ಬಿದ್ದು ಹೋಗಿದ್ದರೂ ಅವನು ಆ ಮನೆಯನ್ನು ಬಿಟ್ಟುಹೋಗಿರಲಿಲ್ಲ. ನನಗೆ ರಾತ್ರಿ ಟೈಮ್‌ನಲ್ಲಿ ಗೊತ್ತಾಗಿ ಹೋಗಿ ಅವನನ್ನು ಅಲ್ಲಿಂದ ಹೊರಗಡೆಗೆ ಕರೆದುಕೊಂಡು ಬಂದೆ. ಅವನು ಅಲ್ಲಿಯೇ ಇರಲು ಕಾರಣವೇನೆಂದರೆ, ಮನೆಯಿಂದ ಆಚೆ ಹೋದಾಗ ಮನೆ ಬಿದ್ದುಹೋದರೆ ತನಗೆ ಪರಿಹಾರ ಸಿಗುವುದಿಲ್ಲವೆಂದು. ಆತ ಮನೆಯೊಳಗಡೆ ಕುಳಿತುಕೊಂಡಿದ್ದ. ಆದರೆ ಅವನನ್ನು ಹೊರಗಡೆಗೆ ಕರೆದುಕೊಂಡು ಬಂದ ಒಂದು ಗಂಟೆಯೊಳಗಡೆ ಮಧ್ಯ ರಾತ್ರಿಯಲ್ಲಿ ಮನೆ ಬಿದ್ದು ಹೋಯಿತು. ಅಂದರೆ ಮನೆಗಳನ್ನು ರಿಪೇರಿ ಮಾಡಲಿಕ್ಕೆ ಹೋಗಲಿಲ್ಲ. ಹೆಣ್ಣು ಮಕ್ಕಳನ್ನು ಮದುವೆ ಮಾಡಬೇಕೆನ್ನುವಂಥ ಸ್ಥಿತಿಯಲ್ಲಿ ಮನೆ

ರಿಪೇರಿ ಮಾಡೋಣವೆಂದರೆ, ಬಿಟ್ಟು ಹೋದರೆ ಮನೆಗೆ ಪರಿಹಾರ ಕೊಡುತ್ತಾರೆ, ಇಲ್ಲದಿದ್ದರೆ ಕೊಡುವುದಿಲ್ಲ, ಪರಿಹಾರ ಸಿಗಬಹುದು ಇವತ್ತು ಹೊರಗಡೆ ಹೋಗಿ ಮನೆ ಕಟ್ಟಬಹುದೆಂದು ಆ ಭಾಗದಲ್ಲಿ ಮನೆ ಕಟ್ಟಿಲ್ಲ. ರಸ್ತೆಗಳ ಅಭಿವೃದ್ಧಿಯಾಗಿಲ್ಲ. ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಟ್ಟಿಲ್ಲ. ಯಾವುದೇ ಮೂಲಭೂತ ಸೌಕರ್ಯಗಳನ್ನು ಆ 17 ಹಳ್ಳಿಗಳು ಮತ್ತು ಅದರ ಅಂಚಿನಲ್ಲಿರತಕ್ಕಂಥ ಇನ್ನು 10 ಹಳ್ಳಿಗಳಿಗೆ ಸರ್ಕಾರದ ಕಡೆಯಿಂದ ಮಾಡಿಲ್ಲ. ಆದಕಾರಣ, ಕಾವೇರಿ ನಿಗಮ ಇರಬಹುದು, ಸರ್ಕಾರ ಖಂಡಿತ ಇವತ್ತು ಪರಿಹಾರ ನೀಡುತ್ತದೆ, ಅವರಿಗೆ ಪುನರ್‌ವಸತಿ ಕಲ್ಪಿಸುತ್ತದೆ ಎನ್ನುವ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ನಾನು ಈ ಸಂದರ್ಭದಲ್ಲಿ ಕೇಳುವುದಿಷ್ಟೆ. ನಮಗೆ ಆ 17 ಹಳ್ಳಿಗಳು ಮತ್ತು ಅದಕ್ಕೆ ಸೇರಿಕೊಂಡು ಅಂಚಿನಲ್ಲಿರತಕ್ಕಂಥ ಇನ್ನೂ 15 ಹಳ್ಳಿಗಳನ್ನು ನೀವು ಪುನರ್‌ವಸತಿ ಕಲ್ಪಿಸುವುದಕ್ಕೆ ಅಲ್ಲಿಯ ನೀರಿನಿಂದ ಶೀತಪೀಡಿತ ಮನೆಗಳವರಿಗೆ ಪರಿಹಾರ ಕೊಟ್ಟು ಅವರಿಗೆ ಕಾಲೋನಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆನ್ನುವ ಒತ್ತಾಯವನ್ನು ಮಾಡುತ್ತೇನೆ. ಆದರೆ ನನಗೆ ತುಂಬಾ ಬೇಸರದ ಕಾರಣವೇನೆಂದರೆ, ಒಟ್ಟಾರೆ ಈ ಸಮಸ್ಯೆಯನ್ನು ಸರ್ಕಾರ ಇಲ್ಲಿಯವರೆಗೆ ಗಂಭೀರವಾಗಿ ಪರಿಗಣಿಸಲಿಲ್ಲ. ನೀನು ಹೋಗಿ ಕೆಲಸ ಮಾಡು ಎಂದು ನನಗೆ ನನ್ನ ಕ್ಷೇತ್ರದ ಮತದಾರರು ಓಟು ಕೊಟ್ಟು ಕಳುಹಿಸಿದ್ದಾರೆ. ಆದರೆ ಈ ಸದನದೊಳಗಡೆ ಇದೇ ವಿಷಯವಾಗಿ ನಾನು ಇದು ಎರಡನೇ ಸಲ ಪ್ರಸ್ತಾಪ ಮಾಡುತ್ತಿರುವುದು. ಈ ಭಾಗದಲ್ಲಿ 9 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಈ ಸದನದಲ್ಲಿ ನಾನು ಪ್ರಸ್ತಾಪ ಮಾಡಿದ್ದೆ. ಅದರೆ ಇದುವರೆವಿಗೂ ಕೂಡ ಇದಕ್ಕೆ ಪರಿಹಾರ ಸಿಕ್ಕಿಲ್ಲ. ಈ ಸದನದಲ್ಲಿ ಸರ್ಕಾರದಿಂದ ಭರವಸೆ ಕೊಟ್ಟಿದ್ದರೂ ಸಹ ಅದು ಭರವಸೆ ಸಮಿತಿಗೆ ಹೋಗಿದೆಯೇ ವಿನಃ ಈ ಸದನದೊಳಗಿನಿಂದ ಅದಕ್ಕೆ ಪರಿಹಾರ ಸಿಕ್ಕಿಲ್ಲ. ನಾನು ಸದಸದ ಸಮಯವನ್ನು ಹೆಚ್ಚಿಗೆ ಹರಣ ಮಾಡುವುದಿಲ್ಲ. ನನಗೆ ಪರಿಹಾರ ಸಿಕ್ಕುವವರೆಗೂ, ನನಗೆ ನ್ಯಾಯ ಸಿಕ್ಕುವವರೆಗೂ ನಾನು ಇಲ್ಲಿಂದ ಎದ್ದು ಹೋಗುವ ಹಾಗಿಲ್ಲ. ಕಾರಣ ನಾನು ನನ್ನ ಕ್ಷೇತ್ರಕ್ಕೆ ಹೋದರೆ ಜನ ನನ್ನನ್ನು ಸುಮ್ಮನೆ ಬಿಡುವುದಿಲ್ಲ. ಆ ಕಾರಣಕ್ಕೆ ನಾನು ಈ ದಿನ ಸರ್ಕಾರಕ್ಕೆ ಒತ್ತಾಯ ಮಾಡಿ ಧರಣಿ ಮಾಡಬೇಕೆಂದಿದ್ದೇನೆ. ಏಕೆಂದರೆ, ನನ್ನ ಕ್ಷೇತ್ರದ ಜನರ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸರ್ಕಾರ ಮುಂದೆ ಬರುತ್ತಿಲ್ಲ ಎನ್ನುವುದಕ್ಕೆ ಸರ್ಕಾರದ ಕಡೆಯಿಂದ ಉತ್ತರ ಕೊಟ್ಟಿರುವುದೇ ಸಾಕ್ಷಿಯಾಗಿದೆ. ನಾನು ಮನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ. ಈ ಕೂಡಲೇ ವರದಿ ತರಿಸಿಕೊಂಡು ಏನಾಗಿದೆ ಎನ್ನುವುದರ ಬಗ್ಗೆ ನನಗೆ ಈ ಸದನದಲ್ಲಿ ವರದಿ ಕೊಡಬೇಕು ಮತ್ತು ಇದರ ಪರಿಹಾರಕ್ಕೆ ಒಂದು ಮಾರ್ಗವನ್ನು ಸೂಚಿಸಬೇಕೆಂದು ಹೇಳಿ ನಾನು ಧರಣಿ ಕುಳಿತುಕೊಳ್ಳುತ್ತೇನೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

(ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಂ.ವಿಶ್ವನಾಥ್ ಅವರು ಧರಣಿ ನಡೆಸಲು ಸದನದ ಬಾವಿಗೆ ಆಗಮಿಸಿದರು)

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಾನು ಈ ರಾಜ್ಯಪಾಲರ ಭಾಷಣದಲ್ಲಿ ರಾಜ್ಯದ ವಿಚಾರಗಳನ್ನೇ ಹೇಳುವುದಾದರೆ, ನನ್ನ ಕ್ಷೇತ್ರದೊಳಗಡೆ ನಡೆದಿರುವಂಥ ವಿಚಾರಗಳನ್ನು ಆಧಾರವಾಗಿ ತೆಗೆದುಕೊಂಡರೆ, ನನ್ನ ಕ್ಷೇತ್ರ ಮೂರು ತಾಲ್ಲೂಕುಗಳನ್ನು ಒಳಗೊಂಡಿರುತ್ತದೆ. ಈ ರೀತಿ ರಾಜ್ಯದಲ್ಲಿ ಬೇರೆ ಯಾವುದೂ

ಇಲ್ಲ. ಮೂರು ಪೂರ್ಣ ತಾಲ್ಲೂಕುಗಳನ್ನು ಒಳಗೊಂಡಿರುವಂಥ ಕ್ಷೇತ್ರ ಶೃಂಗೇರಿ ಕ್ಷೇತ್ರ ಮಾತ್ರವಾಗಿರುತ್ತದೆ. ಇದರಲ್ಲಿ ನರಸಿಂಹರಾಜಪುರ, ಕೊಪ್ಪ ಮತ್ತು ಶೃಂಗೇರಿ ಹೀಗೆ ಮೂರು ತಾಲ್ಲೂಕುಗಳನ್ನು ಒಳಗೊಂಡಿದೆ. ಆದರೆ ಈ ಕ್ಷೇತ್ರದಲ್ಲಿ ಯಾವ ತರಹದ ಸಮಸ್ಯೆಗಳು ಈಗ ನಮ್ಮ ಕಣ್ಣೆದುರಿಗೆ ಇದೆಯೆಂದರೆ ಒಂದು ದಿಕ್ಕಿನಲ್ಲಿ 'ಕುವೆಂಪು ಜೈವಿಕ ಅರಣ್ಯ' ಎನ್ನುವಂಥ ಬಯೋಟೆಕ್ನಾಲಜಿ ಪಾರ್ಕ್ ಮಾಡುತ್ತೇವೆನ್ನುವಂಥದ್ದು ಒಂದು ಕಡೆಯಾದರೆ . . .

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಶ್ರೀ ವಿಶ್ವನಾಥ್‌ರವರನ್ನು ವಾಪಸ್ಸು ಸೀಟಿಗೆ ಹೋಗುವುದಕ್ಕೆ ಹೇಳಿ. ಇವರು ರೂಲಿಂಗ್ ಪಾರ್ಟಿ ಮೆಂಬರ್ ಆಗಿದ್ದು ಭಾಷಣ ಮುಗಿಸಿ ಆದಮೇಲೆ ಇಲ್ಲಿಗೆ ಬಂದು ಧರಣಿ ಮಾಡುವುದರಲ್ಲಿ ಅರ್ಥವಿಲ್ಲ. ದಯಮಾಡಿ ಇವರು ತಮ್ಮ ಆಸನಕ್ಕೆ ಹೋಗಲಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ಆಡಳಿತ ಪಕ್ಷದವರೇ ಅದಕ್ಕೆ ಪರಿಹಾರ ಕೊಡಿ ಎಂದು ಕೇಳುವಂತಾಗಿದೆ.

ಅಧ್ಯಕ್ಷರು: ಈಗ ಆಡಳಿತ ಪಕ್ಷ ವಿರೋಧ ಪಕ್ಷ ಎನ್ನುವುದು ಅಲ್ಲ.

(ಗೊಂದಲ)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು): ಮಾನ್ಯ ವಿಶ್ವನಾಥ್‌ವರೆ, ಈಗ ಅಲ್ಲಿ ಏನು ಸಮಸ್ಯೆ ಇದೆ ಎನ್ನುವ ಬಗ್ಗೆ ನನ್ನಲ್ಲಿಗೆ ಬನ್ನಿ, ಸಮಕ್ಷಮ ಭೇಟಿ ಆಗಿ, ಬಗೆಹರಿಸೋಣ. ಸಮಕ್ಷಮ ಭೇಟಿಯಾಗಿ ಮಾತನಾಡೋಣ ಬನ್ನಿ.

(ಶ್ರೀ ಹೆಚ್.ಎಂ. ವಿಶ್ವನಾಥ್‌ರವರು ತಮ್ಮ ಆಸನಕ್ಕೆ ಬಂದರು)

ಶ್ರೀ ಡಿ.ಎನ್.ಜೀವರಾಜ್: ಮಾನ್ಯ ಸಭಾಧ್ಯಕ್ಷರೆ, ನಾನು ನನ್ನ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಹೇಳುತ್ತಿದ್ದೆ. ಎಲ್ಲಾ ಕ್ಷೇತ್ರಗಳಿಗೆ 4 ದಿಕ್ಕಾದರೆ ನಮಗೆ 5 ದಿಕ್ಕುಗಳಿಂದ ಸಮಸ್ಯೆಗಳಿವೆ. ಒಂದು ದಿಕ್ಕಿನಲ್ಲಿ ಕುವೆಂಪು ಬಯೋಟೆಕ್ನಾಲಜಿ ಪಾರ್ಕ್ ಎನ್ನುವಂಥ ಹೆಸರಿನಲ್ಲಿ ರೈತರನ್ನು ಎತ್ತಂಗಡಿ ಮಾಡಿಸುವಂಥ ಕಾರ್ಯಕ್ರಮ ನಡೆಯುತ್ತಿದ್ದರೆ, ಇನ್ನೊಂದು ಕಡೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಹೆಸರಿನಲ್ಲಿ ರೈತರನ್ನು, ಅಲ್ಲಿರುವಂಥ ಗಿರಿಜನರನ್ನು ಒಕ್ಕಲೆಬ್ಬಿಸುವ ಕಾರ್ಯಕ್ರಮ ನಡೆಯುತ್ತಿದೆ. ಇನ್ನೊಂದು ಕಡೆ ಭದ್ರಾ ಅಭಯಾರಣ್ಯದ ಹೆಸರಿನಲ್ಲಿ ಒಕ್ಕಲೆಬ್ಬಿಸುವ ಕಾರ್ಯ ನಡೆಯುತ್ತಿದೆ. ನಾನು ಸ್ವತಃ ಭದ್ರಾ ಡ್ಯಾಂನಲ್ಲಿ ಮುಳುಗಡೆಯಾಗಿ ನಾವೀಗೊಂದು ಊರಿಗೆ ಬಂದಿದ್ದೇವೆ. ಒಂದು ಕಡೆ ಭದ್ರಾ ಡ್ಯಾಂ, ಇನ್ನೊಂದು ಕಡೆ ಗಾಜನೂರು ಡ್ಯಾಂ ಕಟ್ಟಿಬಿಟ್ಟು, ಆ ಗಾಜನೂರು ಡ್ಯಾಂನ ಗೇಟ್ ಹಾಕಿದರೆ ಮುತ್ತಿನಕೊಪ್ಪ ಆ ಭಾಗದಲ್ಲಿರುವಂಥ ರೈತರು ಎತ್ತಂಗಡಿಯಾಗುತ್ತಾರೆ. ಅವರಿಗೆ ಈವರೆಗೆ ಯಾವುದೇ ಪರಿಹಾರ ಕೊಡುವ ಯೋಜನೆಯನ್ನು ಸರ್ಕಾರ ಮಾಡಿಲ್ಲ. ಈ ಕುವೆಂಪು ಜೈವಿಕ ಅರಣ್ಯದಂಥ ಸಮಸ್ಯೆಗಳು, ಬಯೋಟೆಕ್ನಾಲಜಿ ಪಾರ್ಕ್‌ನಂಥ ಸಮಸ್ಯೆಗಳನ್ನು ಇಟ್ಟುಕೊಂಡು ನಾವು ಹೋರಾಟ ಮಾಡುತ್ತಿರುವಂಥ ಸಂದರ್ಭದಲ್ಲಿ ಅಡಿಕೆಗೆ ಇರುವಂಥ ಹಳದಿ ರೋಗ, ಬೇರು ಹುಳಕ್ಕೆ ಸಂಬಂಧಪಟ್ಟಂಥ ಸಂಶೋಧನಾ ಕೇಂದ್ರವೊಂದು ಶೃಂಗೇರಿಗೆ ಸ್ಯಾಂಕ್ಷನ್ ಆಗಿತ್ತು. ಅದು ದುರಾದೃಷ್ಟವಶಾತ್ ಯಾವ ಕಾರಣದಿಂದ ಗೊತ್ತಿಲ್ಲ. ಕಾಯಿಲೆ ಇರುವಂಥದ್ದು ಶೃಂಗೇರಿಯಲ್ಲಾದರೆ, ಸಂಶೋಧನಾ ಕೇಂದ್ರವನ್ನು ಶಿವಮೊಗ್ಗದಲ್ಲಿ ಮಾಡಿದರು. ಮನುಷ್ಯ patient ಆದರೆ ಅವನನ್ನು ತುಂಬಿಕೊಂಡು ಹೋಗುವುದಕ್ಕೆ Ambulance ಆದರೂ ಇದೆ. ಆದರೆ ಈ ಅಡಿಕೆ ತೋಟವನ್ನು ಯಾವ Ambulanc ನಲ್ಲಿ ತೆಗೆದುಕೊಂಡು ಹೋಗಿ ಶಿವಮೊಗ್ಗದಲ್ಲಿ ಟ್ರೀಟ್‌ಮೆಂಟ್

ಕೊಡುತ್ತಾರೆನ್ನುವುದು ನಮಗೆ ಗೊತ್ತಾಗಲಿಲ್ಲ. ಶಿವಮೊಗ್ಗದಲ್ಲಿ ಅಡಿಕೆ ಸಂಶೋಧನಾ ಕೇಂದ್ರವನ್ನು ಮಾಡಿರುವಂಥದ್ದು ಇದು ದುರಾದೃಷ್ಟಕರ. ಹಳದಿ ಎಲೆ ರೋಗದಲ್ಲಿ 10 ಎಕರೆ ಅಡಿಕೆ ತೋಟ ಇಟ್ಟವನು 10 ಕೆ.ಜಿ. ಅಡಿಕೆ ಬೆಳೆಯದಿರುವಂಥ ದುಸ್ಥಿತಿಗೆ ರೈತ ತಲುಪಿಬಿಟ್ಟಿದ್ದಾನೆ. ಮೊನ್ನೆ ಗುಟ್ಕಾವನ್ನು ನಿಷೇಧ ಮಾಡುತ್ತೇವೆನ್ನುವಂಥ ಕೇಂದ್ರ ಸರ್ಕಾರದ ಹೇಳಿಕೆ ಪತ್ರಿಕೆಯಲ್ಲಿ ಬಂತು. ಈ ಸದನಕ್ಕೆ ಅದು ಸಂಬಂಧಪಡದೇ ಇದ್ದರೂ ಸುಮ್ಮನೆ ಪ್ರಸ್ತಾಪ ಮಾಡಿದೆ. ರೈತರ ಪರಿಸ್ಥಿತಿ ಬಹಳ ಕೆಟ್ಟದಾಗಿರುವ ಈ ಸಂದರ್ಭದಲ್ಲಿ PLD ಬ್ಯಾಂಕಿನಿಂದ ವಸೂಲಿ ಕಾರ್ಯಕ್ರಮಗಳ ಜೊತೆಗೆ ನಮ್ಮ ಸ್ನೇಹಿತರಾದ ಶ್ರೀ ಧರ್ಮೇಗೌಡರು Dcc ಬ್ಯಾಂಕಿನ ಅಧ್ಯಕ್ಷರಾಗಿದ್ದಾರೆ. ಅವರು ಜಿಲ್ಲೆಯೊಳಗಡೆ ರೈತರ ಕಾಫಿ ಬೀಜಗಳನ್ನು ಜಪ್ತಿ ಮಾಡಿ ತೆಗೆದುಕೊಂಡು ಹೋಗುವಂಥ ಪರಿಸ್ಥಿತಿಗೆ ರೈತರನ್ನು ತಂದುಬಿಟ್ಟರು. ಶ್ರೀ ಧರ್ಮೇಗೌಡರು ಸದನದಲ್ಲಿದ್ದಾರೆ ಅವರು Dcc ಬ್ಯಾಂಕಿನ ಅಧ್ಯಕ್ಷರಾಗಿದ್ದಾರೆ. ಆದರೆ ಈ ತರಹದ ಸ್ಥಿತಿಯಲ್ಲಿ ರೈತರನ್ನು ತಂದುಬಿಟ್ಟಿದ್ದಾರೆ. ಸರ್ಕಾರ ರೈತರ ಬಗ್ಗೆ ಏನನ್ನೂ ಯೋಚನೆ ಮಾಡದೆ ಹೋಗಿಬಿಟ್ಟರೆ ಬಹಳ ಕಷ್ಟವಾಗುತ್ತದೆ. ದಯಮಾಡಿ ಸರ್ಕಾರ ಈ ಕಡೆಗೆ ಗಮನಹರಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ರೈತರಿಗೆ 6 ಪರ್ಸೆಂಟ್ ಬಡ್ಡಿ ಕೊಡುತ್ತೇವೆಂದು ಸರ್ಕಾರದಿಂದ ಹೇಳಿದರು. ಆದರೆ 6 ಪರ್ಸೆಂಟ್‌ಗೆ ಯಾವ ರೈತರಿಗೂ ಬಡ್ಡಿ ತಲುಪಲಿಲ್ಲ. 30 ಪರ್ಸೆಂಟ್ ಕಟ್ಟಿದ್ದರೆ PLD ಬ್ಯಾಂಕ್‌ನಲ್ಲಿ ಲೋನನ್ನು renewal ಮಾಡಿಕೊಡುತ್ತೇವೆ, ರೈತರಿಗೆ ಅನುಕೂಲವಾಗುತ್ತದೆಂದು ಹೇಳಿದರು. ಉಳಿದ 70 ಪರ್ಸೆಂಟ್‌ಗೆ ಪುನಃ 11 ಪರ್ಸೆಂಟ್, 14 ಪರ್ಸೆಂಟ್ ಬಡ್ಡಿ ಬೀಳುತ್ತದೆ. ಉಳಿದದಕ್ಕಾದರೂ 6 ಪರ್ಸೆಂಟ್ ಹಣವನ್ನು ಕೊಡುವಂಥ ಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಸಮಯಾವಕಾಶ ಹೆಚ್ಚು ಇಲ್ಲದಿರುವುದರಿಂದ ವಿಷಯಗಳನ್ನು ಆದಷ್ಟು ಬೇಗನೆ ಮಾತನಾಡಿ ಮುಗಿಸುವಂಥ ಪ್ರಯತ್ನವನ್ನು ಮಾಡುತ್ತಿದ್ದೇನೆ. BPL ಕಾರ್ಡ್ ಕೊಡುತ್ತೇವೆಂದು ಹೇಳಿದಿರಿ. BPL ಕಾರ್ಡ್ ಅನ್ನು ಯಾರಿಗೆ ಕೊಟ್ಟಿದ್ದೀರಿ? ಈ ಕಾರ್ಡುಗಳನ್ನು ಯಾರಿಗೆ ಕೊಟ್ಟಿದ್ದೀರೆಂದರೆ, 4 ಎಕರೆ ಅಡಿಕೆ ತೋಟ ಇರುವವರಿಗೆ, ಕಂಟ್ರಾಕ್ಟ್ ಮಾಡುವಂಥ ಸಾಹುಕಾರನಿಗೆ BPL ಕಾರ್ಡ್ ತಲುಪಿದೆ. ಯಾರು ಕೂಲಿ ಮಾಡುತ್ತಿದ್ದಾರೆ, ಒಂದು ಹೊತ್ತಿನ ಅನ್ನಕ್ಕೆ ಕೊರತೆ ಇರುವವನಿಗೆ ಬಿಪಿಎಲ್ ಕಾರ್ಡ್ ತಲುಪಲಿಲ್ಲ. ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ, ಬಿಪಿಎಲ್ ಕಾರ್ಡ್ ಅನ್ನು ಮರು ವಿಮರ್ಶೆ ಮಾಡಲಿ. ಬಿಪಿಎಲ್ ಕಾರ್ಡ್ ಮರು ವಿಮರ್ಶೆ ಮಾಡದ ಹೊರತು ಅಲ್ಲಿರುವ ಸಾಧಾರಣ ಕಡು ಬಡವರಿಗೆ ನ್ಯಾಯ ಕೊಡಿಸಲು ನಮ್ಮ ಹತ್ತಿರ ಸಾಧ್ಯವಿಲ್ಲ. ಆಶ್ರಯ ಮನೆಗಳು ಯಾರಿಗೆ ತಲುಪುತ್ತಿವೆ ಎಂದರೆ, 4 ಎಕರೆ ತೋಟವಿರುವವರಿಗೂ ಅಲ್ಲ, ಅದಕ್ಕಿಂತ ಜಾಸ್ತಿ ಮನೆ ಇರುವವರಿಗೆ, 5–5 ಮನೆ ಇರುವವರಿಗೆ ಅಶ್ರಯ ಮನೆ ಕೊಟ್ಟರು. ಅಶ್ರಯ ಮನೆಯ ಪರಿಸ್ಥಿತಿ ಯಾವ ರೀತಿ ಇದೆ ಎನ್ನುವುದನ್ನು ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು. ನಾನು ಉದಾಹರಣೆ ಕೊಡಲು ಇಚ್ಛೆಪಡುತ್ತೇನೆ. ಎನ್.ಆರ್. ಪುರ ಟೌನ್‌ನಲ್ಲಿ 4 ಕಡೆ ಸೈಟ್ ಇರುವವರು, ಒಂದು ಕಡೆ 220 ಅಡಿ ಉದ್ದ, 22 ಅಡಿ ಅಗಲ ಮನೆ ಇರುವವರಿಗೆ ಗುಪ್ಪ ಗ್ರಾಮ ಪಂಚಾಯತ್‌ನಲ್ಲಿ ಆಶ್ರಯ ಲೇಔಟ್‌ನಲ್ಲಿ ಸೈಟ್ ಕೊಡುತ್ತಾರೆ. ನಾನು ಕೆಡಿಪಿ ಸಭೆಯಲ್ಲಿ, ಅಲ್ಲಿ 84 ಸೈಟ್ ಖಾಲಿ ಇವೆ, ಪೂರಾ ಸಾಹುಕಾರರ ಹತ್ತಿರ ಇವೆ, ಇದು ತಪ್ಪು, ಇದನ್ನು ಮರು ವಿಮರ್ಶೆ ಮಾಡಬೇಕೆಂದು ಹೇಳಿ, ಇಒಗೆ ಆರ್ಡರ್ ಮಾಡಿದರೆ, ಅವತ್ತು ಗ್ರಾಮ ಪಂಚಾಯತ್ ಕಾರ್ಯದರ್ಶಿಗೆ, ಆ ಮನೆಗಳನ್ನು

ಮುಂದುವರಿಸಲು ಲೈಸೆನ್ಸ್ ಕೊಡಬೇಡಿ ಎಂದು ಹೇಳಿ ಬರೆಯುತ್ತಾರೆ. ಗ್ರಾಮ ಪಂಚಾಯತ್ ಕಾರ್ಯದರ್ಶಿ, ನಾನು ಯಾರಿಗೂ ಲೈಸೆನ್ಸ್ ಕೊಡುವುದಿಲ್ಲ, ಕೆಡಿಪಿ ಸಭೆಯಲ್ಲಿ ನಿರ್ಣಯವಾಗಿದೆ ಎಂದು ಬರೆಯುತ್ತಾರೆ. 4 ದಿನಗಳಾದ ನಂತರ ಇಒ ನನ್ನ ಜ್ಞಾಪನಾ ಪತ್ರವನ್ನು ವಾಪಸ್ಸು ತೆಗೆದುಕೊಂಡಿದ್ದೇನೆ, ಹಾಗಾಗಿ, ಅವರು ಕೆಡಿಪಿಯಲ್ಲಿದ್ದರೂ ಪರವಾಗಿಲ್ಲ, ಅವರಿಗೆ ಲೈಸೆನ್ಸ್ ಕೊಡು ಎಂದು ಹೇಳುತ್ತಾರೆ. ಇದು ಯಾವ ರೀತಿ ಅನ್ಯಾಯ ನಡೆದಿದೆ ಎಂದರೆ ನಾನು ಇಒ ಕರೆದು ಕೇಳಿದರೆ, ಮನೆ ಕಟ್ಟುವುದಕ್ಕೆ ಲೈಸೆನ್ಸ್ ಕೊಡುವುದು ತಪ್ಪು ಎಂದು ಹೇಳಿ, ಲೈಸೆನ್ಸ್ ವಿಥ್‌ಡ್ರಾ ಮಾಡಿಕೊಂಡಿದ್ದೇನೆ, ಕಟ್ಟಿದ ಮನೆಯನ್ನು ಕೆಡವಿ, ಪೊಲೀಸರು ಅವನನ್ನು ಮನೆಯಿಂದ ಹೊರಗೆ ಹಾಕು ಎನ್ನುವ ಆದೇಶವನ್ನು ಒಬ್ಬ ಇಒ ಕೊಡುತ್ತಾರೆ. ಅಂದರೆ, ಈ ತರಹದ ಅಧಿಕಾರಿಗಳು ಒಬ್ಬನೇ ಅಧಿಕಾರಿ 4 ಸಾರಿ, 4 ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆಂದರೆ ಅಲ್ಲೇನು ನಡೆಯುತ್ತಿದೆ ಎಂದು ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ಶಾಸಕರ ಕೆಡಿಪಿ ಸಭೆಯಲಿ ಸರ್ವಾನುಮತದ ನಿರ್ಣಯ ತೆಗೆದುಕೊಂಡಿದ್ದನ್ನೇ ಕೇಳುವಂಥ ಸ್ಥಿತಿಯಲ್ಲಿ ಇಒ ಇಲ್ಲ. ಅಂದರೆ, ಇಒ ಅವನು ಒಳ್ಳೆಯವನೋ, ಕೆಟ್ಟವನೋ ಎಂದು ಹೇಳಲು ನಾನು ಹೋಗುತ್ತಿಲ್ಲ. ಅವನಿಗೆ ಶಕ್ತಿ ಇಲ್ಲವೇ? ಹಾಗಾದರೆ, ಹಿಂದುಗಡೆ ಏನು ನಡೆಯುತ್ತಿದೆ? ಕಾನೂನನ್ನು ಮೀರಿ ಕ್ರಮ ತೆಗೆದುಕೊಳ್ಳುತ್ತಾರೆನ್ನುವುದನ್ನು ನಾನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಜೊತೆಗೆ, ಇದೆಲ್ಲ ಕ್ಷೇತ್ರದ ಸಮಸ್ಯೆಯಾಯಿತು. ಬೆಂಗಳೂರಿನಲ್ಲಿ ಬಂದು ಆಟೋದಿಂದ ಇಳಿದು, ಫೋನ್ ಮಾಡಿದರೆ ನನಗೆ ತಮ್ಮ ಸರ್ಕಾರ ಕೊಟ್ಟಿರುವ ಕಾರ್ ಬರುತ್ತದೆ, ಇಲ್ಲಿ ನನ್ನ ಸಮಸ್ಯೆ ಅಲ್ಲ, ಆದರೆ, ಬಸ್‌ಸ್ಟಾಂಡ್‌ನಲ್ಲಿ ಇಳಿದು ನಿಂತರೆ ಆ ಆಟೋದವರ ಕೈಯಲ್ಲಿ ಎಲ್‌ಹೆಚ್ ಎಂದು ಹೇಳಿದರೆ, ಒಬ್ಬ ಆಟೋದವನು 100 ರೂಪಾಯಿ, ಮತ್ತೊಬ್ಬ 50 ರೂಪಾಯಿ ಕೇಳುತ್ತಾನೆ. ಎಲ್ಲಾ ಕಡೆ ಒನ್–ವೇ ಆಗಿದೆ ಎಂದು ನಮಗೇ ಹೇಳುತ್ತಾನೆ. ಜೊತೆಗೆ, ಇನ್ನೇನಾದರೂ ಒಬ್ಬ ಆಟೋದವನು ಬಂದರೆ ಒಬ್ಬೊಬ್ಬ ಆಟೋದವರಿಗೂ ಒಂದೊಂದು ಮೀಟರ್ ಇದೆ. ಒಬ್ಬನ ಆಟೋ 15 ರೂಪಾಯಿ, ಇನ್ನೊಬ್ಬ ಆಟೋ 30 ರೂಪಾಯಿ, ಮತ್ತೊಬ್ಬನ ಆಟೋ 40 ರೂಪಾಯಿ ಓಡುತ್ತದೆ. ಕರೆದುಕೊಂಡು ಹೋಗಿ ಪೊಲೀಸ್ ಸ್ಟೇಷನ್‌ಗೆ ಬಿಡಬೇಕೆಂದು ಹೇಳಿದ ಕೂಡಲೇ, ನೀವು ಎಂಎಲ್‌ಎ ಆಗಿ ನೀವೇ ಹೀಗೆ ಹೇಳಿದರೆ ಹೇಗೆ ಸಾರ್ ಎನ್ನುತ್ತಾರೆ. ನೀವೇ ಹಣ ಕೊಡಬೇಕೆಂದು ಹೇಳುತ್ತಾರೆ. ಇದನ್ನು ನನ್ನಗಾಗಿ ನಾನು ಏನೂ ಹೇಳುತ್ತಿಲ್ಲ. ಆದರೆ, ಬೆಳಿಗ್ಗೆ ಮುಂಚೆ ಓಡುವ, ಮಧ್ಯ ರಾತ್ರಿ ಆಟೋಗಳೇನಿವೆ, ಅವು ಒಂದಕ್ಕೂ ಮೀಟರ್ ಸರಿಯಿಲ್ಲ. ಅಲ್ಲಿರುವ ಪೊಲೀಸರು ಅವರ ಜೊತೆಯಲ್ಲಿ ಕೈಜೋಡಿಸಿದ್ದಾರೆ. ಆದುದರಿಂದ, ಹಳ್ಳಿಗಳಿಂದ ಬರುವ ಜನರಿಗೆ ಬಹಳ ಸಮಸ್ಯೆ ಇದೆ. ಪ್ರೀಪೇಯ್ಡ್ ಕೌಂಟರ್‌ನಲ್ಲಿ ಮುಂಚೆ ನಾನು ಎಂಎಲ್‌ಎ ಆಗಿ ಫರ್ಸ್ಟ್ ಬಂದಾಗ ನೋಡುತ್ತಿದ್ದೆ, ಒಂದು ರೂಪಾಯಿ ಕಟ್ಟಿದರೆ ಸಾಕು, ಬಸ್‌ಸ್ಟಾಂಡ್‌ನಲ್ಲಿ ಕಂಪ್ಯೂಟರ್‌ನಲ್ಲಿ ಏನೋ ಹೊಡೆದುಕೊಡುತ್ತಿದ್ದ. ಈಗ ಆ ಕೌಂಟರ್ ಮುಚ್ಚಿಹೋಗಿದೆ. ಯಾವ ಕಾರಣದಿಂದ ಈ ರೀತಿಯಾಗಿದೆ? ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡದಿದ್ದರೆ, ಸಾಧಾರಣ ಬಡವ ಬದುಕಲು ಸಾಧ್ಯವಿಲ್ಲ. ಹಳ್ಳಿ ಪರಿಸ್ಥಿತಿ ಆ ರೀತಿಯಾಯಿತು. ಪೇಟೆ ಪರಿಸ್ಥಿತಿ ಈ ರೀತಿಯಾಯಿತು. ವಿದ್ಯುಚ್ಛಕ್ತಿ ಸಮಸ್ಯೆಯನ್ನು ಹೇಳಲಿಕ್ಕೆ ಆಗುವುದಿಲ್ಲ. 3 ತಾಲ್ಲೂಕುಗಳಲ್ಲಿ 496 ಕಿಲೋಮೀಟರ್ ಸ್ಟೇಟ್ ಹೈವೇ ಎಂಡಿಆರ್ ಕ್ಷೇತ್ರ ನನ್ನದು. ಆದರೆ, ನಮಗೆ ಗುಂಡಿ ಮುಚ್ಚಲು ಹಣ ಕೊಡದಿದ್ದರೆ, ಈ ಸ್ಥಿತಿಯಲ್ಲಿ ರಸ್ತೆ ಮೇಲೆ ಜನರು ಓಡಾಡಲು ಆಗದ

ಪರಿಸ್ಥಿತಿ ಇದೆ. ನಮ್ಮಲ್ಲಿ ರಸ್ತೆಗಳಲ್ಲಿ ಗುಂಡಿ ಇಲ್ಲ. ಗುಂಡಿಯೊಳಗೇ ರಸ್ತೆ ಇದೆ. ಈ ತರಹದ ಪರಿಸ್ಥಿತಿಯ ಮಧ್ಯದಲ್ಲಿ ತಾವು ಸರ್ಕಾರದವರು ನಮ್ಮ ರಕ್ಷಣೆಗೆ ಬರಬೇಕು. ರೈತರನ್ನು ಕಾಪಾಡಬೇಕು. ರೈತರ ಸಾಲ ಮನ್ನಾ ಮಾಡುವುದಾಗಿ ಪ್ರಣಾಳಿಕೆಯಲ್ಲಿ ಹೇಳಿದ ಸರ್ಕಾರಗಳೇ ಅಧಿಕಾರಕ್ಕೆ ಬಂದಿರುವುದು. ಆದರೆ, ಆ ಪ್ರಣಾಳಿಕೆಯಲ್ಲಿ ಹೇಳಿದವರು, ರೈತರ ಸಾಲ ಮನ್ನಾ ಮಾಡಲಿಲ್ಲ. ನಾವು ಭಾರತೀಯ ಜನತಾ ಪಾರ್ಟಿಯವರು ಎಲ್ಲಾ ವಿರೋಧ ಪಕ್ಷದವರೂ ಹೇಳುತ್ತಿದ್ದೇವೆ, ಅವರಿಗೆ ಪೂರ್ಣ ಬೆಂಬಲ ಕೊಡುತ್ತೇವೆ, ರೈತರ ಸಾಲ ಮನ್ನಾ ಮಾಡಿಬಿಡಿ ಎಂದು ಹೇಳಿ ಎನ್ನುವುದನ್ನು ನಮ್ಮ ನಾಯಕರು ಹೇಳಿದ್ದಾರೆ. ಅದನ್ನು ಮಾಡಿಬಿಡಬೇಕು ಎಂದು ಒತ್ತಾಯಿಸುತ್ತೇನೆ. ಕಟ್ಟಕಡೆಯದಾಗಿ, ಇದು ಯಾವುದನ್ನೂ ಮಾಡಲಿಲ್ಲ. ಆದರೆ, ನನ್ನ ಕ್ಷೇತ್ರದ ಮಹತ್ತರವಾದ ಸಾಧನೆ ಎಂದರೆ ನಾನು ಗೆದ್ದಮೇಲೆ ಕ್ಷೇತ್ರದಲ್ಲಿ 14 ಕ್ಲಬ್‌ಗಳಾಗಿವೆ. ಈ ಕ್ಲಬ್‌ಗಳಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ಇಸ್ಪೀಟ್ ನಡೆಯುತ್ತದೆ, ಅಂದರೆ –ಬಾಹರ್, 3 ಕಾರ್ಡ್ಸ್ , ಓ.ಸಿ., ಮಟ್ಕಾ ನಡೆಯುತ್ತದೆ, ಇದನ್ನು ಪೋಲೀಸರಿಗೆ ಕೇಳಲು ಹೋದರೆ, ಇದು ಲಾ ಅಂಡ್ ಆರ್ಡರ್ ಪ್ರಾಬ್ಲಂ ಆಗುತ್ತದೆ, ನಿಲ್ಲಿಸಲು ಬರುವುದಿಲ್ಲವೆನ್ನುತ್ತಾರೆ. ಇದನ್ನು ಯಾವ ರೀತಿ ನಿಲ್ಲಿಸಬೇಕೆನ್ನುವ ಬಗ್ಗೆ ಸರ್ಕಾರ ಹೇಳಬೇಕೆಂದು ನಾನು ಒತ್ತಾಯಿಸುತ್ತೇನೆ. ಈ ಕ್ಷಣದಿಂದ ನನ್ನ ಕ್ಷೇತ್ರದಲ್ಲಿರುವ ಎಲ್ಲಾ ಕ್ಲಬ್ಬುಗಳನ್ನು ಬಂದ್ ಮಾಡಿಸುವ ಕಡೆ ಸರ್ಕಾರ ಗಮನ ಹರಿಸಬೇಕೆಂದು ಒತ್ತಾಯಿಸುತ್ತೇನೆ. ನನ್ನ ವಿಚಾರಗಳನ್ನು ಹೇಳಲು ಅವಕಾಶ ಮಾಡಿ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ(ಪುತ್ತೂರು):– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ನನಗೆ ರಾಜ್ಯಪಾಲರ ಭಾಷಣವನ್ನು ನೋಡಿದಾಗ, ದಕ್ಷಿಣ ಕನ್ನಡ ಜಿಲ್ಲೆ ನಮ್ಮ ರಾಜ್ಯದೊಳಗೆ ಇದೆಯೋ, ಇಲ್ಲವೋ ಎಂಬುದು ಪ್ರಥಮವಾಗಿ ಡೌಟ್ ಇದೆ. ಏಕೆಂದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನು ಬುದ್ಧಿವಂತರ ಜಿಲ್ಲೆ ಎಂದು ಹೇಳುತ್ತಿದ್ದಾರೆ. ನಾವು ಅಡಿಕೆ ಬೆಳೆದು ಅದರಲ್ಲಿ ಸಾವಿರಾರು ಜನರಿಗೆ ಉದ್ಯೋಗ ಕೊಟ್ಟು, ಎಲ್ಲಿ ಬರಗಾಲ ಬಂದಿದೆ, ಆ ಜನರನ್ನೂ ನಮ್ಮ ಊರಿಗೆ ಕರೆಸಿಕೊಂಡು ಅವರಿಗೆ ಉದ್ಯೋಗ ಕೊಟ್ಟು, ಆ ಜನರನ್ನು ಪೋಷಿಸುವ ಅಡಿಕೆ ಬೆಳೆಗಾರರ ಬಗ್ಗೆ ನಮ್ಮ ಈ ರಾಜ್ಯಪಾಲರ ಭಾಷಣದಲ್ಲಿ ಒಂದು ವಿಚಾರವನ್ನೂ ನಮೂದಿಸಿಲ್ಲ. ನಾವು ಹಿಂದಿನ ಅಧಿವೇಶನದ ಸಮಯದಲ್ಲಿ, ಮಾನ್ಯ ಕೃಷಿ ಸಚಿವರಲ್ಲಿ, ರಾಜ್ಯದ ಎಲ್ಲಾ ಜಿಲ್ಲಾ ಅಡಿಕೆ ಬೆಳೆಗಾರರೆಲ್ಲಾ ಕುಳಿತು ಮಾತನಾಡಿದ್ದೆವು; ಬೆಂಬಲ ಬೆಲೆ ಕೇಳಿದ್ದೆವು. ಒಪ್ಪಿಕೊಂಡಿದ್ದರು. ಮೊನ್ನೆ ತಾನೆ ನಮ್ಮ ಮಾಜಿ ಪ್ರಧಾನಿಗಳು ನಮ್ಮ ಊರಿಗೆ ಬಂದಾಗಲೂ ಈ ವಿಚಾರದಲ್ಲಿ ಅತಿ ಅಗತ್ಯವಾಗಿ ಬೆಂಬಲ ಬೆಲೆ ಕೊಡಲೇ ಬೇಕೆಂದು ಅವರೂ ಒತ್ತಾಯ ಮಾಡಿದರು. ಸರ್ಕಾರ ಅವರದೇ ಆಗಿದ್ದರೂ ಕೂಡ ಇವತ್ತು ನಮ್ಮ ಬೆಂಬಲ ಬೆಲೆ ಬಗ್ಗೆ ಯಾವುದೇ ಮಾತನ್ನು ನಮ್ಮ ಸರ್ಕಾರ ಹೇಳಲಿಲ್ಲ. ನಮ್ಮ ಜನರು ಇವತ್ತು ಖಾಲಿ 40–45ರೂಪಾಯಿಗಳಿಗೆ ಅಡಿಕೆ ಮಾರಾಟ ಮಾಡುತ್ತಾರೆ. ಈಗ ಮಾರ್ಚ್ 31, ಮೇ 31ರೊಳಗೆ ಎಲ್ಲರೂ ಸಾಲ ಕಟ್ಟಬೇಕಾಗಿದೆ. ಸಾಮಾನ್ಯ ರೈತರಿಗೆ ಈ ರೇಟ್‌ಗೆ ಅಡಿಕೆ ಮಾರಾಟ ಮಾಡಿದರೆ, ಬಹುಶಃ ಅವನು ಆತ್ಮಹತ್ಯೆ ಮಾಡಿ ಕೊಳ್ಳಬೇಕು. ಅಡಿಕೆ ಕೃಷಿ ಮಾಡಬೇಕಾಗಿದ್ದರೆ, ಬಹಳಷ್ಟು ಖರ್ಚು ಬರುತ್ತದೆ. ಒಂದು ಕೆ.ಜಿ.ಗೆ 75 ರೂಪಾಯಿ ಬಂದರೆ ಸಾಕಾಗುವುದಿಲ್ಲ, ಅಂಥ ಸಂದರ್ಭದಲ್ಲಿ 40 ರೂಪಾಯಿಗಳಿಗೆ ಮಾರಾಟ ಮಾಡಿ, ಇವತ್ತು ಡಿಸಿಸಿ ಬ್ಯಾಂಕ್, ದಕ್ಷಿಣ ಕನ್ನಡದ್ದು ಬಹಳ ಲಾಭದಾಯಕವಾಗಿರಬೇಕಾಗಿದ್ದರೆ, ಸಾಮಾನ್ಯ ರೈತ ಆ

ಅಡಿಕೆಯನ್ನು ಮಾರಾಟ ಮಾಡಿ, ಪ್ರಾಮಾಣಿಕವಾಗಿ ಅಲ್ಲಿ ಸಾಲ ಪಾವತಿ ಮಾಡಿದ ಕಾರಣ ನಮ್ಮ ಡಿಸಿಸಿ ಬ್ಯಾಂಕು ಲಾಭಕ್ಕೆ ಬಂದಿದೆ. ಈ ಬಾರಿ ಕೇರಳ ಸರ್ಕಾರ 10 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿ, 2 ಕೋಟಿ ರೂಪಾಯಿಗಳನ್ನು ಇದೀಗ ಬೆಂಬಲ ಬೆಲೆಗಾಗಿ ಮೊನ್ನೆ ತಾನೆ ಬಿಡುಗಡೆ ಮಾಡಿದೆ. ನಮ್ಮ ಕರ್ನಾಟಕದಲ್ಲಿ ದಕ್ಷಿಣ ಕನ್ನಡ ಮಾತ್ರವಲ್ಲ, ಸಾಧಾರಣವಾಗಿ 5–6 ಜಿಲ್ಲೆಗಳಲ್ಲಿ ಅಡಿಕೆ ಬೆಳೆಯುತ್ತಿದ್ದರೂ ಯಾವುದೇ ಘೋಷಣೆಯಾಗಲಿಲ್ಲ. ಇದನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಹಿಂದಿನ ಸಲ ರಾಜ್ಯಪಾಲರ ಭಾಷಣದಲ್ಲಿ ಸ್ತ್ರೀಶಕ್ತಿ ಬ್ಯಾಂಕುಗಳನ್ನು ಮಾಡುವುದಾಗಿ ಹೇಳಿದ್ದರು. ಆದರೆ, ಅದನ್ನು ಈವರೆಗೆ ಮಾಡಿಲ್ಲ. ನಮ್ಮ ಮಹಿಳೆಯರ ವಿಚಾರ ಮಾತನಾಡುವುದು ಎಂದರೆ 10–20–30 ವರ್ಷಗಳ ಕಾಲ ಅಲ್ಲಿ ಅವರ ಮಧ್ಯದಲ್ಲಿ ಇದ್ದೂ ವಿಷಾದವಾಗುತ್ತಿದೆ. ಎಲ್ಲಿ ನೋಡಿದರೂ ಮಹಿಳೆಯರ ಮೇಲೆ ದೌರ್ಜನ್ಯ, ಶೋಷಣೆ, ಅತ್ಯಾಚಾರವಾಗುವುದನ್ನು ನೋಡುತ್ತಿದ್ದೇವೆ. ನನಗೆ ಮೊನ್ನೆ ಬಂದಂಥ ಉತ್ತರದಲ್ಲಿ, ವರ್ಷಕ್ಕೆ 560ಕ್ಕೂ ಹೆಚ್ಚು ಮಹಿಳೆಯರ ಹತ್ಯೆಗಳು, 360ಕ್ಕೂ ಹೆಚ್ಚು ಅತ್ಯಾಚಾರಗಳು ನಡೆಯುತ್ತಿದೆ ಎಂದು ಕೊಟ್ಟಿದ್ದಾರೆ. ಇದು ದಾಖಲಾಗಿರುವುದು. ದಾಖಲಾಗದೇ ಇರುವುದು ಬಹಳಷ್ಟು ಮಹಿಳೆಯರ ವಿಚಾರಗಳು ಇದು ದಾಖಲಾಗಿವುದು. ದಾಖಲಾಗದೇ ಇರುವುದು ಬಹಳಷ್ಟು ಮಹಿಳೆಯರ ವಿಚಾರಗಳು ಇವೆ. ಇವತ್ತು ಕಸದ ಬುಟ್ಟಿಯಲ್ಲಿ ಮಗು ಸಿಗುವಂಥ ಪರಿಸ್ಥಿತಿಗೆ ಬಂದಿದೆ ಎಂದರೆ ಬಹುಶಃ ಇದಕ್ಕೆ ಸರಿಯಾದ ವ್ಯವಸ್ಥೆ ಅಥವಾ ಶಿಕ್ಷೆ ಇಲ್ಲದೆ ಕಾರಣ ಹೀಗಾಗುತ್ತಿದೆ. ಮಹಿಳೆಯರನ್ನು ರಕ್ಷಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ನನ್ನ ಪುತ್ತೂರು ಕ್ಷೇತ್ರ ಒಂದು ಕಡೆ ಪೂರ್ತಿ ಅರಣ್ಯವಿದೆ. ದೇವರ ದಯೆಯಿಂದ ನಕ್ಸಲೀಯರು ನಮ್ಮ ಊರಿಗೆ ಈವರೆಗೆ ಬಂದಿಲ್ಲ. ಆದರೂ ಆಕಸ್ಮಾತ್ ಗಾಂಜಾ ಬೆಳೆಯುವುದಕ್ಕೆ ತೊಂದರೆ ಇಲ್ಲ, ನಮ್ಮ ಅರಣ್ಯದಲ್ಲಿ ಗುಂಡ್ಯ ಶಿರಾಡಿ ಕಾಡಿನಲ್ಲಿ ಬೇಕಾದಷ್ಟು ಗಾಂಜಾ ಬೆಳೆಯಲಾಗಿದೆ. ಪೊಲೀಸರು ಅರಣ್ಯ ಜಾಗಕ್ಕೆ ಹೋಗಿ ಗಾಂಜಾ ಹಿಡಿಯುತ್ತಾರೆ. ಜನರನ್ನು ಹಿಡಿಯಲಾಗಲಿಲ್ಲ. ನಮ್ಮ ಪೊಲೀಸರಲ್ಲಿರುವುದು ನಮ್ಮ ಮುತ್ತಾತನ ಕಾಲದ ಕೋವಿಗಳು. ಅವರಲ್ಲಿರುವುದು ಇತ್ತೀಚೆಗೆ ಬಂದಂಥ ಕೋವಿಗಳು. ಆದಕಾರಣ, ಅವರನ್ನು ಹಿಡಿಯಲಾಗುತ್ತಿಲ್ಲ. ಆ ಗ್ರಾಮಗಳನ್ನು ಎಲ್ಲಾ ಒಳಗೊಂಡಂತೆ ಸ್ವಂತ ಕಟ್ಟಡವಿರುವ, ಒಂದು ಪೊಲೀಸ್ ಸ್ಟೇಷನ್ ನೆಲ್ಯಾಡಿಯಲ್ಲಿದೆ. ಅದಕ್ಕೆ ದೇವರ ದಯೆಯಿಂದ ದೂರವಾಣಿ ಸಂಪರ್ಕ ಇಲ್ಲ. ಕಳೆದ ಸಲ ನಾನು ಇದೇ ಅಧಿವೇಶನದಲ್ಲಿ ಮಾತನಾಡಿದ್ದೆ. ಅದನ್ನು ಪತ್ರಿಕೆಯವರು, ಪೊಲೀಸರಿಗೆ ದೂರವಾಣಿಯೂ ದೂರವೆಂದು ಕಾಣಿಸಿದ್ದರು. ಅದರ ಪರಿಣಾಮವಾಗಿ ಜೆ.ಸಿ.ಯವರು ಹೋಗಿ ಕಾಯಿನ್ ಫೋನ್ ಅನ್ನು ಅಲ್ಲಿ ಇಡುವಂಥ ವ್ಯವಸ್ಥೆಯಾಗಿದೆ. ಆ ಪತ್ರಿಕೆಯವರಿಗೆ ಧನ್ಯವಾದಗಳು. ಆಶ್ರಯ, ಇಂದಿರಾ ಆವಾಸ್ ಯೋಜನೆಗಳ ಬಗ್ಗೆ ಎಲ್ಲರೂ ಹೇಳಿದ್ದನ್ನೆ ನಾನು ಹೇಳುವುದಿಲ್ಲ. ಮುಂದೆ ನಮ್ಮ ಪುಣ್ಯಕ್ಕೆ ನನ್ನ ಕ್ಷೇತ್ರದಲ್ಲಿ 2 ಪ್ರಸಿದ್ಧ ನದಿಗಳಿವೆ. ಕುಮಾರ ಧಾರ ಮತ್ತು ನೇತ್ರಾವತಿ ನದಿಗಳು ಅಲ್ಲದೆ, ಇನ್ನೂ 3 ನದಿಗಳೂ ಹರಿಯುತ್ತಿವೆ. ಆದರೆ, ಕುಡಿಯುವ ನೀರಿನ ಪರಿಸ್ಥಿತಿ ಹೇಳಲು ನನಗೆ ಗೊತ್ತಿಲ್ಲ. ಎಲ್ಲಾ ಕಡೆ ಗುಡ್ಡಗಾಡುಗಳು. ಅದರಲ್ಲೂ ಲಿಖಿತ ಪ್ರಶ್ನೆಗೆ ನನಗೆ ಕೊಟ್ಟ ಉತ್ತರದ ಪ್ರಕಾರ, 154 ಬೋರ್‌ಗಳು ಪುತ್ತೂರಿನಲ್ಲಿ ಪೂರ್ತಿ ನಿಂತುಹೋಗಿವೆ. ಆ 154 ಬೋರ್‌ವೆಲ್‌ಗಳಿಗೆ ಪರಿಹಾರವಾಗಬೇಕು. ಬಾರಿ ಕಡೆ ಕುಡಿಯುವುದಕ್ಕೆ ನೀರು ಕೊಡಬೇಕು. ಅದಕ್ಕಾಗಿ ಈ ದಿಸೆಯಲ್ಲಿ ಸರ್ಕಾರ ಹೆಚ್ಚಿನ ವ್ಯವಸ್ಥೆಯನ್ನು ಪುತ್ತೂರಿಗೆ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು, ಶಿಕ್ಷಣ ಸಂಸ್ಥೆಗಳ ವಿಚಾರ ಹೇಳುವುದಾದರೆ, 14 ವರ್ಷಗಳ ಹಿಂದೆ ಬೆಟ್ಟಂಪಾಡಿ ಡಿಗ್ರಿ ಕಾಲೇಜಿನ ಬಿಲ್ಡಿಂಗ್‌ಗೆಂದು 54 ಲಕ್ಷ ರೂಪಾಯಿಗಳು ಮಂಜೂರಾಗಿತ್ತು. ಕಟ್ಟಡ, ಗೋಡೆಎಲ್ಲ ಮೇಲೆ ಹೋಗಿದೆ. 14 ವರ್ಷಗಳಾದರೂ ಕಟ್ಟಡ ಪೂರ್ತಿಯಾಗಲಿಲ್ಲ. ಇವತ್ತಿಗೂ ಡಿಗ್ರಿ ಕಾಲೇಜಿನ ಆ ಕಟ್ಟಡ ನೋಡಿದಾಗ ನಮಗೆ ಸಂಕಟವಾಗುತ್ತಿದೆ. ತಕ್ಷಣ ಅದಕ್ಕೆ ಹಣ ಬಿಡುಗಡೆ ಮಾಡಿ ಆ ಕಟ್ಟಡವನ್ನು ಪೂರ್ತಿಗೊಳಿಸಿ ವಿದ್ಯಾರ್ಥಿಗಳಿಗೆ, ಉಪನ್ಯಾಸಕರಿಗೆ, ಸಹಕಾರ ಕೊಡುಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಶಿಕ್ಷಣ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ರೈಲಿನ ಬಗ್ಗೆ ಮಾತನಾಡುವಾಗ ನಾವು ಎಲ್ಲಾ ರೈಲು ಬಿಡುವವರು ಆಗಿದ್ದೇವೆ. ನಾನು ಈ ಸದನದ ಒಳಗೆ ಬರುವವರೆಗೆ ನಮ್ಮ ಎಲ್ಲಾ ನಮ್ಮ ಎಲ್ಲಾ ರಾಜಕೀಯದವರಿಗೆ ರೈಲು ಬಿಡುವುದನ್ನು ಸ್ವಲ್ಪ ನಿಲ್ಲಿಸಿ ಕಾರ್ಯಕ್ರಮ ಕೈಗೊಳ್ಳಿ ಎಂದು ಹೇಳುತ್ತಿದ್ದೆ. ಈಗ ಅವರೊಟ್ಟಿಗೆ ನಾನು ಸೇರಿಕೊಂಡಿದ್ದೇನೆ. ಏಕೆಂದರೆ, ನಾವು ಅಕ್ಟೋಬರ್‌ನಲ್ಲಿ ಅದೇ ರೈಲಿನ ಪಟ್ಟಿಯ ಮೇಲೆ ಟ್ರಾಲಿಯಲ್ಲಿ ಹೋಗಿದ್ದೆವು. ಆಗ ಅಧಿಕಾರಿಗಳು ನಮಗೆ ಒಂದು ಮಾತು ಕೊಟ್ಟರು, ನವೆಂಬರ್ 25ಕ್ಕೆ ಸುಬ್ರಹ್ಮಣ್ಯತನಕ ರೈಲನ್ನು ಓಡಿಸುತ್ತೇವೆ, ಮಾರ್ಚ್ 31ರೊಳಗೆ ನಾವು ಹಾಸನಕ್ಕೆ ರೈಲು ಓಡಿಸುತ್ತೇವೆಂದು ಹೇಳಿದರು. ಬಹುಶಃ ಅವರು ಬಾಯಲ್ಲಿ ರೈಲು ಓಡಿಸಿದರು ಪಟ್ಟಿಯ ಮೇಲೆ ಓಡಿಸಲಿಲ್ಲ. ಅದಕ್ಕಾಗಿ ನನಗೆ ಅನ್ನಿಸುತ್ತದೆ, ನಮ್ಮ ದುರಾವಸ್ಥೆ ಏನೆಂದರೆ, ಕೈಯಲ್ಲಿದ್ದ ಹಕ್ಕಿಯನ್ನು ಬಿಟ್ಟು ಹಾರುವ ಹಕ್ಕಿಗೆ ನಾವು ಕೈ ಚಾಚಿದೆವಲ್ಲಾ ಎಂದು ವಿಷಾದವಾಗುತ್ತಿದೆ. ಇದ್ದ ಬಟ್ಟೆಯನ್ನು ತೆಗೆದು ನಾವು 10 ವರ್ಷದಿಂದ ನಿರ್ಗತಿಕರಾಗಿದ್ದೇವೆ. ಇನ್ನು ವಿದ್ಯುತ್ ಬಗ್ಗೆ ಹೇಳುವುದಾದರೆ, ನಮ್ಮ ಪುತ್ತೂರು ವಿಭಾಗದಲ್ಲಿ 90 ಪರ್ಸೆಂಟ್ ನಾವು ಬಿಲ್ ಕಟ್ಟುತ್ತಿದ್ದೇವೆ, ಅಲ್ಲಿ ಅಸಮರ್ಪಕ ವಿದ್ಯುತ್ ಕಣ್ಣುಮುಚ್ಚಾಲೆಯಾಡುತ್ತಿದೆ. ಆದರೆ ನಮಗೆ ನಗು ಬರುತ್ತದೆ, ನಮ್ಮ ಸರಕಾರದ ಬಗ್ಗೆ. ನಾನು ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರಿಗೆ ಒಂದು ಪ್ರಶ್ನೆ ಕೇಳಿದ್ದೆ. ಹ್ಯಾಮ್ಲೆಟ್ ಯೋಜನೆಯದು ನಾಲ್ಕು ವರ್ಷಗಳಿಂದ ಏಕೆ ಬಾಕಿ ಇದೆ ಎಂದು ಕೇಳಿದ್ದಕ್ಕೆ ಮುಂಡಾಸು ಮೂವತ್ತು ಮೊಳ, ಎಂದು ಹೇಳಿದ ಹಾಗೆ ಆಗಿದೆ ಲೋಕೋಪಯೋಗಿ ಇಲಾಖೆಯಲ್ಲಿ ಹ್ಯಾಮ್ಲೆಟ್ ಯೋಜನೆ ಇರುವುದಿಲ್ಲ, ಅದ್ದರಿಂದ ಮುಂದಿನ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಉತ್ತರಬಂದಿದೆ. ಕರ್ನಾಟಕದಲ್ಲಿ ದೇವರ ದಯೆಯಿಂದ ಯಾವುದೂ ಉದ್ಭವಾಗುವುದಿಲ್ಲ, ಆದರೆ 90 ಪರ್ಸೆಂಟ್ ಬಿಲ್ ಕಟ್ಟುವ ನಮ್ಮ ಕ್ಷೇತ್ರಕ್ಕೆ ಸರಿಯಾಗಿ ವಿದ್ಯುತ್ ಸಮರ್ಪಕವಾಗಿ ಕೊಡಬೇಕೆಂದು ನಾನು ನಿಮ್ಮ ಮುಖಾಂತರ ಕೇಳಿಕೋಳುತ್ತೇನೆ. ಇನ್ನು ರಸ್ತೆಯ ಬಗ್ಗೆ ಹೇಳುವುದಾದರೆ, ಎನ್.ಹೆಚ್.48, ನನ್ನ ಕ್ಷೇತ್ರದಲ್ಲಿ ಹಾದು ಹೋಗುತ್ತಿದೆ, ಸೇತುವೆಗಳ ಮೇಲೆ 20 ಟನ್ ಭಾರದ ಮೈನ್ಸ್ ಹಾಕಿಕೊಂಡು ಹೋಗುವ ಬದಲು 80, 90 ಟನ್ ಹಾಕಿಕೊಂಡು ಹೋಗಿ ಸೇತುವೆ ಮುರಿದ ಕಾರಣದಿಂದ ಪುತ್ತೂರು ತಾಲ್ಲೂಕಿನ ಎಲ್ಲಾ ರಸ್ತೆಗಳು ಒಳಗೆ ಹೋಗಿ ಇವತ್ತು ರಸ್ತೆಯಲ್ಲಿ ಯಾವುದೋ ಹೊಂಡ, ಯಾವುದೋ ಗುಂಡಿ ಬಿದ್ದು ಅದು ಎಲ್ಲಿ ಹೋಗಿ ಸೇರುತ್ತದೆ ಎಂದು ನಮಗೆ ಗೊತ್ತಾಗುತ್ತಿಲ್ಲ. ಪಾಪ, ಮೊನ್ನೆ ನಮ್ಮ ಮಾಜಿ ಪ್ರಧಾನ ಮಂತ್ರಿಯವರು ಉಪ್ಪಿನಂಗಡಿಗೆ ಬಂದಾಗ ಅವರಿಗೆ ಸೊಂಟ ನೋವು ಪ್ರಾರಂಭವಾಯಿತಂತೆ, ಕಾರಣ ಆ ರಸ್ತೆಯಲ್ಲಿ ಬಂದದ್ದರಿಂದ, ಅದಕ್ಕೆ ಒಂದೂ ಕಾಲು ಕೋಟಿ ರೂಪಾಯಿ ಮಂಜೂರು ಆಗಿದೆ ಎಂದು ಡಿಸೆಂಬರ್ ತಿಂಗಳ ಗೆಜೆಟ್‌ನಲ್ಲಿ ಬಂದಿತ್ತು, ಡಿಸೆಂಬರ್ 15ಕ್ಕೆ ಟೆಂಡರ್ ಓಪನ್ ಎಂದು ದಾಖಲಾಗಿತ್ತು, ಆದರೆ ಈ ತನಕ ಆ ಕಾಮಗಾರಿ ಪ್ರಾರಂಭವಾಗಿಲ್ಲ, ಇದು ಬಹಳ ನೋವಿನ ವಿಚಾರ, ಅಲ್ಲಿ ಆ ಟೆಂಡರ್ ಧೂಳು ತಿಂದು ತಿಂದು

ಶಾಸಕರನ್ನು ಬಯ್ಯುವಂಥ ಪರಿಸ್ಥಿತಿ ಬಂದಿದೆ, ದಯಮಾಡಿ ಅದನ್ನು ಕೂಡಲೇ ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನು ಕೆಎಸ್ಆರ್‌ಟಿಸಿ ಬಗ್ಗೆ, ಹೇಳುವಾಗ ಇನ್ನೊಂದು ವಿಶೇಷ, ಮೊನ್ನೆಯತನಕ ಅಂದರೆ ಜನವರಿತನಕ ನಾನು ಹೋಗುವ ಬಸ್ಸಿನಲ್ಲಿ, ನಾನು ಸಾಮಾನ್ಯವಾಗಿ ಕೆಂಪು ಬಸ್ಸಿನಲ್ಲಿ ಹೋಗುತ್ತೇನೆ, ಕೆಲವೊಮ್ಮೆ ರಾಜಹಂಸದಲ್ಲಿ ಹೋಗುತ್ತೇನೆ. ನಮ್ಮ ಊರಿಗೆ ಹೋಗುತ್ತಿದ್ದ ಸಂದರ್ಭದಲ್ಲಿ ಮಳೆ ಬರುವಾಗ ಬಸ್ಸಿಗೆ ಪ್ಲಾಸ್ಟಿಕ್ ಹಾಕಿ ಅದರಲ್ಲಿ ಕುಳಿತುಕೊಳ್ಳುವುದಕ್ಕೆ ಕಂಡಕ್ಟರ್ ಹೇಳುತ್ತಿದ್ದರು, ಆದರೆ ನಾನು ಹೋಗುವ ರಾಜಹಂಸ ಬಸ್ ಹೊಸದಾಗಿ ಬಂದಿದೆ, ಆದರೆ ಸರ್ವೇಸಾಮಾನ್ಯ ಅಲ್ಲಿ ಬಹಳಷ್ಟು ಕಳಪೆ ಬಸ್‌ಗಳು ಇವೆ. ಇನ್ನೊಂದು ವಿಚಾರ ಎಂದರೆ, ನಮ್ಮ ಶಿರಾಡಿ ಘಾಟಿಯ ಮೂಲಕ ಮಂಗಳೂರು ವಿಭಾಗದಿಂದ ಬಹಳಷ್ಟು ಬಸ್‌ಗಳು ಬರುತ್ತವೆ. ಅದರಲ್ಲಿ ಮೂರು ನಮೂನೆ, ಒಂದು ಕಂಡಕ್ಟರ್–ಡ್ರೈವರ್ ಇರುವುದು, ಇನ್ನೊಂದು ಕಂಡ್‌ಕ್ಟರೇ ಡ್ರೈವರ್ ಇದ್ದರೆ, ಕಂಡಕ್ಟರ್ ಟಿಕೆಟ್ ಕೊಡುವ ಹಾಗೆ ಇಲ್ಲ, ಕಂಡಕ್ಟರ್, ಡ್ರೈವರ್ ಒಬ್ಬನ್ನೆ ಒಂದು ಬಾರಿ ಅದರಲ್ಲಿ ಹೋಗುವಾಗ ಎದುರಿನಲ್ಲಿ ಘಾಟಿನಲ್ಲಿ ಹುಲ್ಲಿನ ಗಾಡಿ ಬಂತು, ಬಸ್‌ನಲ್ಲಿದ್ದವರು ಇಳಿದು ಡ್ರೈವರ್‌ಗೆ ಸೂಚನೆ ಕೊಡುವ ಸ್ಥಿತಿಯಾಯಿತು. ಎಲ್ಲಾದರೂ ನಮ್ಮಂಥವರು ಎಂಎಲ್‌ಎಗಳು ಇದ್ದಿದ್ದರೆ, ಬಹುಶಃ ನಾವೆಲ್ಲಾ ಅಲ್ಲಿಯೇ ನಾಶವಾಗುವಂಥ ಪರಿಸ್ಥಿತಿ ಉಂಟಾಗುತ್ತಿತ್ತು? ದಯಮಾಡಿ ಮೊನ್ನೆ ತಾನೇ ಉತ್ತರ ಕರ್ನಾಟಕದ ಭಾಗದಲ್ಲಿ 58 ಜನರನ್ನು ಬಲಿ ತೆಗೆದುಕೊಂಡ ಬಸ್ಸಿನ ಹಾಗೆ ಎಲ್ಲರನ್ನೂ ಬಲಿ ತೆಗೆದುಕೊಳ್ಳುವ ಪರೆಸ್ಥಿತಿ ಆಗುವುದರ ಬದಲು ಆ ಬಸ್ಸಿಗೆ ಒಬ್ಬೊಬ್ಬ ಕಂಡಕ್ಟರ್ ಅವರನ್ನು ಕೊಟ್ಟು ಆ ಬಸ್ಸಿನಲ್ಲಿ ಬರುವವರು ಎಲ್ಲಿಗೆ ಹೊರಟಿದ್ದಾರೋ ಅಲ್ಲಿಗೆ ಸುರಕ್ಷಿತವಾಗಿ ಬಂದು ತಲುಪುವುದಕ್ಕೆ ಅನುವು ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಸರಕಾರಿ ಆಸ್ಪತ್ರೆ, ನಮ್ಮ ಪುತ್ತೂರಿನಲ್ಲಿ ನಾಲ್ಕು ತಾಲ್ಲೂಕುಗಳಿಗೆ ಸಂಬಂಧಪಟ್ಟ 100 ಬೆಡ್‌ನ ಆಸ್ಪತ್ರೆ ಇದೆ, ಅಲ್ಲಿ ಕೇವಲ 65 ಮಂದಿಗೆ ಮಾತ್ರ ಆಹಾರದ ವ್ಯವಸ್ಥೆಯಿದೆ, ನಾನು ಸರಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ. ಸರಕಾರಿ ಆಸ್ಪತ್ರೆಗೆ ಬರುವವರು ಊಟಕ್ಕೆ ಗತಿ ಇಲ್ಲದ ಜನಗಳು ಮಾತ್ರ ಬರುತ್ತಿದ್ದಾರೆ, ಹೀಗಿರುವಾಗ ಅಲ್ಲಿ 65 ಜನ ಊಟ ಮಾಡುವುದು ಇನ್ನು 100 ಜನರ ಬೆಡ್‌ನಲ್ಲಿ 110 ಜನ ಕೆಳಗೆ ನೆಲದಲ್ಲಿ ಮಲಗಿರುತ್ತಾರೆ. ಅಂಥವರು ಕುಳಿತು ನೋಡುವುದು ಎಂದರೆ ಬಹಳ ಬೇಸರ ಎನ್ನಿಸುತ್ತದೆ. ಆ ನಮ್ಮ ಆಸ್ಪತ್ರೆಗೆ ಅಲ್ಲಿ ಎಷ್ಟು ಜನ ರೋಗಿಗಳು ದಾಖಲಾತಿ ಇರುತ್ತಾರೋ ಅಷ್ಟು ಜನರಿಗೆ ಊಟದ ವ್ಯವಸ್ಥೆಯನ್ನು ಸರಕಾರ ಮಾಡಬೇಕೆಂದು ಕೇಳಿಕೊಳ್ಳುತ್ತಾ, ನಮ್ಮದು ಗ್ರಾಮೀಣಾ ಪ್ರದೇಶ, ಎಲ್ಲರೂ ಗುಡ್ಡಗಾಡಿನಲ್ಲಿ ಕಾಡಿನಲ್ಲಿ ಕೆಲಸ ಮಾಡುವವರು ಜಾಸ್ತಿ ಜನ ಇರುತ್ತಾರೆ. ಅಲಿ ಹಾವು ಕಡಿತ, ಹುಚ್ಚುನಾಯಿ ಕಡಿತ, ಜಾಸ್ತಿಯಾಗಿರುವುದರಿಂದ, ಆ ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿ ಆ ಔಷಧಿಯಿಲ್ಲದಿರುವುದರಿಂದ ದಯಮಾಡಿ ಆ ಔಷಧಿಗಳನ್ನು ಒದಗಿಸುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತಾ, ಜೊತೆಗೆ ಯಶಸ್ವಿನಿ ಒಂದು ಒಳ್ಳೆಯ ಕಾರ್ಯಕ್ರಮ, ಆದರೆ ಅದನ್ನು ಖಾಲಿ ಶಸ್ತ್ರ ಚಿಕಿತ್ಸೆಗೆ ಮಾತ್ರ ಅಳವಡಿಸಿದ್ದಾರೆ. ಯಾರಿಗಾದರೂ ಕೈ–ಕಾಲು ಮುರಿದರೆ, ಹಾಗೆ ಮಹಿಳೆಯರಿಗೆ ಹೆರಿಗೆ ಅದಾಗ ಶಸ್ತ್ರ ಚಿಕಿಸ್ತೆ ಆದರೆ ಅದಕ್ಕೆ ಸಂಬಂಧಪಡುವುದಿಲ್ಲ. ಆದುದರಿಂದ ಅದನ್ನು ಅದಕ್ಕೆ ಸೇರಿಸಿಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ ಬಹಳಷ್ಟು ಮಂದಿ ವಿಶ್ವ ಕರ್ಮರು ಇದ್ದಾರೆ, ಬಹುಶಃ ಅವರು ಬಹಳ ಹಿಂದುಳಿದವರು ಆಗಿದ್ದು ಬಹಳ ಕುಶಲಕರ್ಮಿಗಳು ಆಗಿದ್ದಾರೆ. ಅವರಿಗೆ ನನ್ನ ಪುತ್ತೂರು ಕ್ಷೇತ್ರದಲ್ಲಿ ಒಂದು ತರಬೇತಿ

ಕೇಂದ್ರವನ್ನು ಒದಗಿಸಿಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ನಾನು ಮಹಿಳೆ, ಮಹಿಳೆಯರು ಮನೆಯೊಳಗೆ ಅಡುಗೆ ಮಾಡಬೇಕಾದರೆ, ಮೊನ್ನೆ ಮೊನ್ನೆ ತನಕ ನಮಗೆ ಯಾವುದೇ ಸಮಸ್ಯೆ ಇರಲಿಲ್ಲ, ಬೇಕಾದಾಗ ಅನಿಲ ಸರಬರಾಜು ಆಗುತ್ತಿತ್ತು, ಈಗ ಎಲ್ಲಿ ಹೋದರೂ 21 ದಿವಸಗಳ ಮೊದಲು ಬುಕ್ ಮಾಡಬೇಕು. ಒಂದೇ ಸಿಲಿಂಡರ್ ಇದ್ದವರು, ಸಿಲೆಂಡರ್ ತೆಗೆದುಕೊಂಡು ಹೋಗುವಾಗಲೇ ಬುಕ್ ಮಾಡುವ ಸ್ಥಿತಿ. ಇಲ್ಲದಿದ್ದರೆ ದಿನಂಪ್ರತಿ ಗಲಾಟೆಯಾಗುವ ಒಂದು ಸನ್ನಿವೇಶ, ದಯಮಾಡಿ ಅದನ್ನು ಸರಿಪಡಿಸುವುದಕ್ಕೆ ಸರಕಾರದವರು ಹೇಳಬೇಕು ಎಂದು ಕೇಳಿಕೊಂಡು, ಅಂಗನವಾಡಿ ಮಹಿಳೆಯರಿಗೆ ಕನಿಷ್ಠ ವೇತನವನ್ನು ಘೋಷಣೆ ಮಾಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಗೋಪಾಲ ಪೂಜಾರಿ(ಬೈಂದೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ವಂದನಾರ್ಪಣಾ ಭಾಷಣಕ್ಕೆ ಸ್ವಾಗತ ಕೋರುತ್ತಾ ನನ್ನ ಜಿಲ್ಲೆಗೆ ಸೀಮಿತವಾಗಿ ಮಾತನಾಡುವುದಕ್ಕೆ ಇಚ್ಛಿಸುತ್ತೇನೆ. ನಮ್ಮ ಸಮ್ಮಿಶ್ರ ಸರಕಾರ 8 ತಿಂಗಳ ಅವಧಿಯಲ್ಲಿ ಬಹಳ ಪರಿಣಾಮಕಾರಿಯಾಗಿ ಈ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಯಶಸ್ಸು ಆಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಮ್ಮ ಪೋಲೀಸ್ ಇಲಾಖೆಯಲ್ಲಿ ಬಹಳಷ್ಟು ಅಗ್ನಿಶಾಮಕ ಮತ್ತು ಕಾರಾಗೃಹಗಳನ್ನು ಗಣಕಯಂತ್ರ ವ್ಯವಸ್ಥೆಯಲ್ಲಿ ಸಜ್ಜುಗೊಳಿಸಿ ಅನೇಕ ರೀತಿಯ ಬದಲಾವಣೆಯನ್ನು ತರಲಾಗಿದೆ. ಆದರೆ, ಇದರಲ್ಲಿ ಇದರ ಆಡಳಿತ ವ್ಯವಸ್ಥೆಯಲ್ಲಿ ಬಹಳ ಒತ್ತು ಕೊಡುವ ವ್ಯವಸ್ಥೆಯಾಗಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ನಾನು ನಾಲ್ಕು ತಿಂಗಳ ಹಿಂದೆ, ಈ ಪೋಲೀಸ್ ಠಾಣೆ ವ್ಯವಸ್ಥೆಯಲ್ಲಿ ಕೆಲವು ಸುಘಟನೆಗಳ ಒಟ್ಟಿಗೆ ಪೋಲೀಸ್ ಪೇದೆಗಳ ಒಂದು ಸಹಭಾಗಿತ್ವವನ್ನು ಕಂಡಾಗ ಉಡುಪಿ ಜಿಲ್ಲಾ ವರಿಷ್ಠ ಪೋಲೀಸ್ ಅಧಿಕಾರಿಗಳಿಗೆ ಒಂದು ಮನವಿಯನ್ನು ಮಾಡಿದೆ. ಆ ಪೋಲೀಸ್ ಠಾಣೆಯಲ್ಲಿ ಇರುವ ಪೋಲೀಸ್ ಪೇದೆಗಳನ್ನು ಬದಲಾಯಿಸಿ, ಇಂಥ ದುಷ್ಕರ್ಮಿಗಳ ಒಟ್ಟಿಗೆ ಸಹಭಾಗಿತ್ವವನ್ನು ಕಂಡದ್ದರಿಂದ, ಬದಲಾಯಿಸಬೇಕೆನ್ನುವ ಒಂದು ಮನವಿಯನ್ನು ಮಾಡಿದೆ, ಆದರೆ ಎಸ್.ಪಿ.ಯವರು ಯಾವುದೇ ಬದಲಾವಣೆ ಮಾಡಲಿಲ್ಲ. ಅದಾದ ಮೇಲೆ 20 ದಿನದ ಹಿಂದೆ, ಒಬ್ಬ ಕ್ರೈಸ್ತ ಸಮಾಜದವನು ಕೇರಳ ಮೂಲದಿಂದ ಬಂದವನು ಒಬ್ಬ ಬೇರೆ ಸಮಾಜಕ್ಕೆ ಸೇರಿದವನಿಂದ ಲೀಸ್ ಮೂಖಾಂತರ ಜಾಗವನ್ನು ತೆಗೆದುಕೊಂಡು ಮೂರು ಎಕರೆ ಜಮೀನಿನಲ್ಲಿ ಬಾಳೆಗಿಡ ನೆಟ್ಟಿದ್ದಾನೆ. ಎರಡೂವರೆ ಸಾವಿರ ಬಾಳೆ ಗಿಡಗಳನ್ನು ಬಹಳಷ್ಟು ಕಷ್ಟಪಟ್ಟು, ಸಹಕಾರ ಸಂಸ್ಥೆಯಲ್ಲಿ ಸಾಲ ಪಡೆದು ಅದನ್ನು ಬೆಳಸಿದ್ದಾನೆ. ನಾಲ್ಕು ತಿಂಗಳುಗಳ ಹಿಂದೆ ಯಾವ ಪೋಲೀಸ್ ವರಿಷ್ಟಾಧಿಕಾರಿಗಳವರಿಗೆ ನಾನು ಮನವಿ ಮಾಡಿಕೊಂಡೆನೋ ಅವರ ಒಂದು ಸಹಕಾರ ಇದ್ದುದ್ದರಿಂದ, ಇಂಥ ಸಂಘಟನೆಗಳು ರಾತ್ರಿ ಹೊತ್ತಿನಲ್ಲಿ ಎರಡೂವರೆ ಸಾವಿರ ಬಾಳೆ ಗಿಡಗಳನ್ನು ಕಡಿದು ಹಾಕಿದ್ದಾರೆ. ಅರ್ಧ ಎಕರೆ ರಬ್ಬರ್ ತೋಟವನ್ನು ಕಡಿದು ಹಾಕಿ, ಇಡೀ ರಾಜ್ಯದಲ್ಲಿ ನಡೆಯದಂಥ, ಒಬ್ಬ ಕೃಷಿಕ ತನ್ನ ವ್ಯಾಪ್ತಿಯಲ್ಲಿ ಹೊಟ್ಟೆಪಾಡಿಗಾಗಿ ಮಾಡಿದಂಥ ಬಾಳೆ ಗಿಡಗಳನ್ನು ಕಡಿದು ಹಾಕಿದ್ದಾರೆ. ಸುಮಾರು ಎಂಟು ಲಕ್ಷ ರೂ.ಗಳ ಅಂದಾಜು ವೆಚ್ಚದ ಹಾನಿಯನ್ನು ಈ ದುಷ್ಕರ್ಮಿಗಳು ಮಾಡಿದ್ದಾರೆಂದರೆ, ಒಬ್ಬ ರೈತರಿಗೆ ಯಾವ ರೀತಿಯಲ್ಲಿ ಇಂಥ ಸಂಘಟನೆಗಳಿಂದ ರಕ್ಷಣೆ ಸಿಗುತ್ತದೆ? ಪೋಲೀಸ್ ಇಲಾಖೆಗೆ ಇದರ ಬಗ್ಗೆ ನಾಲ್ಕು ತಿಂಗಳ ಮುಂಚಿತವಾಗಿ ತಿಳಿಸಿದ್ದರೂ ಕೂಡ ಅವರು ಮುಂಜಾಗ್ರತೆ ಮಾಡದೇ ಇರುವುದರಿಂದ ಈ

ರೀತಿಯಾದ ಒಂದು ದುರ್ಘಟನೆ ನನ್ನ ಕ್ಷೇತ್ರದಲ್ಲಿ ಆಗಿದೆ. ಈ ಒಂದು ಘಟನೆಯಲ್ಲಿ ಭಾಗವಹಿಸಿರತಕ್ಕಂಥವರನ್ನು ಅಲ್ಲಿನ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರವರು ಹಿಡಿಯುವುದಕ್ಕೆ ಹೋಗುವ ಸಂದರ್ಭದಲ್ಲಿ ಅವರ ಜೊತೆಯಲ್ಲಿ ಆ ಠಾಣೆಯಲ್ಲಿರುವ ಪೊಲೀಸ್ ಪೇದೆಗಳು ಹೋಗಲಿಲ್ಲ. ಅಂದರೆ, ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಒಬ್ಬರೇ ಅವರನ್ನು ಹಿಡಿಯುವುದಕ್ಕೆ ಹೋಗಿದ್ದಾರೆ. ಈ ರೀತಿ ಇರುವಾಗ ಪೊಲೀಸ್ ಇಲಾಖೆಯಲ್ಲಿರತಕ್ಕಂಥ ಪೇದೆಗಳು ಯಾವರೀತಿ ಕಾರ್ಯವನ್ನು ನಿರ್ವಹಿಸುತ್ತಾರೆ ಎಂಬುದನ್ನು ನೀವೇ ಅರ್ಥ ಮಾಡಿ ಕೊಳ್ಳಬೇಕು. ದುಷ್ಕರ್ಮಿಗಳನ್ನು ಹಿಡಿಯುವುದಕ್ಕೆ ಇವರು ಕೊಲ್ಲೂರು ಪೊಲೀಸ್ ಠಾಣೆಯಿಂದ ಪೇದೆಗಳನ್ನು ಕರೆದುಕೊಂಡು ಹೋಗುತ್ತಾರೆಂದರೆ, ಆ ಪೊಲೀಸ್ ಠಾಣೆಯಲ್ಲಿರುವ ಪೊಲೀಸ್ ಪೇದೆಗಳ ಕಾರ್ಯವೈಖರಿ ಯಾವ ರೀತಿ ಇದೆ ಎಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಇವತ್ತಿನ ದಿವಸ ಇಂಥ ಒಂದು ದುಷ್ಕರ್ಮಿಗಳ ಸಂಘಟನೆಗಳನ್ನು ಮಟ್ಟ ಹಾಕತಕ್ಕಂಥ ಕೆಲಸ ಪೊಲೀಸ್ ಇಲಾಖೆಯಿಂದ ಆಗಬೇಕು. ಸಂಬಂಧಪಟ್ಟವರಿಗೆ ಶಿಕ್ಷೆಯಾಗಬೇಕು. ತಪ್ಪುಮಾಡಿರತಕ್ಕಂಥವರು ಜಾಮಿನು ಮೇಲೆ ಬಂದು, ಮತ್ತೆ ಅದೇ ರೀತಿಯಾಗಿ ಎರಡನೇ ದುರಂತವನ್ನು ನನ್ನ ಕ್ಷೇತ್ರದಲ್ಲಿ ಮಾಡಿದ್ದಾರೆ. ಇದರ ಬಗ್ಗೆ ಹೆಚ್ಚು ಒತ್ತನ್ನು ಪೊಲೀಸ್ ಇಲಾಖೆ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ, ಇದರಿಂದ ನೊಂದ ರೈತರಿಗೆ ಸರ್ಕಾರದ ಕಡೆಯಿಂದ ಪರಿಹಾರ ಕೊಡತಕ್ಕಂಥ ಕೆಲಸ ಆಗಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆರಾಧನಾ ವಿಷಯದಲ್ಲಿ ನನ್ನ ಜಿಲ್ಲೆಗೆ ಸಂಬಂಧಪಟ್ಟಂತೆ ಸರ್ಕಾರ ಸಾಕಷ್ಟು ಹೇಳಿದೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಧಾರ್ಮಿಕದತ್ತಿ ಇಲಾಖೆ ಜಿಲ್ಲಾ ಆಡಳಿತ ವ್ಯವಸ್ಥೆ ಅಡಿಯಲ್ಲಿ ಬರುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿಸಬೇಕು. ನನ್ನ ಕ್ಷೇತ್ರದಲ್ಲಿರತಕ್ಕಂಥ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನ ಇಡೀ ರಾಜ್ಯದಲ್ಲಿ ಅತ್ಯಂತ ಪವಿತ್ರವಾದ ದೇವಸ್ಥಾನ ಮತ್ತು ಅತ್ಯಂತ ಶಕ್ತಿಯುಳ್ಳಂಥ ಹಾಗೂ ರಾಜ್ಯದಲ್ಲಿ ಅತ್ಯಂತ ಮುಂಚೂಣಿಯಲ್ಲಿರತಕ್ಕಂಥ ದೇವಸ್ಥಾನ ಇದು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಒಂದು ಮೂಕಾಂಬಿಕ ದೇವಸ್ಥಾನಕ್ಕೆ ಒಂದು ಆಡಳಿತ ಮಂಡಳಿ ಇದೆ. ಈ ಆಡಳಿತ ಮಂಡಳಿ ನೇಮಕವಾದ ಮೇಲೆ ಅಲ್ಲಿ ಅನೇಕ ಕಾಮಗಾರಿಗಳಾಗಿವೆ. ಇಲ್ಲಿ ಅಗಿರತಕ್ಕಂಥ ಕಾಮಗಾರಿಗಳು ನೇರವಾಗಿ ಜಿಲ್ಲಾಧಿಕಾರಿಗಳ ಗಮನಕ್ಕೆ ಬಾರದೆ ನೇರವಾಗಿ ಆಯುಕ್ತರ ಒಂದು ಸಂಪರ್ಕದಿಂದ ಇದು ಆಗಿದೆ. ಈ ಕೆಲಸ ಮಾಡತಕ್ಕಂಥದ್ದು ಜಿಲ್ಲಾಧಿಕಾರಿಗಳ ಮತ್ತು ಎ.ಸಿ.ಯವರ ಗಮನಕ್ಕೆ ಕೂಡ ಬಾರದೆ ನೇರವಾಗಿ ಆಯುಕ್ತರು ಮತ್ತು ಅಲ್ಲಿರತಕ್ಕಂಥ ಟ್ರಸ್ಟ್‌ಗೆ ಒಂದು ಸಂಪರ್ಕ ಇಟ್ಟುಕೊಂಡು ಇದನ್ನು ಮಾಡಲಾಗಿದೆ. ಪಾರದರ್ಶಕತೆ ಕಾಪಾಡಬೇಕೆಂದು ಸರ್ಕಾರದ ಒಂದು ನೀತಿ ಇದೆ. ಟೆಂಡರ್ ಕಾಲ್‌ಫರ್ ಮಾಡಿದಾಗ ಅತ್ಯಂತ ಕಡಿಮೆ ದರದಲ್ಲಿ ನಿಗದಿ ಮಾಡಿರತಕ್ಕಂಥವರಿಗೆ ಆ ಕೆಲಸವನ್ನು ಕೊಡಬೇಕೆಂದು ಕಾನೂನಿನಲ್ಲಿ ಒಂದು ನಿಯಮವಿದೆ. ಆದರೆ, ಕೊಲ್ಲೂರು ದೇವಸ್ಥಾನದ ಅಭಿವೃದ್ಧಿ ಕೆಲಸಕ್ಕೆ ಟೆಂಡರ್ ಆದರೆ, ಸುಮಾರು 15 ರಿಂದ 17 ಕೋಟಿ ರೂಪಾಯಿಗಳ ಕಾಮಗಾರಿಗಳನ್ನು ಶ್ರೀ ವಾಸುದೇವ ಶೆಟ್ಟಿ ಎಂಬ ಒಬ್ಬ ವ್ಯಕ್ತಿಗೆ ಮಾಡುವುದಕ್ಕೆ ಕೊಟ್ಟಿದ್ದಾರೆ. ಹಾಗಾದರೆ, ಲೋಯೆಸ್ಟ್ ರೇಟ್‌ನಲ್ಲಿ ಟೆಂಡರ್ ಹಾಕಿರತಕ್ಕಂಥವರಿಗೆ ಕೆಲಸ ಕೊಡಬೇಕೆಂದು ಕಾನೂನನ್ನು ಏಕೆ ತಂದಿದ್ದಾರೆ? ಮತ್ತೆ ಪಾರದರ್ಶಕತೆ ವ್ಯವಸ್ಥೆ ಏಕೆ ಬೇಕು? ಈ ಜಿಲ್ಲೆಯಲ್ಲಿ ಬೇರೆ ಯಾರೂ ಗುತ್ತಿಗೆದಾರರು ಇರಲಿಲ್ಲವೆ? ಎಸ್.ಆರ್. ರೇಟ್‌ಗಿಂತ ಮೂರು

ಪರ್ಸೆಂಟ್ ಬಿಲ್ಲೋ ಎಂದು ಹೇಳಿ ಒಬ್ಬ ಗುತ್ತಿಗೆದಾರನಿಗೆ ಒಂದು ಕೋಟಿ ರೂಪಾಯಿ ಟೆಂಡರ್ ಆಗಿದ್ದರೆ, ಈ ಕೆಲಸ ಮುಗಿಯುವ ಹೊತ್ತಿಗೆ 1.5 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಕೆಲಸವನ್ನು ಮಾಡಿದ್ದೇವೆಂದು ಹೇಳಿ 1.5 ಕೋಟಿ ರೂಪಾಯಿಗಳನ್ನು ಲಪಟಾಯಿಸುವಂಥ ಕೆಲಸವನ್ನು ಕೊಲ್ಲೂರು ಮೂಕಾಂಬಿಕಾ ಮ್ಯಾನೇಜ್‌ಮೆಂಟ್ ಟ್ರಸ್ಟ್ ಮತ್ತು ಆಯುಕ್ತರು ಸೇರಿ ಈ ಒಂದು ದೊಡ್ಡ ದುರಂತವನ್ನು ಈ ರಾಜ್ಯದಲ್ಲಿ ಮಾಡಿದ್ದಾರೆಂದರೆ, ಅದು ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಕಾಮಗಾರಿಗಳನ್ನು ಮಾಡುವುದರಲ್ಲಿ ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದೊಂದೇ ವಿಷಯವಲ್ಲ. ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಈ ರಾಜ್ಯದಲ್ಲಿ ದೇವಸ್ಥಾನದ ಆಡಳಿತ ಮಂಡಳಿಗೆ ಚೆಕ್‌ಗೆ ಸಹಿ ಮಾಡತಕ್ಕಂಥ ಅಧಿಕಾರ ಅಥವಾ ಹಕ್ಕನ್ನು ಯಾರಿಗಾದರೂ ಕೊಟ್ಟಿದ್ದರೆ ಈ ಸಂದರ್ಭದಲ್ಲಿ ಹೇಳಬೇಕೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ, ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಟ್ರಸ್ಟ್‌ನ ಚೆಕ್‌ಗೆ ಸಹಿ ಮಾಡಲು ಹಕ್ಕನ್ನು ಕೊಟ್ಟಿದ್ದಾರೆ. ನಾನು ಈ ಮಾತನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಅಲ್ಲಿ ಸುಮಾರು 25 ಕೋಟಿ ರೂಪಾಯಿ ಇದೆ. ಇವತ್ತಿನ ದಿವಸ ಒಂದು ಆಡಳಿತ ಮಂಡಳಿಗೆ 25 ಕೋಟಿ ರೂಪಾಯಿಗಳ ಜವಾಬ್ದಾರಿ ಕೊಡುವಾಗ ಜಿಲ್ಲಾ ಆಡಳಿತ ಏನು ಮಾಡುತ್ತಿದೆ ಎಂಬುದು ಗೊತ್ತಾಗಬೇಕು? ಒಂದು ಮ್ಯಾನೇಜ್‌ಮೆಂಟ್ ಟ್ರಸ್ಟ್‌ಗೆ 25 ಕೋಟಿ ರೂಪಾಯಿಗಳನ್ನು ಡ್ರಾ ಮಾಡುವುದಕ್ಕೆ ಅಧಿಕಾರ ಕೊಡುತ್ತದೆಂದರೆ ಈ ಇಲಾಖೆ ಏನು ಕೆಲಸ ಮಾಡುತ್ತದೆಂದು ಮತ್ತು ಇದರ ಜವಾಬ್ದಾರಿ ಏನು ಎಂಬುದು ತಿಳಿಯಬೇಕು. ಪಾರದರ್ಶಕತೆ ವ್ಯವಸ್ಥೆ ಇರತಕ್ಕಂಥ ಸಂದರ್ಭದಲ್ಲಿ ಇಂಥ ಒಂದು ಕಾಮಗಾರಿಯನ್ನು ತೆಗೆದುಕೊಳ್ಳಬೇಕಾದರೆ ಪಾರದರ್ಶಕತೆಯನ್ನು ಕಾಪಾಡಬೇಕಾಗುತ್ತದೆ. ಇಲ್ಲದಿದ್ದರೆ ಇದೊಂದು ದೊಡ್ಡ ಹಗರಣವಾಗುತ್ತದೆ. ಹಾಗೆಯೇ ಸಾರ್ವಜನಿಕರು ದೇವಸ್ಥಾನದ ಹುಂಡಿಗೆ ಹಾಕಿದಂಥ ಹಣ ದುರುಪಯೋಗವಾಗುತ್ತದೆ. ಆದ್ದರಿಂದ, ಈ ಕೆಲಸದ ಬಗ್ಗೆ ಸರ್ಕಾರ ಒಂದು ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಅಲ್ಲಿ ಆಗಿರತಕ್ಕಂಥ ಎರಡನೇ ವಿಷಯ ಏನೆಂದರೆ, 2 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಚಿನ್ನದ ರಥ ಮಾಡಬೇಕೆಂಬ ಒಂದು ಪ್ರಸ್ತಾನವನೆ ಧಾರ್ಮಿಕದತ್ತಿ ಇಲಾಖೆ ಮುಖಾಂತರ ಆಯುಕ್ತರಿಗೆ ಬಂತು. ಇದು ಆಯುಕ್ತರಿಗೆ ಬಂದನಂತರ ಇದಕ್ಕೆ ಆದೇಶ ಕೊಡುವಾಗ ಒಂದು ತೀರ್ಮಾನ ಕೈಗೊಂಡಿದ್ದಾರೆ. ಅದೇನೆಂದರೆ, ಈ ಚಿನ್ನದ ರಥಕ್ಕೆ ತಗಲುವಂಥ ಹಣವನ್ನು ಪೂರ್ಣವಾಗಿ ದೇಣಿಗೆ ಹಣದಲ್ಲಿ ಮಾಡಬೇಕೆಂದು ಮತ್ತು ದೇವಸ್ಥಾನದ ಹಣದಿಂದ ಇದನ್ನು ಮಾಡಬಾರದೆಂದು ಒಂದು ಕಟ್ಟುನಿಟ್ಟಿನ ಆದೇಶ ಮಾಡಿದ್ದಾರೆ. ಆದರೆ, ಎರಡು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪ್ರಾರಂಭವಾದ ಚಿನ್ನದ ರಥ ಕೊನೆಗೆ 3.5 ಕೋಟಿ ರೂಪಾಯಿಗಳಿಗೆ ಹೋಗಿದೆ. ಒಂದು ಪ್ರಸ್ತಾವನೆಯನ್ನು ಆಡಳಿತ ಮಂಡಳಿಯವರು ಕಳುಹಿಸಿಕೊಟ್ಟಿದ್ದಾರೆ. ಅದೇನೆಂದರೆ, ಎರಡು ಕೋಟಿ ರೂಪಾಯಿಗಳ ಚಂದಾ ಹಣವನ್ನು ಕಲೆಕ್ಟ್ ಮಾಡುವುದಕ್ಕೆ ಆಗದೇ ಇರುವುದರಿಂದ ಹಿಂದೆ ಬೆಳ್ಳಿ ರಥಕ್ಕೆ ಕಲೆಕ್ಟ್ ಮಾಡಿದಂಥ ಹಣವನ್ನು ಇದಕ್ಕೆ ಕ್ರೋಢೀಕರಿಸಿ 3.5 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಚಿನ್ನದ ರಥವನ್ನು ಮಾಡುತ್ತೇಂಬ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟರು. ಈ ದೇವಸ್ಥಾನದಲ್ಲಿದ್ದಂಥ 25 ಕೋಟಿ ರೂಪಾಯಿಗಳಲ್ಲಿ ಈಗ 13 ಕೋಟಿ ರೂಪಾಯಿಗಳು ಉಳಿದುಕೊಂಡಿದೆ. ಈ 13 ಕೋಟಿ ರೂಪಾಯಿಗಳು ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಾಗ

2.5 ಕೋಟಿ ರೂಪಾಯಿಗಳಿಗೆ ಅಲ್ಲಿರತಕ್ಕಂಥ ಮ್ಯಾನೇಜಿಂಗ್ ಟ್ರಸ್ಟ್ ಕಾರಣ. ಅದ್ದರಿಂದ, ಈ ಆಡಳಿತ ಮಂಡಳಿ ಈ ಹಣವನ್ನು ಕಲೆಕ್ಟ್ ಮಾಡಿ ಪುನಃ ದೇವಸ್ಥಾನದ ಖಜಾನೆಗೆ ಭರ್ತಿ ಮಾಡಬೇಕೆಂದು ಸರ್ಕಾರ ಆದೇಶ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಆಡಳಿತ ಮಂಡಳಿ 2.5 ಕೋಟಿ ರೂಪಾಯಿಗಳನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದಾರೆಂಬುದು ಮತ್ತು ಆಡಳಿತ ಮಂಡಳಿಗೆ ಎಷ್ಟು ಸಮಯ ಇತ್ತೆಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಚಿನ್ನದ ರಥಕ್ಕೆ ಆಡಳಿತ ಮಂಡಳಿಯವರು ಖರ್ಚು ಮಾಡುವುದಕ್ಕೆ ಯಾವುದೇ ರೀತಿಯ ಸೆಕ್ಯುರಿಟಿಯನ್ನು ತೆಗೆದುಕೊಂಡಿಲ್ಲ. ಯಾವುದೇ ಒಂದು ಸೆಕ್ಯುರಿಟಿ ತೆಗೆದುಕೊಳ್ಳದೆ ಕೇವಲ ಕಮಿಷನರ್‌ರವರ ಆದೇಶದ ಮುಖ್ಯಾಂತರ ದಿನಾಂಕ 18–10–2004 ರಂದು 2.5 ಕೋಟಿ ರೂಪಾಯಿಗಳಿಗೆ ಆದೇಶ ಕೊಟ್ಟಿದ್ದಾರೆ. ಸರ್ಕಾರದ ಆದೇಶ ಬರುವುದಕ್ಕಿಂತ ಮುಂಚೆ ಅಂದರೆ 16ನೇ ತಾರೀಖಿನ ದಿವಸ 2 ಕೋಟಿ ರೂಪಾಯಿಗಿಂತ ಹೆಚ್ಚಿಗೆ ಹಣವನ್ನು ಇವರು ಖರ್ಚು ಮಾಡಿದ್ದಾರೆ. ಈ ರೀತಿಯಾಗಿರುವುದು ಹಣದ ದುರುಪಯೋಗ ಅಲ್ಲವೆ? ಚಿನ್ನದ ರಥಕ್ಕೆ 3.5 ಕೋಟಿ ರೂಪಾಯಿಗಳಿಂದ ಸುಮಾರು 5 ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ಮತ್ತೆ ದೇವಸ್ಥಾನದ ಭಂಡಾರದಿಂದ 8 ಕೆ.ಜಿ. ಚಿನ್ನವನ್ನು ಕರಗಿಸಿದ್ದಾರೆ.

ಅಧ್ಯಕ್ಷರು:– ತಾವು ಮಾತನಾಡುವುದಕ್ಕೆ ಶುರುಮಾಡಿ 11 ನಿಮಿಷವಾಯಿತು.

ಶ್ರೀ ಕೆ.ಗೋಪಾಲ್ ಪೂಜಾರಿ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ದೇವಸ್ಥಾನ ಇದಾಗಿದೆ. ದೇವಸ್ಥಾನದ ಹಣವನ್ನು ಹಾಳು ಮಾಡಿದ್ದಾರೆ . . . . .

ಅಧ್ಯಕ್ಷರು:– ದೇವಸ್ಥಾನ ರಾಜ್ಯಕ್ಕೆ ಸಂಬಂಧಪಟ್ಟಿದೆ. ಆದರೆ, ಇಲ್ಲಿರತಕ್ಕಂಥ ಎಲ್ಲರದ್ದೂ ಒಂದೊಂದು ರೀತಿಯ ಸಮಸ್ಯೆ ಇರುತ್ತದೆ. ಆದ್ದರಿಂದ ಅವರಿಗೂ ಕೂಡ ನಾನು ಅವಕಾಶ ಕೊಡಬೇಕು. ಅದ್ದರಿಂದ, ತಾವು ಇನ್ನು ಒಂದು ನಿಮಿಷದಲ್ಲಿ ತಮ್ಮ ಮಾತನ್ನು ದಯಮಾಡಿ ಮುಗಿಸಬೇಕು.

ಶ್ರೀ ಕೆ.ಗೋಪಾಲ್ ಪೂಜಾರಿ:– ಮಾನ್ಯ ಅಧ್ಯಕ್ಷರೆ, ಇದೊಂದು ದೊಡ್ಡ ಹಗರಣವಾಗಿದೆ. ಇದು ಬೆಳಕಿಗೆ ಬರಬೇಕು.

ಅಧ್ಯಕ್ಷರು:– ಈಗಾಗಲೇ ಸದರಿ ವಿಷಯವನ್ನು ಪ್ರಸ್ತಾಪ ಮಾಡಿದ್ದೀವಿ. ಮತ್ತೆ ಇದಕ್ಕೆ ಸಂಬಂಧಪಟ್ಟಂಥ ಮಾಹಿತಿಗಳನ್ನು ಸಂಬಂಧಪಟ್ಟಂಥ ಸಚಿವರಿಗೆ ಕೊಟ್ಟು ಇದರ ಬಗ್ಗೆ ಒಂದು ತನಿಖೆ ಮಾಡಿಸಿ. ದಯವಿಟ್ಟು ಇನ್ನೊಂದು ನಿಮಿಷದಲ್ಲಿ ಮುಗಿಸಿ.

ಶ್ರೀ ಕೆ.ಗೋಪಾಲ್ ಪೂಜಾರಿ:– ಮಾನ್ಯ ಅಧ್ಯಕ್ಷರೆ, ನಾನು ಬೇಗ ಮಾತನಾಡಿ ಮುಗಿಸುತ್ತೇನೆ. ಚಿನ್ನದ ರಥಕ್ಕೆ ಕೊಟ್ಟಿರತಕ್ಕಂಥ ಐದು ಕೋಟಿ ರೂಪಾಯಿಗಳ ಹಣ ದುರುಪಯೋಗವಾಗಿದೆ. ಮತ್ತೆ ಈ ಚಿನ್ನದ ರಥಕ್ಕೆ 24 ಅಥವಾ 18 ಕ್ಯಾರೆಟ್ ಮಟ್ಟದ ಚಿನ್ನವನ್ನು ಉಪಯೋಗ ಮಾಡಿದ್ದಾರೆಂಬ ಬಗ್ಗೆ ತನಿಖೆ ಆಗಬೇಕು. ಎರಡನೇ ವಿಷಯ ಏನೆಂದರೆ, ಇವರು ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳ ಬೇಕಾದರೆ ಸರ್ಕಾರದ ಒಂದು ನೀತಿ ಇದೆ. ಇವತ್ತಿನ ದಿವಸ ಏಕರೂಪದ ಶಾಸನ ಬಂದಿದೆ. ಈ ಏಕರೂಪ ಶಾಸನ ಜಾರಿಗೆ ಬಂದಾಗ ಈಗ ಇರತಕ್ಕಂಥ ಕಮಿಷನರ್‌ರವರು ಒಂದು ಆದೇಶವನ್ನು ಹೊರಡಿಸಿ ದೈನಂದಿನ ಚಟುವಟಿಕೆಗೆ ದೇವಸ್ಥಾನದ ಹಣವನ್ನು ಉಪಯೋಗ ಮಾಡಬೇಕೇ ವಿನಃ ಯಾವುದೇ ದೊಡ್ಡ ಮೊತ್ತದ ವೆಚ್ಚವನ್ನು ಯಾವುದೇ

ರೀತಿಯಲ್ಲಿ ಮಾಡಬಾರದೆಂದು ಆದೇಶ ಮಾಡಿದ್ದಾರೆ. ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಹೈಕೋರ್ಟ್ ಒಂದು ತೀರ್ಪುಕೊಟ್ಟಿದೆ. ಈ ಒಂದು ತೀರ್ಪಿನ ಪ್ರಕಾರ ಆ ಆದೇಶವನ್ನು ಕೊಟ್ಟಿದ್ದಾರೆ. ಯಾವುದೇ ದೊಡ್ಡ ಮೊತ್ತದ ವೆಚ್ಚವನ್ನು ಧಾರ್ಮಿಕದತ್ತಿ ಇಲಾಖೆಯ ಕಾನೂನಿನ ಅಡಿಯಲ್ಲಿ ಬರತಕ್ಕಂಥವುಗಳಿಗೆ ಮಾತ್ರ ಸೀಮಿತವಾಗಿ ಕೊಡಬೇಕೆಂದು ಇರುವಾಗ ಕನ್ನಡ ಸಾಹಿತ್ಯ ಪರಿಷತ್ತಿನ ಒಂದು ಸಮ್ಮೇಳನಕ್ಕೆ ಹಣ ಕೊಡಬೇಕೆಂದು ಬಂದಾಗ, ಅದನ್ನು ಹೈಕೋರ್ಟ್ ರದ್ದು ಮಾಡಿತು. ಈ ಹಣ ಕೊಡಲಿಕ್ಕೆ ಹಕ್ಕಿಲ್ಲವೆಂದು ಆದೇಶ ಮಾಡಿತು. ಇಲ್ಲಿ ಸಾಕಷ್ಟು ಹಣ ದುರುಪಯೋಗವಾಗಿದೆ ಮತ್ತು ಚಿನ್ನದ ರಥಕ್ಕೆ ಎಷ್ಟು ಕ್ಯಾರೆಟ್ ಮಟ್ಟದ ಚಿನ್ನವನ್ನು ಹಾಕಲಾಗಿದೆ ಎಂಬುದೂ ಕೂಡ ತನಿಖೆ ಆಗಬೇಕು. ಈಗ ಇರತಕ್ಕಂಥ ಕಮಿಷನರ್‌ಗೆ ಈ ದೇವಸ್ಥಾನದಿಂದ ಒಂದು ದೊಡ್ಡ ರೀತಿಯ ಕೊಡುಗೆಯನ್ನು ಕೊಡಲಾಗಿದೆ. ಅಂದರೆ ಒಂದು ಬೆಳ್ಳಿಯ ಮಂಟಪವನ್ನು ಇವರಿಗೆ ಕೊಟ್ಟಿದ್ದಾರೆ. ಇದರ ಜೊತೆಗೆ ಕಾನೂನಿನಲ್ಲಿ ಹಣ ಕೊಡುವುದಕ್ಕೆ ಅವಕಾಶ ಇಲ್ಲದೆ ಇದ್ದರೂ ಕೂಡ ಇಲ್ಲಿಂದ ವಿವಿಧ ಜಿಲ್ಲೆಗಳಿಗೆ ಒಂದು ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಇವತ್ತಿನ ದಿವಸ ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರು ದೇವಸ್ಥಾನಗಳನ್ನು ಕಟ್ಟುವುದಕ್ಕೆ ಮನವಿಗಳನ್ನು ಮಾಡಿದ್ದಕ್ಕೆ ಕೇವಲ 5 ಸಾವಿರ ರೂಪಾಯಿ ಹಣವನ್ನು ಕೊಡುವುದಕ್ಕೆ ಅಗದೇ ಇರತಕ್ಕಂಥವರು ಅವರ ಕುರ್ಚಿಯ ರಕ್ಷಣೆಗೋಸ್ಕರ ಬೇರೆ ಬೇರೆ ಜಿಲ್ಲೆಗಳಿಗೆ 3 ಲಕ್ಷ, 10 ಮತ್ತು 20 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಕಾನೂನಿನಲ್ಲಿ ಸಾಧ್ಯವಿದೆಯೇ ಅನೆಗುಂದಿಯಲ್ಲಿರುವ ವಿನಾಯಕ ಟೆಂಪಲ್‌ಗೆ ಒಂದೇ ಒಂದು ರೂಪಾಯಿ ಕೂಡ ಕೊಟ್ಟಿಲ್ಲ. ಅಣ್ಣಾಜಿಪಾಳ ನೇತೃತ್ವದ ಅಂಬಲಿಪಾಡಿ ದೇವಸ್ಥಾನಕ್ಕೆ ಒಂದು ರೂಪಾಯಿ ಕೊಟ್ಟಿಲ್ಲ. ಆದರೆ ಈ ಧಾರ್ಮಿಕದತ್ತಿ ಇಲಾಖೆ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ಪ್ರತ್ಯೇಕವಾದ ಕಾನೂನನ್ನು ತಂದಿದೆ. ಈ ಚಿನ್ನದ ರಥಕ್ಕೆ ಸಂಬಂಧಪಟ್ಟಂತೆ ಸರಿಯಾದ ರೀತಿಯಲ್ಲಿ ತನಿಖೆ ಆಗಬೇಕು. ಈಗ ಅಲ್ಲಿರತಕ್ಕಂಥ ಆಡಳಿತ ಮಂಡಳಿಯನ್ನು ಅಮಾನತ್ತಿನಲ್ಲಿಟ್ಟು, ಇದರ ಬಗ್ಗೆ ಸೂಕ್ತವಾದ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ ಮಾಡುತ್ತಾ, ಇದರ ಬಗ್ಗೆ ತನಿಖೆ ಆಗಬೇಕೆಂದು ಒತ್ತಾಯ ಮಾಡುತ್ತಾ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇವೆ.

ಶ್ರೀ ಎ.ಪಾಪರೆಡ್ಡಿ(ರಾಯಚೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ನನ್ನನ್ನು ಆಹ್ವಾನಿಸಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಾನು ನನ್ನ ಕ್ಷೇತ್ರ ಹಾಗೂ ಜಿಲ್ಲೆಯ ಬಗ್ಗೆ ಮಾತನಾಡಲು ಇಚ್ಛೆ ಪಡುತ್ತಿದ್ದೇನೆ. ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗೆ ವರದಾನವಾಗಿರತಕ್ಕಂಥ ತುಂಗಭದ್ರಾ ಡ್ಯಾಂನ ಎಡದಂಡೆ ಕಾಲುವೆ ಬರುತ್ತಿದೆ, ಆ ಕಾಲುವೆ ಕಳೆದ 10 ವರ್ಷಗಳಿಂದ ರಿಪೇರಿಯಾಗಲಿಲ್ಲ. ಅದರ ರಿಪೇರಿ ಸಲುವಾಗಿ ಎರಡು ಪಕ್ಷಗಳಾದ ಜನತಾದಳ ಮತ್ತು ಕಾಂಗ್ರೆಸ್‌ನವರು ಚುನಾವಣೆಯಲ್ಲಿ ಆರಿಸಿಬಂದರೆ ಅದನ್ನು ಸಂಪೂರ್ಣವಾಗಿ ದುರಸ್ತಿ ಮಾಡಿಸುತ್ತೇವೆಂದು ಹೇಳಿಕೊಂಡು ಬಂದಿರುತ್ತಾರೆ. ಸರ್ಕಾರ ಬಂದು 8 ತಿಂಗಳಾದರೂ ಆ ಕಾಲುವೆ ರಿಪೇರಿ ಸಲುವಾಗಿ ಏನೂ ಕೆಲಸವಾಗಲಿಲ್ಲ. 9 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಕೇವಲ 3 ಕೋಟಿ ರೂ.ಗಳನ್ನು ಮಾತ್ರ ಕೊಟ್ಟಿದ್ದಾರೆ. ಆ ಕಾರಣದಿಂದ ಕಾಲುವೆಯ ಕೆಳಗಡೆ ಇರುವಂಥ ರೈತರಿಗೆ ಬಹಳ ತೊಂದರೆಯಾಗುತ್ತಿದೆ.

ಶ್ರೀ ಎಸ್.ಭೋಸರಾಜು: ಮಾನ್ಯ ಅಧ್ಯಕ್ಷರೆ, 3 ಕೋಟಿ ರೂ.ಅಲ್ಲಾ ಸ್ವಾಮಿ 9 ಕೋಟಿ ರೂ.ಗಳ ಕೆಲಸ ಮಾಡಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ: ಅವರು ಹೊಸದಾಗಿ ಆರಿಸಿ ಬಂದಿರುವ ಶಾಸಕರು, ಅವರು ಮಾತನಾಡಲಿ ಬಿಡಿ.

(ಗೊಂದಲ)

ಶ್ರೀ ಎ.ಪಾಪರೆಡ್ಡಿ: ಮಾನ್ಯ ಅಧ್ಯಕ್ಷರೆ, ದಯಮಾಡಿ ನಾನು ಹೇಳುತ್ತೇನೆ, ತಾವು ಕುಳಿತುಕೊಳ್ಳಿ, 9 ಕೋಟಿ ರೂ.ಗಳನ್ನು ಖರ್ಚು ಮಾಡುವ ಆ ಕಾಲುವೆಗೆ 3 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಆ ಕಾಲುವೆ ಸಂಪೂರ್ಣವಾಗಿ ದುರಸ್ಥಿಯಾಗಬೇಕಾಗಿದೆ. ಕೆಳಭಾಗದ ರೈತರಿಗೆ ಒಂದು ಸಲ ನೀರೇ ಬರಲಿಲ್ಲ, ಏಕೆಂದರೆ ಕಾಲುವೆಗೆ ಹೆಚ್ಚಿನ ನೀರನ್ನು ಬಿಟ್ಟರೆ ಕಾಲುವೆ ಒಡೆದು ಹೋಗುತ್ತದೆ, ಎಲ್ಲಾ ಜನರಿಗೆ ನೀರು ಸಿಗುವುದಿಲ್ಲವೆನ್ನುವ ಒಂದು ಕಾರಣದಿಂದ ಕೆಳಭಾಗದ ರೈತರಿಗೆ ನೀರು ಬಿಡದಿದ್ದರಿಂದ ನೀರು ಸಿಗಲಿಲ್ಲ. ಆ ಕಾರಣದಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಈ ಸಲವಾದರೂ 200 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ಅದು ಸಂಪೂರ್ಣವಾಗಿ ರಿಪೇರಿಯಾಗಬೇಕೆಂದು ನಾನು ತಮ್ಮ ಮೂಲಕವಾಗಿ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಅದೇ ಪ್ರಕಾರವಾಗಿ ಕೃಷ್ಣ ಬಲದಂಡೆ ಕಾಲುವೆ 95 ಕಿ.ಮೀ. ಮಾತ್ರ ಕೆಲಸವಾಗಿದೆ ಅದು 157 ಕಿ.ಮೀ.ವರೆಗೆ ಕೆಲಸವಾಗಬೇಕಾಗಿತ್ತು. ಜಾತ್ಯಾತೀತ ಜನತಾ ದಳದವರು ನಾವು ಆರಿಸಿಬಂದರೆ 157 ಕಿ.ಮೀ. ವರೆಗೆ ಕಾಲುವೆ ಕೆಲಸ ಮಾಡಿಸುತ್ತೇವೆಂದು ಹೇಳಿದ್ದರು. ಸರ್ಕಾರ ಅಧಿಕಾರಕ್ಕೆ ಬಂದು 8 ತಿಂಗಳಾದರೂ ಇದುವರೆಗೆ ಆ ಕೆಲಸವನ್ನು ಕೈಗೆತ್ತಿಕೊಳ್ಳಲಿಲ್ಲ. ಬರಗಾಲಕ್ಕೆ ತುತ್ತಾದ ಪ್ರದೇಶದಲ್ಲಿ 157 ಕಿ.ಮೀ.ವರೆಗೆ ಕಾಲುವೆಯನ್ನು ಮಾಡಿದರೆ ಆ ಭಾಗದ ರೈತರಿಗೆ ಅನುಕೂಲವಾಗುತ್ತದೆ. ಆ ಕಾರಣದಿಂದ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ ಈ ಕೆಲಸಗಳನ್ನು ಕೂಡಲೇ ಪ್ರಾರಂಭ ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಆಂಧ್ರಪ್ರದೇಶ ಸರ್ಕಾರ ಜುರಾಲಾ ಅಣೆಕಟ್ಟನ್ನು ಕಟ್ಟಿದ್ದರಿಂದ ಆ ಹಿನ್ನೀರಿನಿಂದ 5 ಹಳ್ಳಿಗಳು ಮುಳುಗಡೆಯಾಗಿವೆ. ಅಲ್ಲಿ 1996 ರಿಂದ ನೀರನ್ನು ನಿಲ್ಲಿಸಿದ್ದಾರೆ. ಆಂಧ್ರಪ್ರದೇಶದವರು ನೀರನ್ನು ನಿಲ್ಲಿಸಿ ನೀರಾವರಿಗೆ ಉಪಯೋಗ ಮಾಡುತ್ತಿದ್ದಾರೆ. ಈ 5 ಹಳ್ಳಿಗಳನ್ನು ಪುನರ್ವಸತಿ ಕಾರ್ಯವನ್ನು ಕೈಗೊಳ್ಳಲಿಲ್ಲ. ಆ ಹಿನ್ನೀರಿನಿಂದ ಎರಡು ಪವಿತ್ರವಾದ ದೇವಸ್ಥಾನಗಳು ಮುಳುಗಡೆಯಾಗಿವೆ. 1978ರಲ್ಲಿ ಆ ದೇವಸ್ಥಾನಗಳಿಗೆ ಹೋಗಲಿಕ್ಕೆ ಬ್ರಿಡ್ಜ್‌ನ್ನು ಕಟ್ಟಿಕೊಡುತ್ತೇವೆಂದು ಆಂಧ್ರ ಸರ್ಕಾರದ ವತಿಯಿಂದ ಅಗ್ರಿಮೆಂಟ್ ಆಗಿದೆ, ಆದರೂ ನೀರನ್ನು ನಿಲ್ಲಿಸಿ 8 ವರ್ಷವಾಯಿತು, ನೀರನ್ನು ಅವರು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ, ಈ ದೇವಸ್ಥಾನಗೆ ಹೋಗಲಿಕ್ಕೆ ಬ್ರಿಡ್ಜ್‌ನ್ನು ಕಟ್ಟಿಕೊಡಲಿಲ್ಲ, ಆ ದೇವಸ್ಥಾನಗಳಿಗೆ ಪ್ರೊಟೆಕ್ಷನ್ ವಾಲ್ ಕೂಡ ಕಟ್ಟಲಿಲ್ಲ. ಆಂಧ್ರಪ್ರದೇಶ ಸರ್ಕಾರದವರು 78 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಅಂಕಿತವನ್ನು ಹಾಕಿರುತ್ತಾರೆ. ಆ ಹಣವನ್ನು ತೆಗೆದುಕೊಂಡು ಬಂದು ಈ 5 ಹಳ್ಳಿಗಳನ್ನು ಪುನರ್ವಸತಿ ಮಾಡಬೇಕಾಯಿತು. ಆ ದೇವಸ್ಥಾನಗಳಿಗೆ ಹೋಗಲು ಬ್ರಿಡ್ಜ್‌ಗಳನ್ನು ಕಟ್ಟಬೇಕಾಗಿತ್ತು, ಆದರೆ ಇಲ್ಲಿಯವರೆಗೆ ಕಾರ್ಯಕ್ರಮವನ್ನು ಪ್ರಾರಂಭ ಮಾಡಲಿಲ್ಲ. ಅಲ್ಲಿ ಹಳ್ಳಿಗಳು ಮುಳುಗಡೆಯಾಗಿರುವುದರಿಂದ ರೈತರಿಗೆ ತೊಂದರೆಯಾಯಿತು. ಆ ನದಿಯನ್ನು ಧಾಟಿ ಹಳ್ಳಿಗಳವರು ಬೇರೆ ಕಡೆ ಬರಲು ಅನುಕೂಲವನ್ನು ಮಾಡಿಕೊಡಲಿಲ್ಲ. ಆ ಕಾರಣದಿಂದ ಸರ್ಕಾರ ಆಂಧ್ರ ಪ್ರದೇಶ ಸರ್ಕಾರಕ್ಕೆ ಒತ್ತಡವನ್ನು ಹಾಕಿ ತಕ್ಷಣ ಹಣವನ್ನು ತೆಗೆದುಕೊಂಡು ಬಂದು ಈ ಹಳ್ಳಿಗಳಿಗೆ ಪುನರ್ವಸತಿಯನ್ನು ಕಲ್ಪಿಸಿಕೊಡಬೇಕು, ಆ

ದೇವಸ್ಥಾನಗಳಿಗೆ ಬ್ರಿಡ್ಜ್‌ನ್ನು ಕಟ್ಟಿಸಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ರಾಯಚೂರಿನಲ್ಲಿ 1470 ಮೆಗ್ಯಾವಾಟ್ ವಿದ್ಯುತ್ ಉತ್ಪಾದನೆ ಮಾಡತಕ್ಕಂಥ ಒಂದು ಬೃಹತ್ ಥರ್ಮಲ್ ಪ್ಲಾಂಟ್ ಇದೆ, ಆ ಥರ್ಮಲ್ ಪ್ಲಾಂಟ್‌ನವರು 3 ಸಾವಿರ ಎಕರೆ ಜಮೀನನ್ನು ಅಕ್ವಾಯರ್ ಮಾಡಿಕೊಂಡರು, ಅದು ಅಭಿವೃದ್ಧಿಯಾಯಿತು. ಅದ್ದರಿಂದ ಏರ್ ಪೊಲ್ಯೂಷನ್ ಮತ್ತು ವಾಟರ್ ಪೊಲ್ಯೂಷನ್ ಆಯಿತು, ಇದರಿಂದ 41^0 ಸೆಂಟಿಗ್ರೇಡ್ ಇದ್ದ ಉಷ್ಣಾಂಶ 45^0 ಸೆಂಟಿಗ್ರೇಡ್‌ಗೆ ಹೋಯಿತು. ನಮ್ಮ ರೈತರಿಗೆ ಕರೆಂಟ್ ಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟು ಈಗ ಸರಿಯಾಗಿ ಕರೆಂಟ್ ಕೊಡುವಂಥ ವ್ಯವಸ್ಥೆ ಆಗಿಲ್ಲ. ನಮ್ಮ ಕೋರಿಕೆ ಏನೆಂದರೆ, ಕಷ್ಟಕರ ಪರಿಸ್ಥಿತಿಯಲ್ಲಿರುವ ನಮ್ಮ ರೈತರಿಗೆ ಕರೆಂಟ್‌ನ್ನು ಸತತವಾಗಿ 24 ಗಂಟೆಗಳ ಕಾಲ ಕೊಡುವ ಪ್ರಯತ್ನ ಮಾಡಬೇಕು. 24 ಗಂಟೆಗಳ ಕಾಲ ರೈತರಿಗೆ ವಿದ್ಯುತ್ತ್‌ನ್ನು ಸರ್ಕಾರ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಒಂದು ಸಾವಿರ ಎಕರೆ ಜಮೀನು ನಮ್ಮ ಕ್ಷೇತ್ರಕ್ಕೆ ಗ್ರೋಥ್ ಸೆಂಟರ್ ಸಲುವಾಗಿ ಬಂದಿದೆ. ಆ ಜಮೀನನ್ನು ಸರ್ಕಾರ ಅಕ್ವಾಯರ್ ಮಾಡಿಕೊಂಡು 10 ವರ್ಷವಾಯಿತು, ಅಲ್ಲಿ ಅಭಿವೃದ್ಧಿ ಕೂಡ ಆಯಿತು. ಅಲ್ಲಿದ್ದಂಥ ರೈತರುಗಳು ತಮ್ಮ ಹೊಲಗಳನ್ನು ಬಿಟ್ಟುಕೊಟ್ಟರು. ಅಲ್ಲಿ ನಮ್ಮ ಮಕ್ಕಳಿಗೆ ಉದ್ಯೋಗ ಸಿಗುತ್ತದೆ, ನಮಗೆ ಆ ಒಂದು ಅವಕಾಶ ಸಿಗುತ್ತದೆ, ಯುವಕರಿಗೆ ಒಂದು ಆಶಾಕಿರಣ ಆಗಿತ್ತು, ಆದರೆ ಸರ್ಕಾರದ ಯಾವುದೇ ಒಂದು ಬೃಹತ್ ಕಂಪನಿಯಾಗಲಿ, ಕಾರ್ಖಾನೆಯಾಗಲಿ ಬರಲೇ ಇಲ್ಲ. ನಮ್ಮ ಮಾನ್ಯ ಇಂಡಸ್ಟ್ರೀಸ್ ಮಿನಿಸ್ಟರ್ ಹೇಳಿದರು, 500 ಕೋಟಿ ರೂ.ಗಳಲ್ಲಿ ಒಂದು ಸ್ಟೀಲ್‌ಪ್ಲಾಂಟ್ ಬರುತ್ತಿದೆ ಎಂದು ಹೇಳಿದರು. ದಯಮಾಡಿ ನಮ್ಮ ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಅದೇ ಪ್ರಕಾರ ನಮ್ಮ ಕ್ಷೇತ್ರದಲ್ಲಿ ಸಿವಿಲ್ ಆಸ್ಪತ್ರೆ ಇದೆ, ಶಿಕ್ಷಣ ಕ್ಷೇತ್ರಗಳು ಇವೆ. ಪ್ರೈವೇಟ್‌ನವರೇ ಇವತ್ತು ಎಲ್ಲಾ ಕಡೆ ಸಂಸ್ಥೆಗಳನ್ನು ಓಪನ್ ಮಾಡುತ್ತಾರೆ, ಸರ್ಕಾರದ ವತಿಯಿಂದ ನಮ್ಮ ರಾಯಚೂರು ಜಿಲ್ಲೆಯಲ್ಲಿ ಡಿಗ್ರಿ ಕಾಲೇಜ್ ಇರುವುದಿಲ್ಲ. ಇಲ್ಲಿಯವರೆಗೆ ಯಾವುದೇ ಡಿಗ್ರಿ ಕಾಲೇಜ್ ಶುರುವಾಗಿರುವುದಿಲ್ಲ. ಪ್ರೈವೇಟ್‌ನವರೇ ಹೆಚ್ಚು ಎಜುಕೇಷನಲ್ ಇನ್‌ಸ್ಟಿಟ್ಯೂಟ್‌ಗಳನ್ನು ರನ್ ಮಾಡುತ್ತಿದ್ದಾರೆ. ಈ ಸರ್ಕಾರದ ಕಾನೂನಿನ ಪ್ರಕಾರ ಇವತ್ತು 50 ಪರ್ಸೆಂಟ್ ಜನ ಪ್ರತಿಯೊಂದು ವಿದ್ಯಾ ಕ್ಷೇತ್ರದಲ್ಲಿ ರಿಟೈರ್ಡ್ ಆಗುತ್ತಿದ್ದಾರೆ. ಮತ್ತೆ ಹೊಸದಾಗಿ ಶಿಕ್ಷಕರುಗಳನ್ನು ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಅನುಮತಿ ಕೊಡುತ್ತಿಲ್ಲ. ಆ ಕಾರಣದಿಂದ ಅಲ್ಲಿ ಶಿಕ್ಷಕರುಗಳು ಇಲ್ಲದೆ ಪ್ರೈವೇಟ್ ಸ್ಕೂಲ್‌ಗಳು ಕೊರಗುತ್ತಿವೆ. ವಿದ್ಯಾಭ್ಯಾಸವನ್ನು ಸರ್ಕಾರವೂ ಕೊಡುತ್ತಿಲ್ಲ, ಪ್ರೈವೇಟ್‌ನವರಿಗೂ ಕೂಡ ಅನುಕೂಲವನ್ನು ಮಾಡಿಕೊಡುತ್ತಿಲ್ಲ. ಇವತ್ತು ಪ್ರೈವೇಟ್‌ನವರು ಸ್ಕೂಲ್‌ಗಳನ್ನು ಓಪನ್ ಮಾಡಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುತ್ತಿದ್ದಾರೆ. ಶಿಕ್ಷಣವನ್ನು ಪಡೆದುಕೊಳ್ಳಲು ಸರ್ಕಾರ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತಿದ್ದೇನೆ. ನಮ್ಮ ಕ್ಷೇತ್ರದಲ್ಲಿ ಓಮ್ ಶ್ರೀ ಕಾಟನ್‌ಸೀಡ್ಸ್ ಅನ್ನು ಪ್ರೈವೇಟ್ ಏಜೆಂಟರು ರೈತರಿಗೆ ಮಾರಾಟ ಮಾಡಿದ್ದಾರೆ, ಆ ರೈತರು ತೆಗೆದುಕೊಂಡು ಹೋಗಿ ಅದನ್ನು ಸಾವಿರಾರು ಎಕರೆ ಜಮೀನುಗಳಲ್ಲಿ ಬಿತ್ತಿದ್ದಾರೆ, ಗಿಡಗಳೂ ಕೂಡ ದೊಡ್ಡವು ಅದವು, ಆದರೆ ಯಾವುದೇ ಫಲ ಮಾತ್ರ ಬರಲಿಲ್ಲ. ಹತ್ತಿಯೂ ಕೂಡ ಬರಲಿಲ್ಲ. ಆ ಒಂದು ಅವಾಂತರದಿಂದ ರೈತರಿಗೆ 20 ಕೋಟಿ ರೂ.ಗಳಷ್ಟು

ನಷ್ಟವಾಗಿದೆ. ಆ ರೈತರಿಗೆ ಯಾವ ಪ್ರೈವೇಟ್ ಏಜೆಂಟರು ಎಲ್ಲಿಂದಲೋ ತಂದು ಓಮ್ ತ್ರೀ ಕಾಟನ್‌ಸೀಡ್ಸ್‌ನ್ನು ಸಪ್ಲೈ ಮಾಡಿ ರೈತರಿಗೆ ಯಾರು ಅನ್ಯಾಯವನ್ನು ಮಾಡಿದ್ದಾರೆ, ರೈತರಿಗೆ ಮೋಸವನ್ನು ಮಾಡಿದ್ದಾರೆ, ಇಂತಹವರ ಮೇಲೆ ಕೇಸನ್ನು ಹಾಕಿ ರೈತರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ ಅವರಿಗೆ ಹಣವನ್ನು ವಾಪಸ್ಸು ಕೊಡಿಸಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ. ಆ ಕಾರಣದಿಂದ ಈ ಎಲ್ಲಾ ಸಮಸ್ಯೆಗಳು ಇವೆ, ರಾಯಚೂರು ಬಡತನದಿಂದ ಕೂಡಿದ ಒಂದು ಕ್ಷೇತ್ರ, ಅಲ್ಲಿ ಒಂದು ಬೃಹತ್ ಏತ ನೀರಾವರಿ ಆಗಬೇಕೆಂದು ಸರ್ಕಾರದ ಮುಂದೆ ಪ್ರಸ್ತಾವನೆ ಇದೆ, ಆ ಏತನೀರಾವರಿ ಬಂದರೆ 62 ಹಳ್ಳಿಗಳಿಗೆ ಮತ್ತು ಒಂದು ಲಕ್ಷ ಎಕರೆ ಜಮೀನಿಗೆ ನೀರಾವರಿಯಾಗುವ ಒಂದು ಯೋಜನೆ ಇದೆ. ಸರ್ಕಾರ ತಕ್ಷಣವೇ ಆ ಒಂದು ಯೋಜನೆಯನ್ನು ಕಾರ್ಯಗತಗೊಳಿಸಿ ಅದನ್ನು ಪ್ರಾರಂಭ ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ(ಬ್ಯಾಡಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ವಂದಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ. ಈ ನಿಟ್ಟಿನಲ್ಲಿ ನನ್ನ ಸರ್ಕಾರ ಅತ್ಯುತ್ತಮವಾದಂತಹ ಕೆಲಸವನ್ನು ನಿರ್ವಹಣೆ ಮಾಡುತ್ತಿದೆ ಎನ್ನುವಂತಹ ಮಾತುಗಳನ್ನು ಹೇಳುತ್ತಾರೆ. ಆ ನಿಟ್ಟಿನಲ್ಲಿ ಇವತ್ತಿನ ನೀರಿನ ಸಮಸ್ಯೆಯ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಅನೇಕ ಮಾನ್ಯ ಸದಸ್ಯರು ಅದರ ಬಗ್ಗೆ ಚರ್ಚೆಯನ್ನು ಮಾಡಿದ್ದಾರೆ. ಆ ಚರ್ಚೆಯಲ್ಲಿ ನೀರಿನ ಸಮಸ್ಯೆಯು ಅಗಾದವಾದಂತಹ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಪ್ರತಿವರ್ಷವೂ ಇದು ಜನವರಿ ತಿಂಗಳಿನಿಂದ ಪ್ರಾರಂಭವಾಗುತ್ತದೆ. ಪ್ರತಿ ಪಂಚಾಯಿತಿಯ ಮಟ್ಟದಲ್ಲಿ, ಪ್ರತಿ ಹಳ್ಳಿಗಳ ಮಟ್ಟದಿಂದ ಹಿಡಿದು ಶಹರ ಮಟ್ಟದಲ್ಲಿಯೂ ಸಹ ನೀರಿನ ಸಮಸ್ಯೆ ಇದೆ. ಈ ನೀರಿನ ಸಮಸ್ಯೆಯು ಬಾರದ ಹಾಗೆ ನೋಡಿಕೊಳ್ಳುವ ಬಗ್ಗೆ ಸಾಧ್ಯವಾಗುವುದಿಲ್ಲವೆ? ಏಕೆ ಇದರ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡುತ್ತಿಲ್ಲ? ಹಳೆಯ ಪದ್ಧತಿಯಂತೆ ಬೋರಿನ ಮೇಲೆ ಬೋರನ್ನು ಹಾಕುವುದು, ಹೀಗಾಗಿ ಪ್ರತಿ ಹಳ್ಳಿಗಳಲ್ಲಿ ಸುಮಾರು 50 ರಿಂದ ಹಿಡಿದು 100 ಬೋರ್‌ಗಳನ್ನು ಕೊರೆಯಲಾಗಿದೆ. ಕೆಲವು ಬೋರ್‌ಗಳಲ್ಲಿ ನೀರು ಬೀಳುತ್ತಿದೆ, ಕೆಲವು ಬೋರ್‌ಗಳಲ್ಲಿ ನೀರು 7–8 ದಿನಗಳಲ್ಲಿ ಮಾಯವಾಗುತ್ತಿದೆ. ಏಕೆಂದರೆ ಸರ್ಕಾರವೇ ಹೇಳಿದೆ, ಇದು ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಅಂತರ್‌ಜಲದ ಮಟ್ಟ ಕುಸಿದಿದೆ, ಅದು ಬಹಳ ಆಳಕ್ಕೆ ಹೋಗಿರುವುದರಿಂದ ನೀರನ ಸಮಸ್ಯೆಯಾಗಿದೆ. ಇದಕ್ಕಾಗಿ ಬದಲಿ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು? ಎಲ್ಲೆಲ್ಲಿ ನದಿಗಳು ಹರಿದಿವೆ, ಆ ನದಿಗಳಿಂದ ನೀರನ್ನು ತೆಗೆದು ಸಾಮೂಹಿಕವಾಗಿ ಹಳ್ಳಿಗಳಿಗೆ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ಏತಕ್ಕಾಗಿ ಮಾಡಬಾರದು? ಆ ವ್ಯವಸ್ಥೆಯನ್ನು ಎಲ್ಲಿಯವರೆಗೆ ಮಾಡುವುದಿಲ್ಲವೋ ಅಲ್ಲಿಯವರೆಗೆ ನಿರಂತರವಾದಂತಹ ನೀರಿನ ಸಮಸ್ಯೆ ಈ ರಾಜ್ಯದಲ್ಲಿ ಮುಂದುವರಿಯುತ್ತಲಿರುತ್ತದೆ. ಆ ನಿಟ್ಟಿನಲ್ಲಿ ಇವತ್ತು ಸರ್ಕಾರ ಗಮನವನ್ನು ಹರಿಸಬೇಕು. ಸಾಮೂಹಿಕ ಹಳ್ಳಿಗಳಿಗೆ ನೀರನ್ನು ಕೊಡುವಂತಹ ಯೋಜನೆಯನ್ನು ರೂಪಿಸಬೇಕೇ ಹೊರತು ಬೋರಿನ ಮೇಲೆ ಬೋರ್ ಹೊಡೆಸುವುದು ಸರಿಯಾದಂತಹ ಕ್ರಮವಲ್ಲ. ಪ್ರತಿ ವರ್ಷ ಇದನ್ನು

ಸಾಲ್ವ್ ಮಾಡುವಂತಹದ್ದು ಬೋರ್ ಹೊಡೆಸುವ ಸಲುವಾಗಿ ಕೋಟ್ಯಾಂತರ ರೂಪಾಯಿಗಳನ್ನು ಕಳೆದಿದ್ದೇವೆಂದರೆ ಈ ರಾಜ್ಯದಲ್ಲಿ ನಿರಂತರವಾಗಿ ಸಮಸ್ಯೆಗಳು ಉಳಿಯುತ್ತವೆಯೇ ಹೊರತು, ಸಮಸ್ಯೆಯನ್ನು ನೀಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆ ನಿಟ್ಟಿನಲ್ಲಿ ಇವತ್ತಿನದಿವಸ ನನ್ನ ಕ್ಷೇತ್ರದಲ್ಲಿ ಬೈರನಪಾದ ಹಾಗೂ ಕುದುರೆಹಾಳದಿಂದ ನೀರನ್ನು ಎತ್ತಿ 45 ಹಳ್ಳಿಗಳಿಗೆ ಕೊಡುವಂತಹ ವ್ಯವಸ್ಥೆಯಾಗಿದೆ. ಇನ್ನೂ ಕೆಲವು ಹಳ್ಳಿಗಳಿಗೆ ನೀರು ಕೊಡುವುದರ ಬಗ್ಗೆ ನಾನು ಮನವಿಯನ್ನು ಸಲ್ಲಿಸಿದ್ದೇನೆ. ಆರ್‌ಡಿಪಿಆರ್.ಸೆಕ್ರೆಟರಿಯವರು ಹಾಗೂ ಡೈರೆಕ್ಟರ್‌ರವರು ಆ ವಿಚಾರವಾಗಿ ಚರ್ಚೆಯನ್ನು ಕೂಡ ಮಾಡಿದ್ದೇನೆ. ಸುಮಾರು 6 ತಿಂಗಳಿಂದ ಅವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಅವರು ಒತ್ತಾಸೆಯನ್ನು ಮಾಡುತ್ತಿಲ್ಲ. ಕಾರಣ ಏನೆಂಬುದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಸುಮಾರು 35 ಹಳ್ಳಿಗಳಿಗೆ ನೀರನ್ನು ಕೊಡುವಂತಹ ಯೋಜನೆಯ ಸಲುವಾಗಿ ಈಗಾಗಲೇ ಲೈನ್‌ಎಸ್ಟಿಮೇಟ್ ಆಗಿ ಸುಮಾರು 23 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಇದು ತಯಾರಾಗಿದೆ. ಅಷ್ಟು ಹಣವನ್ನು ಖರ್ಚು ಮಾಡಿದರೆ ನಿರಂತರವಾಗಿ ಆ ಸಮಸ್ಯೆಯೂ ಬಗೆಹರಿಯುತ್ತದೆ. ಅದರ ಜೊತೆಗೆ ಇನ್ನೊಂದು ಮಾತನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇವತ್ತು ಬ್ಯಾಡಗಿ ಕ್ಷೇತ್ರ ಏನಾಗಿದೆ ಎಂದರೆ, ಅದು ಭೌಗೋಳಿಕವಾಗಿ ಎತ್ತರ ಪ್ರದೇಶದಲ್ಲಿದೆ, ಅದು ಎತ್ತರ ಪ್ರದೇಶದಲ್ಲಿರುವಂತಹ ಜಾಗಗಳಲ್ಲಿ ಎಷ್ಟೆ ಬೋರ್ ಹೊಡೆದರೂ ಕೂಡ ನೀರು ಸಿಗುವುದಿಲ್ಲ. ನೀರು ಸಿಗುವುದಿಲ್ಲ ಎನ್ನುವಂತಹ ಸಂದರ್ಭದಲ್ಲಿ ಅಂತಹ ಎತ್ತರ ಪ್ರದೇಶಗಳಲ್ಲಿರುವಂತಹ ಸ್ಥಳಗಳಿಗೆ ನೀರನ್ನು ನದಿಗಳಿಂದ ಎತ್ತಿಕೊಡಬೇಕೇ ವಿನಃ ಬೋರ್‌ಗಳನ್ನು ಕೊರೆಸುವಂತಹ ಕ್ರಮ ಸರಿಯಾದುದಲ್ಲ. ಕೂಡಲೇ ಇವತ್ತಿನದಿವಸ ಆರ್‌ಡಿಪಿಆರ್ ಕಾರ್ಯದರ್ಶಿಗಳು ಅದರ ಬಗ್ಗೆ ಗಮನಹರಿಸಬೇಕು; ಅದರ ಜೊತೆಗೆ ಕೂಡಲೇ ಮುಖ್ಯಮಂತ್ರಿಗಳ ಒಂದು ಒಲವನ್ನು ಪಡೆದು ಅವರಿಂದ ಮನ್ನಣೆಯನ್ನು ಪಡೆದುಕೊಂಡು ಈ ಯೋಜನೆಗೆ ಚಾಲನೆಯನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುಬೇಕೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಾಗಲೇ ಕೆಲವು ಪಟ್ಟಣಗಳಿಗೆ ನೀರನ್ನು ಕೊಡುವಂತಹ ವ್ಯವಸ್ಥೆ ಇದೆ. ಉದಾ: ಬ್ಯಾಡಗಿ ನಗರಕ್ಕೆ ನೀರನ್ನು ಕೊಡುವಂತಹದ್ದು ರಾಣಿಬೆನ್ನೂರಿಗೆ ನೀರನ್ನು ಕೊಡುವುದು, ಅದರ ಜೊತೆಗೆ ಹಾವೇರಿ ನಗರಕ್ಕೆ ನೀರನ್ನು ಕೊಡುವುದು, ನದಿಗಳಲ್ಲಿ ಇವತ್ತಿನದಿವಸ ಜನವರಿಯಿಂದ ನೀರು ಬತ್ತಿಹೋಗುತ್ತಿದೆ. ನೀರು ಬತ್ತಿಹೋಗುವಂತಹ ಸಂದರ್ಭದಲ್ಲಿ ಅಲ್ಲಿ ನೀರೇ ಇರುವುದಿಲ್ಲ. ಅಲ್ಲಿ ನೀರಿಗಾಗಿ ಹಾಹಾಕಾರ ಪ್ರಾರಂಭವಾಗುತ್ತದೆ. ಆ ನಿಟ್ಟಿನಲ್ಲಿ ಶಹರ್‌ಗಳಲ್ಲಿ ಬೋರ್‌ಗಳನ್ನು ಹೊಡೆಯುವಂತಹ ಕೆಲಸ ಪ್ರಾರಂಭವಾಗುತ್ತದೆ. ಅದಕ್ಕಾಗಿ ನಾನು ಮಾನ್ಯ ಕಾರ್ಯದರ್ಶಿಗಳ ಗಮನವನ್ನು ಸೆಳೆದಿದ್ದೇನೆ. ನದಿಗಳಿಗೆ ಬ್ಯಾರೇಜ್‌ನ್ನು ಕಟ್ಟುವಂತಹ ವ್ಯವಸ್ಥೆ ಮಾಡಿ ಅಲ್ಲಿ ನೀರನ್ನು ತಡೆದು, ನೀರನ್ನು ಬೇಸಿಗೆಯಲ್ಲಿ ಶಹರುಗಳಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆನ್ನುವಂತಹ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪವನ್ನು ಮಾಡುತ್ತೇನೆ. ಒಂದು ವೇಳೆ ಆ ರೀತಿಯಾಗಿ ಮಾಡದೆ ಹೋದರೆ ಪುನಃ ಪುನಃ ಪ್ರತಿ ವರ್ಷವೂ ಆ ನೀರಿನ ಸಮಸ್ಯೆಯೂ ಉಲ್ಬಣಗೊಳ್ಳುತ್ತದೆ. ಆ ಸಮಸ್ಯೆಯನ್ನು ನೀಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಬ್ಯಾರೇಜ್ ಕಟ್ಟುವಂತಹ ಕೆಲಸ ಅತ್ಯಂತ ಅವಶ್ಯಕವಾಗಿದೆ. ಅದನ್ನು ಮಾಡಿದರೆ ಆ ಭಾಗದಲ್ಲಿರುವಂತಹ ಎಲ್ಲಾ ಹಳ್ಳಿಗಳ ನೀರಿನ ಸಮಸ್ಯೆಯನ್ನು ನೀಗಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ವಿದ್ಯುತ್ತಿನ ಸಮಸ್ಯೆಯ ಬಗ್ಗೆ ಹೇಳುವುದಾದರೆ, ವಿದ್ಯುತ್ತ್‌ನ ಸಮಸ್ಯೆಯೂ ಶಹರದಲ್ಲಿ ಒಂದು ರೀತಿಯಾದರೆ ಗ್ರಾಮೀಣ ಮಟ್ಟದಲ್ಲಿಯೇ ಒಂದು ರೀತಿಯಿರುತ್ತದೆ. ಶಹರದಲ್ಲಿ ವಿದ್ಯುತ್ ನಿರಂತರವಾಗಿರುತ್ತದೆ. ಗ್ರಾಮೀಣ ಮಟ್ಟದಲ್ಲಿ ವಿದ್ಯುತ್ ನಿರಂತರವಾಗಿ ಇರುವುದಿಲ್ಲ. ನಿರಂತರವಾಗಿ ವಿದ್ಯುತ್ ಹೋಗಿಯೇ ಇರುತ್ತದೆ. ಅಲ್ಲಿ ವಿದ್ಯುತ್ತ್ ಹೋಗಿರುವುದು ಜಾಸ್ತಿಯಾಗಿರುತ್ತದೆ. ವಿದ್ಯುತ್ತ್ ಯಾವ ಹೊತ್ತಿಗೆ ಬರುತ್ತದೆ, ಯಾವಾಗ ಹೋಗುತ್ತದೆ ಎನ್ನುವುದು ಗೊತ್ತೇ ಆಗುವುದಿಲ್ಲ. ಆ ಭಾಗಲದಲ್ಲಿರುವಂತಹ ಗ್ರಾಮೀಣ ಪ್ರದೇಶಗಳಲ್ಲಿರುವ ರೈತರಿಗೆ ಇವತ್ತು ಸಮಸ್ಯೆಯಾಗಿದೆ, ವಿದ್ಯಾರ್ಥಿಗಳಿಗೆ ಸಮಸ್ಯೆಯಗಿದೆ, ಶಾಲೆಯನ್ನು ಬಿಟ್ಟು ಬಂದ ವಿದ್ಯಾರ್ಥಿಗಳಿಗೆ ಸಾಯಂಕಾಲ ವಾಯಿತೆಂದರೆ ಅವರು ಓದಬೇಕೆಂದರೆ ತಕ್ಷಣ ವಿದ್ಯುತ್ತ್ ಮಾಯವಾಗುತ್ತದೆ. ಆಗ ವಿದ್ಯಾರ್ಥಿಗಳು ಓದದೆ ಸುಮ್ಮನೆ ಮನೆಯಲ್ಲಿ ಮಲಗುವಂತಹ ವ್ಯವಸ್ಥೆಯಾಗುತ್ತದೆ. ಇದು ಗ್ರಾಮೀಣ ಪ್ರದೇಶಗಳಲ್ಲಿಯೇ ಒಂದು ರೀತಿಯಿರುತ್ತದೆ, ಶಹರ್‌ಗೆ ಒಂದು ರೀತಿಯಿರುತ್ತದೆ. ಈ ರೀತಿಯಾಗಿ ಬಹಳ ಸಮಸ್ಯೆಯನ್ನು ಉಂಟುಮಾಡುವಂತಹದ್ದು ಆ ನಿಟ್ಟಿನಲ್ಲಿ ಇವತ್ತಿನದಿವಸ ವಿದ್ಯುತ್ತ್ ಮಂತ್ರಿಗಳು ಗಮನವನ್ನು ಹರಿಸಬೇಕು ಕೂಡಲೇ ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ವಿದ್ಯುತ್ತನ್ನು ಕಲ್ಪಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಆ ರೀತಿಯಾಗಿ ಮಾಡಿದರೆ ಇವತ್ತಿನದಿವಸ ಸಮಸ್ಯೆಯನ್ನು ನೀಗಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅದು ಸಾಧ್ಯವಾಗುವುದಿಲ್ಲ. ಲೋಡ್ ಶೆಡ್ಡಿಂಗ್, ಜಾರಿಯಲ್ಲಿದೆ, ಅದು ಜಾರಿಯಲ್ಲಿದ್ದರೂ ಸಹ ವೇಳೆಯನ್ನು ನಿಗದಿ ಮಾಡಿದರು ಸಹಿತ ಆ ವೇಳೆಗೆ ವಿದ್ಯುತ್ತ್ ಬರುವುದಿಲ್ಲ. ಆ ವಿದ್ಯುತ್ತ್ ಬರುತ್ತದೆಂದು ಕಾಯ್ದುಕೊಂಡು ಆ ರೈತರು ಇವತ್ತು ಏನಾಗಿದ್ದಾರೆಂದರೆ ಇವತ್ತು ಯಾವ ವೇಳೆಗೆ ವಿದ್ಯುತ್ತ್ ಬರುತ್ತದೆ, ಯಾವ ಹೊತ್ತಿಗೆ ಬರುವುದಿಲ್ಲ ಎನ್ನುವುದನ್ನು ಅವರು ಯೋಚನೆ ಮಾಡುವುದಕ್ಕೂ ಕೂಡ ಸಾಧ್ಯವಾಗುವುದಿಲ್ಲ, ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಲೋಡ್ ಶೆಡ್ಡಿಂಗ್ ವೇಳೆಯನ್ನು ಏನು ನಿಗದಿ ಮಾಡಿದ್ದಾರೆ, ಆ ವೇಳೆಗೆ ಸರಿಯಾಗಿ ವಿದ್ಯುತ್ತನ್ನು ಅಲ್ಲಿ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಅಧಿಕಾರಿಗಳು ಇವತ್ತಿನ ದಿವಸ ಏನು ಮಾಡುತ್ತಾರೆಂಬುದು ನಮಗೆ ಗೊತ್ತಿಲ್ಲ. ಇವತ್ತು ಇಷ್ಟೊಂದು ಸಮಸ್ಯೆ ಇದ್ದರೂ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಸಹ ಅವರು ಯಾವುದೇ ರೀತಿಯಲ್ಲಿ ಚಿಂತನೆಯನ್ನು ಮಾಡುವುದಿಲ್ಲ. ಆ ನಿಟ್ಟಿನಲ್ಲಿ ಸರ್ಕಾರ ಕೂಡಲೇ ಗಮನವನ್ನು ಹರಿಸಬೇಕು. ಅ ವಿದ್ಯುತ್ತ್ ಸಮಸ್ಯೆಯನ್ನು ನೀಗಿಸುವ ವ್ಯವಸ್ಥೆಯನ್ನು ಮಾಡಬೇಕು.

ಇನ್ನು ಇಂಧನ ಮಂತ್ರಿಗಳು ಸದನದಲ್ಲಿ ಹೇಳಿದ್ದಾರೆ. ಯಾವುದೇ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಕಡಿತ ಮಾಡುವುದಿಲ್ಲವೆಂದು ಹೇಳಿದ್ದಾರೆ. ಆದರೆ ಮಂತ್ರಿಗಳು ಇಲ್ಲಿ ಹೇಳುತ್ತಿರುತ್ತಾರೆ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ರಾಣಿಬೆನ್ನೂರು ತಾಲ್ಲೂಕಿನಲ್ಲಿ ಹರಳಗಿರಿ ಹಾಗೂ ಚೌಡದಾನಪುರ ಈ ಎರಡರಲ್ಲಿ ವಿದ್ಯುತ್ತ್‌ನ್ನು ಸ್ಥಗಿತಗೊಳಿಸಿದ್ದಾರೆ. ರೈತರ ಬಾಕಿಯ ಸಲುವಾಗಿ ವಿದ್ಯುತ್ತ್‌ನ್ನು ಸ್ಥಗಿತಗೊಳಿಸಿದ್ದೇವೆಂದು ಪತ್ರವನ್ನೂ ಸಹಿತ ಕಳುಹಿಸಿಕೊಟ್ಟಿದ್ದಾರೆ. ಇಲ್ಲಿ ಮಂತ್ರಿಗಳು ಈ ರೀತಿಯಾಗಿ ಹೇಳಿಕೆಯನ್ನು ಕೊಡುತ್ತಿದ್ದಾರೆ. ಅಲ್ಲಿ ಅಧಿಕಾರಿಗಳು ಆ ರೀತಿಯಾಗಿ ಕೆಲಸವನ್ನು ಮಾಡುತ್ತಿದ್ದಾರೆ. ಹಾಗಾದರೆ ಮಂತ್ರಿಗಳ ಮಧ್ಯದಲ್ಲಿ ಅಧಿಕಾರಿಗಳ ಮಧ್ಯದಲ್ಲಿ ಸರಿಯಾದಂತಹ ಹೊಂದಾಣಿಕೆ ಇಲ್ಲವೇನೋ ಎಂಬ ಪ್ರಶ್ನೆಯನ್ನು ನಾವು ಮಾಡಬೇಕಾಗುತ್ತದೆ. ಕೂಡಲೇ ಮಂತ್ರಿಗಳು ಅದರ ಬಗ್ಗೆ ಗಮನಹರಿಸಿ ಏನು ಆ ರೈತರ ಬಾಕಿಯ ಸಲುವಾಗಿ ಇವತ್ತಿನದಿವಸ ಅವರು ವಿದ್ಯುತ್ತ್‌ನ್ನು ಬಂದ್ ಮಾಡಿದ್ದಾರೆ, ಅದಕ್ಕೆ ವಿದ್ಯುತ್ತಿನ ಚಾಲನೆಯನ್ನು ಕೊಡಬೇಕೆಂಬ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಇವತ್ತಿನದಿವಸ ಅಕ್ರಮ ಸಕ್ರಮದ ಅಡಿಯಲ್ಲಿ 15 ಸಾವಿರ ರೂಪಾಯಿಗಳನ್ನು ನಿಗದಿಮಾಡಿದ್ದಾರೆ, ಅದಕ್ಕಾಗಿ 15 ಸಾವಿರ ರೂಗಳನ್ನು ನಿಗದಿಮಾಡಿ ಅದಕ್ಕೆ ಇನ್ನುಳಿದಂತಹ ಎಕ್ಸ್‌ಪೆಂಡಿಚರ್‌ಗಳನ್ನು ಮಾಡಿ 5 ಹೆಚ್‌ಪಿ ಮೋಟಾರುಗಳನ್ನು ಹಾಕಬೇಕೆಂದರೆ 21 ಸಾವಿರ ರೂಪಾಯಿಗಳನ್ನು ಕಟ್ಟಬೇಕಾಗುತ್ತದೆ. ಆ ರೇಟ್‌ಗೆ ಹಾಕಬೇಕಾದರೆ 23 ಸಾವಿರ ರೂಪಾಯಿಗಳನ್ನು ಹಾಕಬೇಕಾಗುತ್ತದೆ. 7 ಹೆಚ್‌ಪಿ ಹಾಕಬೇಕಾದರೆ 25 ಸಾವಿರ ರೂಗಳನ್ನು ಕಟ್ಟಬೇಕಾಗುತ್ತದೆ. ಆದರೆ 15 ಸಾವಿರ ರೂಪಾಯಿಗಳನ್ನು ಡೆಫಾಸಿಟ್ ಎಂದು ಏನು ಮಾಡಿದ್ದಾರೆ ಇದು ಬಹಳ ಹೆಚ್ಚಿಗೆ ಆಗುತ್ತದೆ. ಆ 15 ಸಾವಿರ ರೂಪಾಯಿಗಳೆಂದು ಮಾಡಿರುವಂತಹ ಡೆಫಾಸಿಟ್‌ನ್ನು 5 ಸಾವಿರ ರೂಪಾಯಿಗಳಿಗೆ ಇಳಿಸಬೇಕು. ಅದನ್ನು 5 ಸಾವಿರ ರೂ.ಗಳಿಗೆ ಇಳಿಸದೆ ಹೋದರೆ ರೈತರಿಗೆ ಬಹಳ ಸಮಸ್ಯೆಯಾಗುತ್ತದೆ. ಪದೇಪದೇ ಯಾವುದೇ ಕಾರ್ಯಕ್ರಮಗಳಲ್ಲಿ ಸದನದಲ್ಲಿ ಸರ್ಕಾರ ರೈತರ ಪರವಾಗಿದೆ ಎಂದು ಹೇಳುತ್ತಿದ್ದಾರೆ. ರೈತರ ಪರವಾಗಿ ಆಡಳಿತವನ್ನು ಮಾಡುತ್ತಿದ್ದೇವೆಂದು ಮಂತ್ರಿಮಹೋದಯರುಗಳು ಹೇಳುತ್ತಿದ್ದಾರೆ. ಇವತ್ತಿನ ದಿವಸ ಆ ರೈತರ ಪರವಾಗಿ ಇಷ್ಟೊಂದು ಸಮಸ್ಯೆಗಳು ಇವೆ, ಸತತವಾಗಿ 3 ವರ್ಷಗಳ ಕಾಲ ಬರಗಾಲವಿದ್ದರೂ ಸಹಿತ ಅವರು 15 ಸಾವಿರ ರೂಪಾಯಿಗಳನ್ನು ಡೆಫಾಸಿಟ್ ಮಾಡಿರುವುದನ್ನು ಕಂಡರೆ ಇವತ್ತು ಅವರಿಗೆ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಆ ನಿಟ್ಟಿನಲ್ಲಿ ಕೂಡಲೇ ಸರ್ಕಾರ ಗಮನವನ್ನು ಹರಿಸಬೇಕು. 15 ಸಾವಿರ ರೂಪಾಯಿ ಎಂದು ಇರುವುದನ್ನು 5 ಸಾವಿರ ರೂಪಾಯಿಗಳು ಡೆಫಾಸಿಟ್ ಎಂದು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇನ್ನು ರೈತರ ಪರವಾಗಿ ಇವತ್ತಿನದಿವಸ ಸರ್ಕಾರ ಮಾತನಾಡುತ್ತಿದೆ. ಸಾಕಷ್ಟು ಮಾತನ್ನು ಹೇಳಿದೆ, ಬೆಳೆವಿಮೆಯನ್ನು ಕೊಡುತ್ತೇವೆನ್ನುವಂತಹ ಮಾತನ್ನು ಹೇಳುತ್ತಾರೆ. ಸರ್ಕಾರ ರೈತರ ಪರವಾಗಿ ಬಹಳ ಚಿಂತನೆಯನ್ನು ಮಾಡುತ್ತೇವೆನ್ನುವಂತಹ ಮಾತನ್ನು ಹೇಳುತ್ತಾರೆ. ಇವತ್ತಿನದಿವಸ 2002–03ರಲ್ಲಿ ಬ್ಯಾಡಗಿ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಹಳ್ಳಿಗಳಲ್ಲಿ 2002–03ರಲ್ಲಿ ರಾಣಿಬೆನ್ನೂರು ತಾಲ್ಲೂಕಿನ ಬಿದಿರಿ ಗ್ರಾಮೀಣ ಬ್ಯಾಂಕ್‌ನಲ್ಲಿ ಇವತ್ತು 650 ಜನರು ಬೆಳೆ ವಿಮೆಯನ್ನು ಕಟ್ಟಿದ್ದಾರೆ. ಹೋಬಳಿ ಬದಲಾವಣೆಯಾಗಿದೆ ಎನ್ನುವಂತಹ ಒಂದೇ ಒಂದು ಕಾರಣದಿಂದ 2003ರಿಂದ ಇವತ್ತಿನವರೆಗೂ ಬೆಳೆ ವಿಮೆ ಅವರಿಗೆ ಪಾವತಿಯಾಗಿರುವುದಿಲ್ಲ. ಇದರ ಬಗ್ಗೆ ಅನೇಕ ಬಾರಿ ಚರ್ಚೆಯಾಗಿದೆ. ಇದರ ಬಗ್ಗೆ ಅನೇಕ ಮಂತ್ರಿಗಳ ಗಮನವನ್ನು ಸೆಳೆಯಲಾಗಿದೆ. ಅರ್ಜಿಯನ್ನು ಕಳುಹಿಸಲಾಗಿದೆ. ಯಾವುದೇ ಕ್ರಮಗಳೂ ಸಹಿತ ಆಗಿರುವುದಿಲ್ಲ. ಅದರ ಜೊತೆಗೆ ಶಿಡೆನೂರ್ ಬ್ಯಾಂಕಿನಲ್ಲಿ 700 ಜನ ರೈತರು 2002–03ರಲ್ಲಿ ಅವರು ಕಟ್ಟಿದಂತಹ ಬೆಳೆವಿಮೆ ಹಣ ಇವತ್ತು ಅವರಿಗೆ ಮರುಪಾವತಿಯಾಗಿರುವುದಿಲ್ಲ. ಅಲ್ಲಿಯ ಅಧಿಕಾರಿಗಳ ಒಂದು ನಿರ್ಲಕ್ಷ್ಯತನದಿಂದ ಈ ರೀತಿಯಾಗಿ ವ್ಯವಸ್ಥೆಯಾಗುತ್ತದೆ. ಕೂಡಲೇ ಮಂತ್ರಿಗಳು ಅದರ ಬಗ್ಗೆ ಗಮನವನ್ನು ಹರಿಸಬೇಕು. ಇವತ್ತಿನದಿವಸ ಶೀಘ್ರವೇ ಬಿದಿರಿ ಗ್ರಾಮೀಣ ಬ್ಯಾಂಕ್‌ನಲ್ಲಿ ಕಟ್ಟಿದಂತಹ ರೈತರಿಗೂ ಶಿಡೆನೂರು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಕಟ್ಟಿರುವಂತಹ ರೈತರಿಗೂ ಅದನ್ನು ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆನ್ನುವಂತಹ ವಿಚಾರದ ಬಗ್ಗೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇನ್ನು ಅಪ್ಪರ್ ತುಂಗಾ ಯೋಜನೆ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬೇಕು ಎಂದರೆ ಇವತ್ತು ಅಪ್ಪರ್ ತುಂಗಾ ಯೋಜನೆ ಪ್ರಾರಂಭವಾಗಿ . . . . .

ಅಧ್ಯಕ್ಷರು:– ಬೇಗ ಮುಗಿಸಿ ಸ್ವಾಮಿ.

ಶ್ರೀ ಓಲೇಕಾರ್ ನೆಹರೂ ಚೆನ್ನಬಸಪ್ಪ:– ಮುಗಿಸುತ್ತೇನೆ. ಅಪ್ಪರ್ ತುಂಗಾ ಯೋಜನೆ ಬಗ್ಗೆ ಹೇಳಬೇಕು ಎಂದರೆ ಸುಮಾರು ವರ್ಷಗಳಿಂದ ಇದು ಪ್ರಾರಂಭವಾಗಿದೆ. ಪ್ರಾರಂಭದಿಂದ ಆಮೆಗತಿಯಲ್ಲಿ ಅದು ಚಾಲನೆಯಲ್ಲಿದೆ. ಸರ್ಕಾರವನ್ನು ಕೇಳಿದರೆ ಇದು ಚಾಲನೆಯಲ್ಲಿದೆ, ಅದಕ್ಕೆ ಸಾಕಷ್ಟು ಹಣವನ್ನು ಕೊಡುತ್ತೇವೆ ಎನ್ನುವಂಥ ಮಾತನ್ನು ಹೇಳುತ್ತಾರೆ. ಆದರೆ ಸುಮಾರು ಎಂಟು–ಒಂಬತ್ತು ವರ್ಷಗಳಿಂದ ಪ್ರಾರಂಭವಾಗಿರತಕ್ಕಂಥ ಕೆಲಸ ಇನ್ನೂ ಅರ್ಧಮಟ್ಟಕ್ಕೂ ಬಂದಿಲ್ಲ. ಟನಲ್‌ಗಳನ್ನು ತೋಡುವಂಥ ಕೆಲಸ ನಿಧಾನವಾಗಿದೆ. ಇನ್ನೂ ನಾಲ್ಕು ಕಿಲೋಮಿಟರ್ ಟನಲ್‌ನ್ನು ತೋಡಬೇಕಾಗಿದೆ. ಆದರೆ 2004ಕ್ಕೆ ಟೆಂಡರ್ ಕೊಟ್ಟಿದ್ದರ ವಾಯದೆ ಮುಗಿಯುತ್ತದೆ. ಆದರೆ 2006ರವರೆಗೆ ಮತ್ತೆ ಅದನ್ನು ಮುಂದುವರೆಸಿದ್ದಾರೆ. ಈ ರೀತಿಯಾಗಿ ಹೆಚ್ಚಿನ ಕಾಲಾವಕಾಶವನ್ನು ಕೊಡುವುದರಿಂದ ಏನಾಗುತ್ತದೆ ಎಂದು ಹೇಳಿದರೆ ಹಣಕಾಸಿನ ಹೊರೆಯಾಗಿ ಆ ಯೋಜನೆಯ ವೆಚ್ಚ ಜಾಸ್ತಿಯಾಗುತ್ತಾ ಹೋಗುತ್ತದೆಯೇ ಹೊರತು ಕೆಲಸ ಆಗುವುದಿಲ್ಲ. ಆ ನಿಟ್ಟಿನಲ್ಲಿ ಸರ್ಕಾರ ಇವತ್ತು ಕೂಡಲೇ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕು. ಟೆಂಡರ್ ಯಾರಿಗೆ ಆಗಿದೆ, ಆ ಗುತ್ತಿಗೆದಾರರ ಮೇಲೆ ಒತ್ತಾಯ ಮಾಡಿ ಕೆಲಸವನ್ನು ಕೂಡಲೇ ತೆಗೆದುಕೊಳ್ಳುವಂಥ ವ್ಯವಸ್ಥೆಯನ್ನು ಮಾಡಬೇಕು. ಪ್ರಾರಂಭಿಕ ಹಂತದಲ್ಲಿ 250 ಕೋಟಿ ರೂ.ಗಳ ಅಂದಾಜು ಇದ್ದಂಥ ಅಪ್ಪರ್ ತುಂಗಾ ಕೆಲಸ ಈಗ ಅದು ಸುಮಾರು 2001–02ರಲ್ಲಿ ಏನಾಗಿದೆ ಎಂದರೆ ಸುಮಾರು 1025 ಕೋಟಿ ರೂ.ಗಳು ಆಗಿದೆ. ಇನ್ನು 2005–06ಕ್ಕೆ ಅದರ ರಿವೈಸ್ಡ್ ಎಸ್ಟಿಮೇಟ್‌ನ್ನು ನಾವು ಮಾಡಿದರೆ ಸುಮಾರು ಎರಡು ಸಾವಿರ ಕೋಟಿ ರೂ.ಗಳವರೆಗೂ ಬರುತ್ತದೆ ಎನ್ನುವಂಥ ವಿಚಾರ ಇದೆ. ಆ ನಿಟ್ಟಿನಲ್ಲಿ ಸರ್ಕಾರ ಒತ್ತಾಯವನ್ನು ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಕೂಡಲೇ ಅಪ್ಪರ್ ತುಂಗಾ ಕೆಲಸ ಚಾಲನೆಯಾಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ಸರ್ಕಾರ ಇವತ್ತು ಏನು ಮಾಡಿದೆ ಎಂದರೆ ಸುತ್ತಲೂ ಇರುವಂತಹ ಎಲ್ಲಾ ತಾಲ್ಲೂಕುಗಳಿಗೆ ನೀರಿನ ವ್ಯವಸ್ಥೆಯನ್ನು ಮಾಡಿದೆ.

ಅಧ್ಯಕ್ಷರು:– ರೀ, ಓಲೇಕಾರ್ ಅವರೇ, ದಯಮಾಡಿ ಬೇಗ ಮುಗಿಸಿಯಪ್ಪ. ಇನ್ನು ಎಷ್ಟು ಹೊತ್ತು ತೆಗೆದುಕೊಳ್ಳುತ್ತೀರಿ? ಹೊಸ ಸದಸ್ಯರು ನಿಮ್ಮ ಹಾಗೆ ಮಾತನಾಡಬಾರದೇನು? ನೀವು ಶುರುಮಾಡಿ ಹದಿನೈದು ನಿಮಿಷವಾಯಿತು.

ಶ್ರೀ ಓಲೇಕಾರ್ ನೆಹರೂ ಚೆನ್ನಬಸಪ್ಪ:– ಆದರೆ ಬ್ಯಾಡಗಿ ಮೀಸಲು ಕ್ಷೇತ್ರವನ್ನು ಈ ಯೋಜನೆಯಲ್ಲಿ ಬಿಡಲಾಗಿದೆ. ಇವತ್ತು ಮೀಸಲು ಕ್ಷೇತ್ರಗಳಿಗೆ ವಿಶೇಷ ಆದ್ಯತೆಯನ್ನು ಕೊಡದೆ ಇರುವ ಅವಕಾಶವನ್ನು ಸಹ ಕಸಿದುಕೊಳ್ಳುವಂಥ ಕೆಲಸವನ್ನು ಸರ್ಕಾರ ಮಾಡಿದೆ. ಸರ್ಕಾರ ಕೂಡಲೇ ಇದರ ಬಗ್ಗೆ ಗಮನವನ್ನು ಹರಿಸಬೇಕು. ಅಪ್ಪರ್ ತುಂಗಾ ಯೋಜನೆ ಅಡಿಯಲ್ಲಿ ಬ್ಯಾಡಗಿ ತಾಲ್ಲೂಕನ್ನು ಸಹ ಸೇರಿಸಬೇಕೆಂದು ನಾನು ಹೇಳುತ್ತೇನೆ. ಕೇವಲ ಅದು ಎತ್ತರದಲ್ಲಿದೆ ಎನ್ನುವಂಥ ವಿಚಾರದಲ್ಲಿ ಅದನ್ನು ಕೈಬಿಡಲಾಗಿದೆ. ಆ ನಿಟ್ಟಿನಲ್ಲಿ ಇವತ್ತಿನ ದಿವಸ ಸರ್ಕಾರ ಕೂಡಲೇ ಕ್ರಮವನ್ನು ತೆಗೆದುಕೊಂಡು ಎತ್ತರದಲ್ಲಿರುವಂತಹ ಬ್ಯಾಡಗಿ ಕ್ಷೇತ್ರಕ್ಕೆ ಲಿಫ್ಟ್ ಮೂಲಕ ನೀರನ್ನು ಒದಗಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ನಮ್ಮಲ್ಲಿ ಇರುವವರು ಹಿಂದುಳಿದ ರೈತರು. ಇವತ್ತು ಮೀಸಲು ಕ್ಷೇತ್ರವೆಂದರೆ ಹಿಂದುಳಿದ ಜನಾಂಗವೇ ಜಾಸ್ತಿ ಇರುತ್ತದೆ. ಹಿಂದುಳಿದ ಜನಾಂಗ ಜಾಸ್ತಿ ಇರುವಂತಹ ಕ್ಷೇತ್ರಗಳಿಗೆ ಇವತ್ತು

ಅನ್ಯಾಯವನ್ನು ಮಾಡಿದರೆ ಅದು ಸರಿಯಾದಂಥ ಕ್ರಮ ಅಲ್ಲ. ಕೂಡಲೇ ಆ ಹಿಂದುಳಿದ ರೈತರು ಸಹ ನೀರನ್ನು ಪಡೆಯುವಂಥ ವ್ಯವಸ್ಥೆ ಆಗಬೇಕು. ಅದಕ್ಕೆ ಸರ್ಕಾರ ಆದ್ಯತೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇನ್ನು ಪೊಲೀಸ್ ವ್ಯವಸ್ಥೆ ಬಗ್ಗೆ ಒಂದು ಮಾತನ್ನು ಹೇಳಬೇಕು ಎಂದರೆ . . . . .

ಅಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ. ಆಗಲೇ ಹದಿನಾರು ನಿಮಿಷ ಆಯಿತು. ಇದೇ ತರಹ ಆದರೆ ಹೊಸ ಸದಸ್ಯರಿಗೆ ಯಾರಿಗೆ ಅವಕಾಶ ಕೊಡುವುದು? ನಿಮ್ಮ ನಾಯಕರು ಇಲ್ಲಿ ಹೇಳುತ್ತಲೇ ಇರುತ್ತಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಓಲೇಕಾರ್ ನೆಹರೂ ಚೆನ್ನಬಸಪ್ಪ:– ಕೊನೆಯ ಮಾತನ್ನು ಹೇಳಿಬಿಡುತ್ತೇನೆ.

ಅಧ್ಯಕ್ಷರು:– ಬೇರೆಯವರು ಮಾತನಾಡಬಾರದೇನು? ನೀವು ಮಾತನಾಡಿದ ಮೇಲೆ ಅದು ಮುಕ್ತಾಯವಾಗಬೇಕಾ?

ಶ್ರೀ ಓಲೇಕಾರ್ ನೆಹರೂ ಚೆನ್ನಬಸಪ್ಪ:– ಕೇವಲ ಸುಳ್ಳು ಕೇಸುಗಳನ್ನು ಹಾಕತಕ್ಕಂಥ ವ್ಯವಸ್ಥೆ ಈ ರಾಜ್ಯದಲ್ಲಿ ಆಗಿದೆ. ಇವತ್ತು ಏನಾಗಿದೆ ಎಂದರೆ ಅನೇಕ ಕೇಸುಗಳನ್ನು ರೈತರ ಮೇಲೆ ಹಾಕಿದ್ದಾರೆ, ವಿದ್ಯಾರ್ಥಿಗಳ ಮೇಲೆ ಹಾಕಿದ್ದಾರೆ. ಆದರೆ ನಿಜವಾದ ಕೇಸುಗಳ ಬಗ್ಗೆ ಪೊಲೀಸರು ಕೋರ್ಟಿಗೆ ಚಾರ್ಜ್‌ಶೀಟ್ ಹಾಕುವುದಕ್ಕೆ ತಯಾರಿಲ್ಲ. ಅದರ ಬಗ್ಗೆ ಅವರು ಮೀನಾವೇಷ ಎಣಿಸುವಂಥಾದ್ದು ಇದೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರುವಂಥ ಕಾಟೇನಹಳ್ಳಿ ಗ್ರಾಮದಲ್ಲಿ ಇವತ್ತು ಪರಿಶಿಷ್ಟ ವರ್ಗದ ಒಬ್ಬ ಮಹಿಳೆಯ ಕೊಲೆಯಾಗಿದೆ. ಕೊಲೆಯಾಗಿರುವಂಥ ಸಂದರ್ಭದಲ್ಲಿ ಇವತ್ತಿನದಿವಸ ಪೊಲೀಸರು ಅದನ್ನು 307ರ ಮೇಲೆ ಕೇಸನ್ನು ದಾಖಲು ಮಾಡಿಕೊಂಡಿದ್ದಾರೆ. ಪುನಃ ಆಸ್ಪತ್ರೆಯಲ್ಲಿ ಆ ಮಹಿಳೆ ಸತ್ತು ಹೋದರೆ ಅದನ್ನು 302ಕ್ಕೆ ಕನ್ವರ್ಟ್ ಮಾಡಿಕೊಂಡಿಲ್ಲ. ಕಾರಣವೇನೆಂದರೆ ಹಣದ ಅಮಿಷದಿಂದ, ಹಣವನ್ನು ಪಡೆದು ಆ ಕೇಸನ್ನು ಮುಗಿಸಲಿಕ್ಕೆ ಏನು ಮಾಡಿದ್ದಾರೆ ಎಂದರೆ, ಅಲ್ಲಿಯ ವೈದ್ಯಾಧಿಕಾರಿಗಳೂ ಸಹಿತ ಇವತ್ತು ಆ ಆಸ್ಪತ್ರೆಯಲ್ಲಿ ಸತ್ತಂಥ ಮಹಿಳೆ ಬಗ್ಗೆ ಅದು ಸಹಜ ಸಾವು ಎಂದು ಹೇಳಿ ದೃಢೀಕರಣ ಪತ್ರವನ್ನು ಕೊಟ್ಟಿದ್ದಾರೆ. ಇಂತಹ ಒಂದು ಅವ್ಯವಸ್ಥೆ ಪೊಲೀಸ್ ಇಲಾಖೆಯಲ್ಲಿ ಆಗಿದೆ. ಇದರಿಂದ ಅನೇಕ ಸಮಸ್ಯೆಗಳು ಗ್ರಾಮೀಣ ಪ್ರದೇಶಗಳಲ್ಲಿ ಇವತ್ತು ಉದ್ಭವವಾಗುತ್ತವೆ. ಈ ನಿಟ್ಟಿನಲ್ಲಿ ಸರ್ಕಾರ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕು, ಹೆಚ್ಚಿನ ಗಮನವನ್ನು ಹರಿಸಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

9 ಪ್ರಕಟಣೆ

6) ಮಾನ್ಯ ಸಕ್ಕರೆ ಸಚಿವರಿಂದ ಮಾನ್ಯ ಸದಸ್ಯರುಗಳಿಗೆ ಭೋಜನ ಕೂಟದ ಏರ್ಪಾಡು

ಅಧ್ಯಕ್ಷರು:– ಈಗ ಒಂದು ಪ್ರಕಟಣೆ. ಮಾನ್ಯ ಸಕ್ಕರೆ ಸಚಿವರಾಗಿರತಕ್ಕಂಥ ಶ್ರೀಅಮರೇಗೌಡರು ಮಾನ್ಯ ಸದಸ್ಯರುಗಳಿಗೆ ಬಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಿದ್ದಾರೆ. ಅದಕ್ಕೆ ಎಲ್ಲಾ ಮಾನ್ಯ ಸದಸ್ಯರು ದಯಮಾಡಿಸಬೇಕೆಂದು ಅವರು ವಿನಂತಿ ಮಾಡಿದ್ದಾರೆ. ಈಗ ಸದನವನ್ನು ಮಧ್ಯಾಹ್ನ 2–40ರ ವರೆಗೆ ಮುಂದೂಡಿದ್ದೇನೆ.